# ಕರ್ನಾಟಕ ವಿಕಾಸ

# Karnataka Vikas

ಏಪ್ರಿಲ್ 2016
April 2016




ಕರ್ನಾಟಕ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತ (KRIDL) ಸಂಸ್ಥೆಯ ಮೂಲಕ ನಿರ್ಮಿಸಿದ 1000 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:29.03.2016ರಂದು ಲೋಕಾರ್ಪಣೆ ಮಾಡಿದರು.



ಯುಗಾದಿ ಹಬ್ಬದ ಶುಭಾಶಯಗಳು

**ದಿನಾಂಕ: 21.03.2016ರಂದು ಗ್ರಾಮೀಣ ಕುಡಿಯುವ ನೀರು ಯೋಜನೆ ಅಧಿಕಾರಿ/ಸಿಬ್ಬಂದಿಗಳಿಗೆ ಇಸ್ರೋ ವಿಜ್ಞಾನಿಗಳು 'ರೀಜನಲ್ ರಿಮೋಟ್ ಸೆನ್ಸಿಂಗ್ ಸೆಂಟರ್'ನಲ್ಲಿ ನೀರಿನ ಮೂಲ ಪತ್ತೆ ಹಚ್ಚುವ ಕುರಿತು ನಡೆದ ತರಬೇತಿಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉದ್ಘಾಟಿಸಿದರು.**






# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

| | | | |
|---|---|---|---|
| ಏಪ್ರಿಲ್ 2016 | ಸಂಪುಟ | : | 57 |
| | Volume | : | 57 |
| April 2016 | ಸಂಚಿಕೆ | : | 05 |
| | Issue | : | 05 |


## ಈ ಸಂಚಿಕೆಯೊಳಗೆ


| | | |
|---|---|---|
| 5. | ವರದಿ | – ಬಸವರಾಜ ಕಂಬಿ |
| 7. | ಲೇಖನ | – ಡಾ॥. ಬಿ.ಎಫ್.ಹುಲಗೂರ<br>– ಎಸ್. ದಕ್ಷಿಣಾಮೂರ್ತಿ |
| 14. | ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ | – ಹೆಚ್ ಆರ್ ರಾಜೇಶ್ |
| 20. | ಯಶೋಗಾಥೆ | – ಮಲ್ಲಿಕಾರ್ಜುನ ಪಿ. ಎಸ್.<br>– ಪ್ರಶಾಂತ್. ಎನ್<br>– ಡಿ. ವಿ. ಅಂಗೂರ<br>– ಎನ್. ಉಮಾದೇವಿ<br>– ನಾಗೇಂದ್ರಕುಮಾರ ಜೆ.ಟಿ. |
| 34. | ಕವಿಯಕ್ಷಪ್ರಶ್ನೆ | – ವಿ. ಶ್ರೀನಿವಾಸ |
| 35. | ಕಾವ್ಯ ವಿಕಾಸ | – ಕೊದ್ದಡ್ಡಿ ಮಹೇಶ್ |
| 36. | ಪಂಚತಂತ್ರ ವರದಿ | |
| 37. | ಸಕಾಲ ವರದಿ | |
| 38. | ಸುತ್ತೋಲೆ | |





ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ. ರಾಜ್ )
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**
ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**



**ವಾರ್ಷಿಕ ಚಂದಾ**

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಛೇರಿ ವಿಳಾಸ**

ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com



**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

## ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಕರ್ನಾಟಕ ವಿಕಾಸ ಮಾಸ ಪತ್ರಿಕೆ ವಾಚಕ ವೃಂದಕ್ಕೆಲ್ಲ ಅರಿವಿನ ಕೊಡುಗೆಯನ್ನು ನೀಡಿ ಸುಖ ಸಮೃದ್ಧಿಯ ಹಾದಿಯಲ್ಲಿ ಮುನ್ನಡೆಸಲು ಸಹಕಾರಿಯಾಗಿದೆ. ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ಸಾಕಾರಗೊಳಿಸಲು ಸನ್ನದ್ದವಾಗಿದೆ. ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ 'ಕರ್ನಾಟಕ ಪಂಚಾಯತ್ ರಾಜ್ ಎರಡನೇ ತಿದ್ದುಪಡಿ ಅಧಿನಿಯಮ 2015 (2015ರ ಕರ್ನಾಟಕ ಅಧಿನಿಯಮ ಸಂಖ್ಯೆ:44) ಎಂಬ ವರದಿಯ ಲೇಖನ ಮಾಹಿತಿ ಪೂರ್ಣವಾಗಿತ್ತು. ನಾಡಿನ ಜನ ಸಮೂಹಕ್ಕೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯ (2015)ರ ತಿದ್ದುಪಡಿಯ ವಿಷಯವನ್ನು ವಿಸ್ತೃತವಾಗಿ ಸರಳ ಶೈಲಿಯಲ್ಲಿ ವಿವರಿಸಲು ಸಶಕ್ತವಾಯಿತು. ಮಾಶಾಳ ಖಾತ್ರಿ ಇಟ್ಟಿಗೆ ಬಲು ಗಟ್ಟಿ ಎಂಬ ಲೇಖನ ಗ್ರಾಮೀಣ ಬಡ ಕೂಲಿಕಾರರಿಗೆ ಹಾಗೂ ಪಟ್ಟಣಕ್ಕೆ ವಲಸೆ ಹೋಗಬೇಕೆನ್ನುವ ಜನರಿಗೆ ಭರವಸೆಯ ಆಶಾಕಿರಣವಾಗಿದೆ. ಪತ್ರಿಕೆಯಲ್ಲಿನ ಯಶಸ್ವಿ ಜಲ ಮರುಪೂರಣ ಘಟಕ ನಿರ್ಮಾಣ ಕಾಮಗಾರಿ, ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಠಾನದಲ್ಲಿ ರೋಜ್‌ಗಾರ್ ದಿವಸದ ಪಾತ್ರ ಎಂಬ ಲೇಖನಗಳು ತುಂಬಾ ಪರಿಣಾಮಕಾರಿಯಾಗಿವೆ.

**ಶ್ರೀ ಬಸವರಾಜ ಹೂಗಾರ,**

ಲೇಖಕ, ಹಿರೇಸಿಂಗನಗುತ್ತಿ, ಮುಕ್ಕಾಂ ಅಂಚೆ, ಹುನಗುಂದ, ಬಾಗಲಕೋಟೆ 587154.

ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಸಕಾಲಕ್ಕೆ ನಮ್ಮ ಕಚೇರಿಗೆ ಬಂದು ತಲುಪುತ್ತಿರುವುದು ತುಂಬಾ ಸಂತೋಷವಾಗಿದೆ. 2015ರ ಕರ್ನಾಟಕ ಅಧಿನಿಯಮ ಸಂಖ್ಯೆ 44 ನ್ನು ಜಾರಿಗೆ ತಂದಿರುವುದು ಸಾರ್ವಜನಿಕರ, ಆಡಳಿತಾತ್ಮಕ ಅಧಿಕಾರಿಗಳ ಗಮನ ಸೆಳೆದಿದೆ. 'ಅಂತರ್ಜಲ ಮೂಲ ಪತ್ತೆಗೆ ಇಸ್ರೋ ತಂತ್ರಜ್ಞಾನ ಬಳಕೆ ನೀರು ನೈರ್ಮಲ್ಯ & ಸ್ವಚ್ಛತೆ ಬಗ್ಗೆ ಅರಿವು ಮೂಡಿಸಿದೆ ಹಾಗೂ ಎಲ್.ಎಸ್.ದಿನೇಶ್‌ರವರ ಗ್ರಾಮಗಳ ಗುಣಾತ್ಮಕ ಬದಲಾವಣೆಯತ್ತ ಕರ್ನಾಟಕ ಎಂಬ ಲೇಖನವು ತುಂಬಾ ಚೆನ್ನಾಗಿ ಮೂಡಿಬಂದಿದೆ. ಕರ್ನಾಟಕ ವಿಕಾಸ ಮಾಸ ಪತ್ರಿಕೆಯಲ್ಲಿ ಲೇಖನ, ಯಶೋಗಾಥೆಗಳು, ಸರ್ಕಾರದ ನಡವಳಿ, ಆದೇಶ ತುಂಬಾ ಉತ್ತಮವಾಗಿ ಪ್ರಕಟವಾಗಿದೆ.

**ಶ್ರೀ ಅಣ್ಣೂರು ಅಪ್ಪಾಜಿ ಎ.ಎಂ,**

ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು & ಗ್ರಂಥಪಾಲಕರು,
ಅಣ್ಣೂರು ಗ್ರಾಮ ಪಂಚಾಯತಿ, ಮದ್ದೂರು ತಾಲ್ಲೂಕು, ಮಂಡ್ಯ 571422.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ವಿದೇಯಕ ತಿದ್ದುಪಡಿಗಳನ್ನು ಸ್ವಾಗತಿಸಲು ಸಂತಸವಾಗುತ್ತಿದೆ. ಆದರೆ ಅವುಗಳ ಅನುಸರಣೆಯು ಮಹತ್ವದ ಪಾತ್ರ ವಹಿಸುತ್ತದೆ. ಆಯ್ಕೆಗೊಂಡ ಜನ ಪ್ರತಿನಿಧಿಗಳಿಗೆ ಸೂಕ್ತ ತರಬೇತಿ ನೀಡಿ ಹಕ್ಕು ಕರ್ತವ್ಯ ಕುರಿತು ಪ್ರಜ್ಞೆ ಮೂಡಿಸುವುದೆಂದು ನನ್ನ ಅನಿಸಿಕೆ. ಪಂಚಾಯತ್ ರಾಜ್ ವಿದೇಯ ತಿದ್ದುಪಡಿಗಳು ಕಾಗದದ ಕುದುರೆಗಳಾಗಬಾರದು. ವರದಿ ಲೇಖನ, ಚಿಂತನೆ, ಯಶೋಗಾಥೆ, ಸಕಾಲ ವರದಿ, ಸುತ್ತೋಲೆಗಳು ಚೆನ್ನಾಗಿ ಮೂಡಿಬರುತ್ತಿವೆ.

**ಶ್ರೀ ಹೆಚ್.ಬಿ.ರಾಮಕೃಷ್ಣಯ್ಯ**

ನಂ.176, ವಿನಾಯಕ ನಗರ, ಸೊಂಡರಕೊಪ್ಪ ಮುಖ್ಯರಸ್ತೆ,
ನೆಲಮಂಗಲ, ಬೆಂಗಳೂರು ಗ್ರಾಮಾಂತರ.

ವರದಿ

# ಕರ್ನಾಟಕವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವಾಗಿಸುವತ್ತ ದಾಪುಗಾಲು

– ಬಸವರಾಜ ಕಂಬಿ

ಗ್ರಾಮೀಣ ಕರ್ನಾಟಕವನ್ನು 2018ರ ಅಕ್ಟೋಬರ್ 2 ರೊಳಗಾಗಿ ಬಯಲು ಬಹಿರ್ದೆಸೆ ಮುಕ್ತ ರಾಜ್ಯವಾನ್ನಾಗಿಸಲು ದಿಟ್ಟ ಹೆಜ್ಜೆಯನ್ನು ಈಗಾಗಲೇ ಇಡಲಾಗಿದೆಯೆಂದು ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್ ಕೆ ಪಾಟೀಲರವರು ಹೇಳಿದರು.



ಕಳೆದ ಏಳು ತಿಂಗಳ ಅವಧಿಯಲ್ಲಿ ಒಂದು ಲಕ್ಷ ಶೌಚಾಲಯಗಳನ್ನು ನಿರ್ಮಿಸಿದ ಬೆಳಗಾವಿ ಜಿಲ್ಲೆಯ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಸನ್ಮಾನಿಸಿ ಮಾತನಾಡುತ್ತಿದ್ದ ಅವರು ಈ ಸರ್ಕಾರ ಅಧಿಕಾರ ವಹಿಸಿಕೊಂಡಾಗ 50 ಲಕ್ಷ ಶೌಚಾಲಯ ನಿರ್ಮಿಸುವ ಗುರಿ ಹೊಂದಲಾಗಿತ್ತು, ಈಗಾಗಲೇ ವಿವಿಧ ಗ್ರಾಮಗಳಲ್ಲಿ 22 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಬರುವ ಹಣಕಾಸು ವರ್ಷದಲ್ಲಿ 12 ಲಕ್ಷ ಶೌಚಾಲಯಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆಯೆಂದು ಸಚಿವರು ಹೇಳಿದರು.

ವಿವಿಧ ಗ್ರಾಮಗಳಲ್ಲಿ 22 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಬರುವ ಹಣಕಾಸು ವರ್ಷದಲ್ಲಿ 12 ಲಕ್ಷ ಶೌಚಾಲಯಗಳನ್ನು ನಿರ್ಮಿಸುವ ಗುರಿ ಹೊಂದಲಾಗಿದೆಯೆಂದು ಸಚಿವರು ತಿಳಿಸಿದರು.

ಬೆಳಗಾವಿ ಜಿಲ್ಲೆಯಲ್ಲಿ ಕಳೆದ 7 ತಿಂಗಳ ಅವಧಿಯಲ್ಲಿ 1 ಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ. 30 ಗ್ರಾಮ ಪಂಚಾಯತಿಗಳ 103 ಗ್ರಾಮಗಳನ್ನು ಬಯಲು ಮಲವಿಸರ್ಜನೆ ಮುಕ್ತ ಗ್ರಾಮಗಳನ್ನಾಗಿ

ಉಪನಿರ್ದೇಶಕರು, (ಸ್ವಲುಕಾ), ಮತ್ತು ಐಇಸಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ



ಮಾಡಲಾಗಿದ್ದು, ಇದೊಂದು ದಾಖಲೆಯ ವಿಷಯವಾಗಿದೆಯೆಂದು ಹೇಳಿದ ಸಚಿವರು ಇದಕ್ಕಾಗಿ ಶ್ರಮಿಸಿದ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳನ್ನು ಅಭಿನಂದಿಸಿದರು.

ರಾಜ್ಯದಲ್ಲಿ ಶೌಚಾಲಯ ನಿರ್ಮಿಸುವುದರ ಜೊತೆಗೆ ಬಚ್ಚಲು ಮನೆಗಳನ್ನು ನಿರ್ಮಿಸುವ 'ಗೌರವ' ಯೋಜನೆಯೊಂದನ್ನು ಜಾರಿಗೊಳಿಸಲಾಗಿದೆಯೆಂದು ಹೇಳಿದ ಸಚಿವರು ಕರ್ನಾಟಕವನ್ನು 'ಚೆಲುವ ಕರ್ನಾಟಕ'ವನ್ನಾಗಿ ಮಾಡಲು ರಾಜ್ಯ ಸರ್ಕಾರವು ಸಂಕಲ್ಪ ತೊಟ್ಟಿದ್ದು, ಗ್ರಾಮೀಣ ಪ್ರದೇಶದ ಜನರು ಗೌರವಯುತವಾಗಿ ಹಾಗೂ ಗುಣಮಟ್ಟದ ಜೀವನವನ್ನು ನಡೆಸುವಂತಾಗಬೇಕೆಂದು ಸಚಿವರು ಹೇಳಿದರು.

ಸಮಾರಂಭದಲ್ಲಿ ಮಾತನಾಡಿದ ಲೋಕಸಭಾ ಸದಸ್ಯರಾದ ಶ್ರೀ ಸುರೇಶ ಅಂಗಡಿ ಅವರು ಈ ಸಮಾರಂಭವು ಒಂದು ವಿಶೇಷ ಸಮಾರಂಭವಾಗಿದ್ದು ನಿಜವಾಗಿಯೂ ನಮಗೆ ಸಂತೋಷವಾಗಿಯೆಂದು ಹೇಳಿದರು. ಶಾಸಕರಾದ ಶ್ರೀ ಸಂಜಯ ಪಾಟೀಲ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಮಾರಂಭದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಸುಭಾಷ್ ಚಂದ್ರ, ಚಿಕ್ಕೋಡಿ, ಸದಲಗಾ ವಿಧಾನಸಭೆ ಸದಸ್ಯರಾದ ಶ್ರೀ ಗಣೇಶ ಹುಕ್ಕೇರಿ ಹಾಗೂ ಜಿಲ್ಲಾಧಿಕಾರಿಗಳಾದ ಶ್ರೀ ಎನ್ ಜಯರಾಮ ಅವರು ಉಪಸ್ಥಿತರಿದ್ದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಬಗಾದಿ ಗೌತಮ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪ ಕಾರ್ಯದರ್ಶಿಗಳಾದ ಶ್ರೀ ಎಸ್. ಬಿ. ಮುಳ್ಳಳ್ಳಿ ಅವರು ಸ್ವಾಗತಿಸಿದರು.

ಲೇಖನ

# ಜಲ ಸಂವರ್ಧನೆ ಯೋಜನೆಯಿಂದ – ರೈತರ ಸ್ವಾವಲಂಬನೆಯತ್ತ ದಾಪುಗಾಲು



ಡಾ||. ಬಿ.ಎಫ್. ಹುಲಗೂರ

ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆಗಳು ಅನೇಕ ರೈತರ ಕಣ್ಣು ತೆರೆಸುವುದರಲ್ಲಿ ಯಶಸ್ವಿಯಾಗಿದೆ.

ಕರ್ನಾಟಕದಲ್ಲಿ ಕೆರೆ ನೀರಾವರಿಯನ್ನು ತಲೆಮಾರುಗಳಿಂದ ರೈತರು ತಮ್ಮ ಜೀವನೋಪಾಯವನ್ನಾಗಿ ಅಳವಡಿಸಿಕೊಂಡು ಬಂದಿದ್ದಾರೆ. ಇತ್ತೀಚಿನ (2002) ಗಣತಿಯ ಪ್ರಕಾರ ಕರ್ನಾಟಕದಲ್ಲಿ 36,672 ಕೆರೆಗಳು ಅಸ್ತಿತ್ವದಲ್ಲಿದ್ದು, 72,000 ಹೆಕ್ಟೇರಿಗೆ (10.43% of the registered command (6,90,000 ha) ನೀರಾವರಿ ಒದಗಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ 2001–02ರ ಸಾಲಿನಿಂದ ಸಮುದಾಯ ಸಹಭಾಗಿತ್ವದ ಮೂಲಕ ಕೆರೆ ನಿರ್ವಹಣಾ ಯೋಜನೆಯನ್ನು ವಿಶ್ವ ಬ್ಯಾಂಕಿನ ಹಣಕಾಸು ನೆರವಿನೊಂದಿಗೆ ಅನುಷ್ಠಾನಗೊಳಿಸುತ್ತಿದ್ದು, ಎರಡು ಹಂತದಲ್ಲಿ, ಕೆರೆಯ ನೀರಿನ ಸಫಲ ಬಳಕೆಗಾಗಿ ಯೋಜನೆ ಹಾಕಿಕೊಂಡಿತು. ಈ ನಿಟ್ಟಿನಲ್ಲಿ ಎರಡನೆ ಹಂತದಲ್ಲಿ (2009–12) ಕೃಷಿ ಚಟುವಟಿಕೆಯಡಿ ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಹಮ್ಮಿಕೊಂಡು ಯಶಸ್ವಿಗೊಳಿಸಿದೆ.

ಜಲ ಸಂವರ್ಧನೆ ಯೋಜನೆಯಡಿಯಲ್ಲಿ ರಾಜ್ಯದ ಎರಡು ಕೃಷಿ ವಿಶ್ವವಿದ್ಯಾನಿಲಯಗಳನ್ನು ಕೃಷಿ ಸಲಹೆಗಾರರಾಗಿ ನೇಮಿಸಿ, ಅವರಿಂದ ಕೃಷಿಯಲ್ಲಿ ಕೆರೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಂಡು ಪ್ರತಿಯೊಂದು ಹನಿ ನೀರು ಹಾಗೂ ಪ್ರತಿಯೊಂದು ಘಟಕ ಪೋಷಕಾಂಶದಿಂದ ಗರಿಷ್ಠ ಪ್ರಮಾಣದಲ್ಲಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ದಿಸೆಯಲ್ಲಿ ಅತ್ಯಂತ ಫಲಪ್ರದವಾದದ್ದು ಸಮಗ್ರ ಕೃಷಿ ಪದ್ಧತಿ.

**ಸಮಗ್ರ ಕೃಷಿ ಪದ್ಧತಿಯ ವೈಶಿಷ್ಟ್ಯ:** ಕೃಷಿ ಯೋಜನೆಯಡಿಯಲ್ಲಿ – ಆಹಾರ ಬೆಳೆ, ತರಕಾರಿ, ಹೂವು, ಹಣ್ಣು, ಮೇವಿನ ಬೆಳೆ, ಕಿಚನ್ ಗಾರ್ಡನ್, ಅರಣ್ಯ ಬೆಳೆಗಳ ಜೊತೆಗೆ ಹೈನುಗಾರಿಕೆ, ಕೋಳಿ, ಕುರಿ, ಆಡು ಸಾಕಾಣಿಕೆ, ಮೀನುಗಾರಿಕೆ, ಎರೆಹುಳು ಗೊಬ್ಬರ ತಯಾರಿಕೆ ಉದ್ಯೋಗಗಳ ಜೋಡಣೆ ಅಲ್ಲದೆ ಒಂದೆರೆಡು ಕಡೆ ಕೃಷಿ ಹೊಂಡ, ಜೈವಿಕ ಅನಿಲ ತೊಟ್ಟಿ ಸಹ ತೆಗೆದುಕೊಳ್ಳಲಾಗಿದೆ. ಈ ಯೋಜನೆಯಡಿಯಲ್ಲಿ ಅಚ್ಚುಕಟ್ಟು ಪ್ರದೇಶದ ಒಂದು ಹೆಕ್ಟೇರು ಜಮೀನಿನಲ್ಲಿ ನಾಲ್ಕು ಹಂಗಾಮಿನಲ್ಲಿ ಬೆಳೆಗಳ ಜೊತೆಗೆ ಪಶುಸಂಗೋಪನೆಯನ್ನು ಅಳವಡಿಸಿದ್ದರಿಂದ ರೈತನ ಆದಾಯ ನಾಲ್ಕು ಪಟ್ಟು ಹೆಚ್ಚಾಗಿದ್ದು, ಈ ಯೋಜನೆಯ ಮಹತ್ವದ ಕೊಡುಗೆಯೆಂದು ಹೆಮ್ಮೆಯಿಂದ ಹೇಳಬಹುದು.

ದಕ್ಷಿಣ ಕರ್ನಾಟಕ ಭಾಗದ ಒಂಬತ್ತು ಜಿಲ್ಲಾ ಯೋಜನಾ ಘಟಕಗಳಾದ ಕೋಲಾರ, ಚಿಂತಾಮಣಿ, ತುಮಕೂರು, ಚಿತ್ರದುರ್ಗ, ದಾವಣಗೆರೆ,

(ನಿವೃತ್ತ ಮಹಾಪ್ರಬಂಧಕರು, ನಬಾರ್ಡ್) ಕೃಷಿ ತಜ್ಞರು, ಜ.ಸಂ.ಯೋ.ಸಂ, ಬೆಂಗಳೂರು



ಚಿಕ್ಕಮಗಳೂರು, ಅರಸೀಕೆರೆ, ಶಿವಮೊಗ್ಗ ಮತ್ತು ಶಿಕಾರಿಪುರಗಳಲ್ಲಿ ತಲಾ ಒಂದರಂತೆ ಒಂಬತ್ತು ಸಮಗ್ರ ಕೃಷಿ ಯೋಜನೆಗಳನ್ನು ಅಳವಡಿಸಿ ಇದರಿಂದಾಗುವ ಲಾಭಗಳನ್ನು ಒಂಬತ್ತು ರೈತರ ಹೊಲಗಳಲ್ಲಿ ಪ್ರತ್ಯಕ್ಷವಾಗಿ ತೋರಿಸಲಾಯಿತು. ಆದುದರಿಂದ ಈ ಪದ್ಧತಿ ಗರಿಷ್ಠ ಆದಾಯ, ಉದ್ಯೋಗಾವಕಾಶ, ಸಣ್ಣ, ಅತಿ ಸಣ್ಣ ರೈತರ ಬವಣೆಯನ್ನು ನೀಗಿಸುವಲ್ಲಿ ಸಹಕಾರಿಯಾಗಿದೆ. ಅಲ್ಲದೆ ಈ ಯೋಜನೆಯಲ್ಲಿ ರಾಸಾಯನಿಕಗಳ ಬಳಕೆ ಅತಿ ಕಡಿಮೆಯಾಗಿದ್ದರಿಂದ ಪರಿಸರ ಸ್ನೇಹಿಯೆಂದೂ ಬಣ್ಣಿಸಬಹುದು.

**ಯೋಜನೆಯ ರೂಪುರೇಶೆಗಳು:** ಪ್ರಾತ್ಯಕ್ಷಿಕೆಗಳನ್ನು ಖಚಿತವಾಗಿ ದೊರೆಯುವ ನೀರಾವರಿ ಹೊಂದಿದ ಸಣ್ಣ/ಮಧ್ಯಮ ವರ್ಗದ ಪ್ರಗತಿ ಪರ ರೈತರ ಹೊಲಗಳಲ್ಲಿ, ಅವರಲ್ಲಿರುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಮಾಡಲಾಯಿತು. ಇದರೊಂದಿಗೆ ಆಹಾರ (food), ಉರುವಲು (fuel), ಮೇವು (fodder), ಹಣ್ಣು (fruits), ನಾರು (fiber), ಹೂ (flower) ಮತ್ತು ಮೀನು (fish) ಗಳನ್ನೊದಗಿಸ ಬಹುದಾದ ತಾಂತ್ರಿಕತೆ ಅಳವಡಿಸಲಾಗಿದೆ. ಹೊಸ ತಾಂತ್ರಿಕತೆಗಳನ್ನು ಅಳವಡಿಸುವಲ್ಲಿ ಆಸಕ್ತಿಯುಳ್ಳ ಪ್ರಗತಿಪರ ರೈತರನ್ನು ಈ ಯೋಜನೆಯಲ್ಲಿ ಆರಿಸಲಾಯಿತು. ಸಮಗ್ರ ಕೃಷಿಯಲ್ಲಿಯ ವಿವಿಧ ಅಂಗಾಂಶಗಳ ಬಗೆಗೆ, ಅವುಗಳಿಂದಾಗುವ ವಿಶೇಷ ಪ್ರಯೋಜನ, ಉಪಯುಕ್ತತೆ, ಲಾಭಗಳ ಬಗೆಗೆ ಸುದೀರ್ಘವಾದ ತರಬೇತಿಗಳನ್ನು ಹಂತ ಹಂತವಾಗಿ ನೀಡಲಾಯಿತು. ಮೊದಲ ವರ್ಷದ ಎರಡು ಹಂಗಾಮಿನಲ್ಲಿ ಬೆಳೆಗಳಿಗೆ ಹೆಚ್ಚಿನ ಆದ್ಯತೆ ಕೊಡಲಾಯಿತು. ಹೊಲದ ಒಡ್ಡಿನ ಮೇಲೆ ತೆಂಗು ಇತ್ಯಾದಿ ಮರಗಳ ಸಸಿಗಳನ್ನು ನೆಡಲಾಯಿತು. ಮೂರನೆಯ ಹಂಗಾಮಿನೊಂದಿಗೆ ಹೈನುಗಾರಿಕೆಗಾಗಿ ಸಂಕರಿತ ತಳಿಯ ಹಸುಗಳನ್ನು ಕೊಡಲಾಯಿತು, ಕುರಿ (5+1) ಮತ್ತು ಗಿರಿರಾಜ ಹಾಗೂ ಗಿರಿರಾಣಿ ಕೋಳಿ (10+10) ಗಳನ್ನು ಕೊಡಲಾಯಿತು, ಹುಲ್ಲು ಬೆಳೆಗಳನ್ನು ಈ ಯೋಜನೆಯಲ್ಲಿ ಅಳವಡಿಸಿದ್ದರಿಂದ ಹಾಲು ಕೊಡುವ ಹಸುವಿಗೆ ಹಸಿರು ಮೇವಿನ ಕೊರತೆ ತೋರಲಿಲ್ಲ. ಪ್ರತಿ ಫಲಾನುಭವಿಗೆ ಯೋಜನೆಯಿಂದ ಒಟ್ಟು ಒಂದು ಲಕ್ಷ ರೂಪಾಯಿ ಅನುದಾನದ ರೂಪದಲ್ಲಿ ಸಿಕ್ಕಿದೆ (50%) ಇನ್ನುಳಿದ 50% ವೆಚ್ಚವನ್ನು ಫಲಾನುಭವಿಯೇ ಭರಿಸಬೇಕು. ಇದಲ್ಲದೇ

ಬಹುತೇಕ ಫಲಾನುಭವಿಗಳು ಯೋಜನೆಯ ಹೊರತಾಗಿ ಇನ್ನೂ ಅನೇಕ ಹೊಸ ತಾಂತ್ರಿಕತೆಗಳನ್ನು ಇದರ ಜೊತೆಗೆ ಅಳವಡಿಸಿಕೊಂಡಿದ್ದಾರೆ. ಉದಾಹರಣೆಗಾಗಿ: ಜೈವಿಕ ಅನಿಲ ಘಟಕ, ಅಜೋಲ್ಲಾ, ಎರೆಹುಳು ಗೊಬ್ಬರ ತಯಾರಿಕೆ, ಬೀಜೋತ್ಪಾದನೆ ಇನ್ನು ಅನೇಕ ಉಪಕಸುಬುಗಳನ್ನು ಕೈಗೊಂಡಿದ್ದಾರೆ. ಈ ಪದ್ಧತಿಯಿಂದ ಒಂದಿಲ್ಲೊಂದು ಬೆಳೆಯಿಂದ ಹಣ ಸತತವಾಗಿ ಹರಿದುಬರುತ್ತಿತ್ತು. ಉದಾಹರಣೆಗೆ: ಹೂವು, ಹಣ್ಣು, ಮೇವು, ಹೈನುಗಾರಿಕೆ, ಕುರಿ, ಕೋಳಿ ಮತ್ತು ಇತರೇ ಬೆಳೆಗಳು. ಪ್ರತಿ ಬೆಳೆಯ ಹಂಗಾಮಿನ ಕ್ಷೇತ್ರೋತ್ಸವ ಏರ್ಪಡಿಸಿ ಸುತ್ತಮುತ್ತಲಿನ ಗ್ರಾಮದ ರೈತರನ್ನು ಕರೆತಂದು, ಫಲಾನುಭವಿ ರೈತನ ಅನುಭವ, ಅನಿಸಿಕೆಗಳನ್ನು ಹಂಚಿಕೊಳ್ಳುವುದರ ಮೂಲಕ ಇತರ ರೈತರೂ ಇಂಥ ಪದ್ಧತಿಗಳನ್ನು ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸಲಾಗಿದೆ. ಮುಂದುವರಿದು ಈ ಯೋಜನೆಯಲ್ಲಿ ಒಟ್ಟಾರೆ 34 ಬೆಳೆಗಳ ಪ್ರಾತ್ಯಕ್ಷಿಕೆ ಮಾಡಲಾಗಿ ಅದರಲ್ಲಿ 24 ಹೊಸ ಬೆಳೆಗಳನ್ನು ಪ್ರಥಮವಾಗಿ ಸೇರಿಸಲಾಯಿತು.

**ಸಮಗ್ರ ಕೃಷಿ ಪದ್ಧತಿ ಪರಿಸರ ಪ್ರೇಮಿ:** ಈ ಪದ್ಧತಿಯಡಿಯಲ್ಲಿ ಪೋಷಕತ್ರಣ ದಾನ್ಯಗಳಾದ (ರಾಗಿ, ಸಜ್ಜೆ, ನವಣೆ) ದ್ವಿದಳ ಧಾನ್ಯ, ಎಣ್ಣೆ ಕಾಳು, ಹೂವು, ಹಣ್ಣು, ಮೇವು ತರಕಾರಿ ಬೆಳೆಗಳು ಇದ್ದು ಹಸು, ಕುರಿ, ಕೋಳಿಗಳು, ಸಗಣಿ, ಮಲ, ಮೂತ್ರಗಳನ್ನು ಒದಗಿಸಿದ್ದು ಎರೆಹುಳ ಗೊಬ್ಬರ ಉತ್ಪಾದನೆಗೆ ಅತ್ಯಂತ ಅನುಕೂಲವಾಯಿತು. ಅಜೋಲ್ಲಾ ಕೂಡಾ ವಾತಾವರಣದಲ್ಲಿನ ಸಾರಜನಕವನ್ನು ಮಣ್ಣಿನಲ್ಲಿ ಸ್ಥಿರೀಕರಣ ಮಾಡುವುದರಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿತು. ಅನೇಕ ಬೆಳೆಗಳ ಮಿಶ್ರಣದಿಂದ ಕಾಲಗ್ಯೆ (Crop rotation) ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಿದೆ. ಆದ್ದರಿಂದ ಈ ಸಮಗ್ರ ಕೃಷಿ ಪದ್ಧತಿ ಪರಿಸರ ಪ್ರೇಮಿ ಯೋಜನೆಯೆಂದು ಬಣ್ಣಿಸಿದಲ್ಲಿ ಅತಿಶಯೋಕ್ತಿಯಾಗಲಾರದು. ಈ ಮೇಲಿನ ಎಲ್ಲಾ ಅಂಶಗಳ ದೃಷ್ಟಾಂತಕ್ಕಾಗಿ ದಕ್ಷಿಣ ಕರ್ನಾಟಕದ 9 ಜಿಲ್ಲಾ ಯೋಜನಾ ಘಟಕದಲ್ಲಿ ಆಯೋಜಿಸಿದ ಸಮಗ್ರ ಕೃಷಿ ಪದ್ಧತಿಯಿಂದ ದೊರೆತ ಆದಾಯ, ಖರ್ಚು ವೆಚ್ಚಗಳ ಅಂಕಿ ಅಂಶಗಳು ಈ ಕೆಳಗಿನಂತಿವೆ.

ಕಾಯಿಪಲ್ಲೆ ಹಾಗೂ ಹೂ ಬೆಳೆಗಳಿಂದ ಮೂರು ಹಂಗಾಮಿನಲ್ಲಿ ನಿವ್ವಳ ಆದಾಯ ಸುಮಾರು ರೂ. 3 ಲಕ್ಷಕ್ಕೂ ಹೆಚ್ಚಾಗಿದೆ. ಮೇವಿನ ಬೆಳೆಗಳಿಂದ ಸುಮಾರು ರೂ.6,175/–. ಇನ್ನು ಪಶು ಸಂಗೋಪನೆಯಲ್ಲಿ ಉಪ ಕಸುಬುಗಳಾದ ಹೈನುಗಾರಿಕೆ, ಕುರಿ ಹಾಗೂ ಕೋಳಿ ಸಾಕಾಣಿಕೆಗಳಿಂದ ದೊರೆಯುವ ಉತ್ಪನ್ನ ರೂ.68,108/– ಇದರಲ್ಲಿ ಹೈನುಗಾರಿಕೆಯಿಂದ ಬರುವ ಆದಾಯ ಅಧಿಕವಾಗಿದೆ (ರೂ.41,334/–) ಹೈನುಗಾರಿಕೆಯಿಂದ ಕುಟುಂಬದ ಆಹಾರ ಪೌಷ್ಠಿಕವಾಗುವುದಲ್ಲದೆ ಹಣದ ಹೊಳೆಯನ್ನು ಸತತವಾಗಿ ಹರಿಸುತ್ತದೆ. ಇದನ್ನು ATM (Any Time Money)ಗೆ ಹೋಲಿಸಬಹುದು. ಒಟ್ಟಾರೆ ಹೇಳುವುದಾದಲ್ಲಿ ಎರಡು ವರ್ಷಗಳಲ್ಲಿ ಒಂದು ಹೆಕ್ಟೇರ್ ಜಮೀನಿನಿಂದ ಸುಮಾರು ನಾಲ್ಕು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಿ ನಿವ್ವಳ ಆದಾಯ ಗಳಿಸಬಹುದು. ಈ ಸಮಗ್ರ ಕೃಷಿ ಪ್ರಾತ್ಯಕ್ಷಿಕೆಗಳನ್ನು ನಡೆಸಿದ 9 ರೈತರ ಈ ಪ್ರಾತ್ಯಕ್ಷಿಕೆಗಳು ಒಂದಕ್ಕಿಂತ ಒಂದು ಮಿಗಿಲಾಗಿದ್ದು, ಉದಾಹರಣೆಗೆ ಮರಳೂರಿನ ನರಸಾರೆಡ್ಡಿಯವರ ಪರಿಶ್ರಮ ಅದಕ್ಕೆ ಸಂದ ಪ್ರತಿಫಲ ಅತ್ಯಂತ ಶ್ಲಾಘನೀಯ. ಈ ಪ್ರಾತ್ಯಕ್ಷಿಕೆಗಳನ್ನು ನೋಡಿದವರೆಲ್ಲರೂ ಸಮಗ್ರ ಕೃಷಿ ಪದ್ಧತಿಯನ್ನು ಅನುಕರಣೆ ಮಾಡುವದಕ್ಕಾಗಿ ದೃಢ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಿ. ನರಸಾರೆಡ್ಡಿಯವರ ಅನುಭವವನ್ನು ಜಲ ಸಂವರ್ಧನೆ ಯೋಜನಾ ಸಂಘ ಏರ್ಪಡಿಸಿದ್ದ 5 ದಿವಸಗಳ ಕಾರ್ಯಾಗಾರ, ಕೃಷಿಮೇಳ, ಆಕಾಶವಾಣಿಗಳ ಮುಖಾಂತರ ಬಿತ್ತರಿಸಲಾಗಿದೆ. ಬೆಳೆಗಳಿಂದ ಉತ್ಪನ್ನವಿಲ್ಲದಾಗ ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆ ರೈತನ ಜೀವನಾಡಿಯಾಗುವುದರಲ್ಲಿ ಸಂದೇಹವಿಲ್ಲ. ಹೀಗೆ ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆಗಳು ಅನೇಕ ರೈತರ ಕಣ್ಣು ತೆರೆಸುವುದರಲ್ಲಿ ಯಶಸ್ವಿಯಾಗಿವೆ.

❄

ಲೇಖನ

# ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕೌಶಲ್ಯ ಗಳಿಸಿಕೊಳ್ಳುವುದು ಹೇಗೆ?

– ಎಸ್. ದಕ್ಷಿಣಾಮೂರ್ತಿ

ವಿಜ್ಞಾನ, ತಂತ್ರಜ್ಞಾನದ ಬೆಳವಣಿಗೆಯಷ್ಟೇ ವೇಗವಾಗಿ ಮಾನವೀಯ ಮೌಲ್ಯಗಳು ಗಟ್ಟಿಯಾದಾಗ ಜಗತ್ತು ಸುಂದರವಾಗಿರುತ್ತದೆ. ಇಲ್ಲವಾದಲ್ಲಿ ಪ್ರತಿ ವರ್ಷದ ಸಂದರ್ಭವೂ ಕಳೆದು ಹೋದ ವರ್ಷಗಳಂತೆಯೇ ಆಗಿ ಹೋಗುತ್ತದೆ. ಹೊಸವರ್ಷ ಹೊಸತನಕ್ಕೆ ದಾರಿಯಾಗಬೇಕು. ಬದುಕಿನಲ್ಲಿ ಬದಲಾವಣೆ ತರಬೇಕು. ಪ್ರತಿದಿನವೂ ನೂತನವಾಗಿರಲಿ, ಹೊಸ ಚೈತನ್ಯ ಮೂಡಲಿ ಎಂಬ ಹಾರೈಕೆಗಳು ಎಲ್ಲೆಡೆಯಿಂದ ಮೊಳಗುತ್ತಿರುತ್ತದೆ. ಸುಸ್ಥಿರ ಅಭಿವೃದ್ಧಿಗೆ ನೂತನ ಕಾರ್ಯ ಯೋಜನೆಗಳು ಮೈದಾಳಲಿವೆ. ಶಾಂತಿ, ಸಹನೆ, ಸಹಬಾಳ್ವೆ ಎಂಬುದು ಚಿರಂತನ ಮೌಲ್ಯಗಳು. ಇವಕ್ಕೆ ಅತೀತವಾದುದು ಯಾವುದೂ ಇಲ್ಲ. ಇದೇ ವಿಶ್ವಧರ್ಮ.

> 'ಸರ್ಕಾರದ ಕೆಲಸ ದೇವರ ಕೆಲಸ' ಎಂಬುದನ್ನು ಸಾರ್ಥಕ ಪಡಿಸಲು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸವುದು ಅಗತ್ಯವಾಗಿದೆ.




ಪಂಚಾಯತ್ ರಾಜ್‌ನಲ್ಲಿ ಕರ್ನಾಟಕಕ್ಕೊಂದು ವಿಶಿಷ್ಟ ಸ್ಥಾನವಿದೆ. ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ ಎಂಬುದು ಜನತೆಯ ಪಾಲ್ಗೊಳ್ಳುವಿಕೆಯ ಪ್ರಜಾಪ್ರಭುತ್ವಕ್ಕೊಂದು ಅತ್ಯುತ್ತಮ ಉದಾಹರಣೆ. ಸಮುದಾಯವೊಂದರ ಅಂಗವಾಗಿರುವ ವ್ಯಕ್ತಿಯೊಬ್ಬ ತನ್ನ ಭವಿಷ್ಯ ನಿರ್ಧರಿಸುವುದರ ಜೊತೆಗೆ ಸಮುದಾಯದ ಭವಿಷ್ಯ ನಿರ್ಧರಿಸುವ ಮಹತ್ವದ ಅಂಶ ಈ ಕಾಯಿದೆಯಲ್ಲಿ ಅಡಕವಾಗಿದೆ. ಸ್ವಯಂ ಆಡಳಿತದ ಕಲ್ಪನೆಯನ್ನು ಸ್ವರೂಪ ವ್ಯವಸ್ಥೆಯನ್ನಾಗಿ ಪಂಚಾಯತ್‌ರಾಜ್

ನಂ. 32/2-2, ಗಂಗಮ್ಮ ಗುಡಿ ಬೀದಿ, ಕಬ್ಬನ್‌ಪೇಟೆ, ಬೆಂಗಳೂರು – 560 002.



ಪರಿವರ್ತಿಸುತ್ತದೆ. ಗ್ರಾಮ ಸ್ವರಾಜ್‌ನಂಥ ಅದ್ಭುತ ಕಲ್ಪನೆ ಮಹಾತ್ಮ ಗಾಂಧೀಜಿಯವರ ಕಲ್ಪನೆಯ ಕೂಸಾಗಿ ಭಾರತದಲ್ಲೇ ಹುಟ್ಟಿಕೊಂಡಿತು. ಕರ್ನಾಟಕದಲ್ಲಿ ಪಂಚಾಯತ್ ರಾಜ್‌ನ ಯುಗ 1983ರಲ್ಲಿ ಮೊಟ್ಟಮೊದಲ ಬಾರಿಗೆ ಪಂಚಾಯತ್ ರಾಜ್ ಕಾಯಿದೆ ಅನುಷ್ಠಾನಗೊಂಡಿತು. ನಂತರದ ವರ್ಷಗಳಲ್ಲಿ ರಾಜೀವ್‌ಗಾಂಧಿಯವರ ಪ್ರಯತ್ನದ ಫಲವಾಗಿ ಸಂವಿಧಾನಕ್ಕೆ 73ನೇ ತಿದ್ದುಪಡಿಯಾಯಿತು (1992). ಅದೂ ಎರಡನೇ ಪ್ರಯತ್ನದಲ್ಲೇ ಎಂಬುದು ಗಮನಾರ್ಹ.

ರೈತ ಸಮುದಾಯದಿಂದ ಬಂದಿರುವ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಎಚ್.ಕೆ.ಪಾಟೀಲರ ಗ್ರಾಮ ವಾಸಿಗಳ ಕುರಿತಾದ ಕಾಳಜಿಪೂರ್ಣವಾದ, ಮಹತ್ವಾಕಾಂಕ್ಷಿ ಹಾಗೂ ದೂರಗಾಮಿ ಗುರಿಯಿಂದ ಇಂದು ಪಂಚಾಯತ್ ರಾಜ್ ಕಾಯಿದೆ ಸಫಲತೆಯ ದಾರಿಯಲ್ಲಿದೆ. ಈಗಾಗಲೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ರಾಜ್ಯದ ಗ್ರಾಮೀಣ ಜನತೆಯು ಸುಸ್ಥಿರವಾದ ಬದುಕನ್ನು ಸಾಗಿಸಲು ಅವರ ಜೀವನದ ಎಲ್ಲ ಆಯಾಮಗಳಲ್ಲಿಯೂ ನೆರವಾಗಬಲ್ಲ, ದುರ್ಬಲ ವರ್ಗಗಳಿಗೆ ಚೈತನ್ಯ ನೀಡುವ ಹಾಗೂ ಗುಣಾತ್ಮಕ ಬದಲಾವಣೆಯನ್ನುಂಟು ಮಾಡಬಹುದಾದ 15 ಅಂಶದ ಕಾರ್ಯಕ್ರಮಗಳನ್ನು 2013–14ನೇ ಸಾಲಿನಲ್ಲಿ ಜಾರಿಗೊಳಿಸಿತು. ಇವುಗಳ ಜೊತೆಗೆ 2015–16ನೇ ವರ್ಷದಲ್ಲಿ ಇನ್ನೂ 6 ಕಾರ್ಯಯೋಜನೆಗಳನ್ನು ಹೊಸದಾಗಿ ರೂಪಿಸಿ ಜಾರಿಗೊಳಿಸಲಾಯಿತು.

ಈ ಎಲ್ಲ ಕಾರ್ಯಯೋಜನೆಗಳನ್ನು ಜನರಿಗೆ ತಲುಪಿಸುವ ಹೊಣೆಗಾರಿಕೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾಗಿ ಕರ್ತವ್ಯವಾಗಿದೆ. ಆದುದರಿಂದ ಹೊಸ ವರ್ಷದಲ್ಲಿ ಆತ್ಮವಿಶ್ವಾಸ ತುಂಬುವ ಪ್ರಾಮಾಣಿಕ ಪ್ರಯತ್ನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳದ್ದಾಗಬೇಕಿದೆ.

ಸರ್ಕಾರಿ ಸೇವೆಗೆ ಸೇರುವ ಪೂರ್ವದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರಿ ಕಚೇರಿಯನ್ನು ಎಡತಾಕಿರುವ ಅನುಭವ ಎಲ್ಲರೂ ಹೊಂದಿದ್ದಾರೆ. ಅದರ ವ್ಯವಸ್ಥೆಯ ಅನುಭವ ಆಗಿರುತ್ತದೆ. ಅಲ್ಲಿ ಸಂಕಷ್ಟಗಳ ಪರಿಚಯ ಆಗಿರುತ್ತದೆ. ಸರ್ಕಾರಿ ಕಚೇರಿ ಎಂದರೆ ಹೇಗೆ ಇರಬೇಕು ಎಂಬ ಕನಸನ್ನೂ ನೀವು ಕಂಡಿದ್ದಿರಬಹುದು. ಸರ್ಕಾರಿ ಕಚೇರಿಯಲ್ಲಿ ಕೆಲಸಗಳು ಹೇಗೆ ನಡೆಯುತ್ತವೆ ಎಂಬ ಅನುಭವ ನಮ್ಮ ನಿಮ್ಮೆಲ್ಲರದ್ದಾಗಿದೆ.



ಗ್ರಾಮ ಪಂಚಾಯತಿ ಅಧಿಕಾರಿ ಕಚೇರಿಯಲ್ಲಿ ಸದಾ ಉಲ್ಲಾಸದಿಂದ ಕೆಲಸ ಮಾಡಿ ಕೆಲಸದಲ್ಲಿ ಯಶಸ್ಸು ಪಡೆಯಲು ಹಂತ ಹಂತವಾಗಿ ಯಶಸ್ಸಿನ ಮಟ್ಟಿಲು ಹತ್ತಬೇಕು. ವೃತ್ತಿ ಜೀವನದಲ್ಲಿ ಯಶಸ್ಸು ಕಾಣುವುದು ಹೇಗೆ? ಇದಕ್ಕೆ ಎಲ್ಲರೂ ದೊಡ್ಡ ಸಾಧಕರ ಹೆಸರುಗಳನ್ನೇ ಹೇಳುತ್ತಾರೆ. ಆದರೆ ಕೆಲವೊಮ್ಮೆ ತುಂಬ ಚಿಕ್ಕವರು ನಮ್ಮ ಬದುಕಿಗೆ ಸ್ಫೂರ್ತಿಯಾಗಬಲ್ಲರು.

**ಮೊದಲನೆಯದು:** ಇರುವೆ ಯಾವತ್ತೂ ಸೋಲು ಒಪ್ಪಿಕೊಳ್ಳುವುದಿಲ್ಲ. ಬೇಕಿದ್ದರೆ ಇರುವೆ ನಡೆಯುವ ಹಾದಿ ಮೇಲೆ ಬೆರಳಿಟ್ಟು ನೋಡಿ. ಅದು ತನ್ನ ದಾರಿ ಬದಲಾಯಿಸುತ್ತಿದೆಯೇ ಹೊರತು ಹಿಂದೆ ಸರಿಯುವುದಿಲ್ಲ. ಅಥವಾ ನಿಂತಲ್ಲೇ ನಿಲ್ಲುವುದಿಲ್ಲ. ನಮ್ಮೆಲ್ಲರ ಬದುಕಲ್ಲಿ ಅಡೆತಡೆಗಳು ಸಾಮಾನ್ಯ. ಅವೆಲ್ಲವನ್ನೂ ದಾಟಿ ಗುರಿ ತಲುಪುವುದಕ್ಕೆ ನಾವೆಲ್ಲ ಹೊಸ ದಾರಿಗಳನ್ನು ಹುಡುಕಬೇಕು.

**ಎರಡನೆಯದು:** ಬೇಸಗೆ ಕಾಲದಲ್ಲಿ ಇರುವೆ ಮಜಾ ಮಾಡುತ್ತಾ ಕಾಲ ಕಳೆಯುವುದಿಲ್ಲ. ಬದಲಾಗಿ ಚಳಿಗಾಲವನ್ನು ಎದುರಿಸುವುದಕ್ಕೆ ಆಹಾರದ ಹುಡುಕಾಟದಲ್ಲಿ ಇರುತ್ತದೆ. ಆದರೆ ಮಿಡತೆ ಆರಾಮವಾಗಿ ಹಾರಾಡಿಕೊಂಡು ಇರುತ್ತದೆ. ಒಳ್ಳೆಯ ದಿನಗಳು ಶಾಶ್ವತವಲ್ಲ ಅನ್ನುವುದು ಇರುವೆಗೆ ಗೊತ್ತಿದೆ. ಇದು ಒಳ್ಳೆಯ ಪಾಠ. ವೃತ್ತಿಯಲ್ಲಿ ಯಶಸ್ಸಿನ ಹಾದಿಯಲ್ಲಿ ಇದ್ದಾಗ ಮೈಮರೆಯಬಾರದು. ಕಚೇರಿ ಕಾರ್ಯ ನಿರ್ವಹಿಸುವ ಸಮಯದಲ್ಲಿ ಮುಂದೆ ಕಷ್ಟಗಳು ಬಂದೇ ಬರುತ್ತವೆ. ಹಾಗಾಗಿ ಜನಕಲ್ಯಾಣ ಕಾರ್ಯಗಳಿಂದ ಜನರಿಗೆ ಸಹಾಯ ಮಾಡಿ. ನಿಮ್ಮ ಕಷ್ಟ ಕಾಲದಲ್ಲಿ ಅವರು ನೆರವಿಗೆ ಬರುತ್ತಾರೆ.

**ಮೂರನೆಯದು:** ಬೇಸಿಗೆ ಬಂದೊಡನೆ ಇರುವೆ ತನ್ನ ಗೂಡಿನಿಂದ ಹೊರಗೆ ಬರುತ್ತದೆ. ದುಡಿಯುವುದಕ್ಕೆ ಇದು ಪ್ರಶಸ್ತ ಕಾಲ ಅನ್ನುವುದು ಅದಕ್ಕೆ ಗೊತ್ತಿದೆ. ಕಷ್ಟಕಾಲದಲ್ಲಿದ್ದಾಗ ಹೀಗೇ ಯೋಚಿಸಬೇಕು. ಮುಂದೊಂದು ದಿನ ಸಂತೋಷದ ದಿನಗಳು ಬಂದೇ ಬರುತ್ತವೆ. ಪಂಚಾಯತಿಯಲ್ಲಿ ಬದ್ದತೆಯಿಂದ ಕೆಲಸ ಮಾಡಿದಲ್ಲಿ ಕಠಿಣ ನಿಲುವನ್ನೂ ತಳೆದವರು ನಿಮ್ಮನ್ನು ಮೆಚ್ಚುತ್ತಾರೆ.

**ನಾಲ್ಕನೆಯದು:** ಬೇಸಿಗೆಯಲ್ಲಿ ಇರುವೆ ಎಷ್ಟು ಆಹಾರ ಸಂಪಾದಿಸಬಹುದು? ಯಾರೂ ಲೆಕ್ಕ ಇಟ್ಟಿಲ್ಲ. ಇರುವೆ ಕೂಡಾ ಅದರ ಬಗ್ಗೆ ಚಿಂತಿಸುವುದಿಲ್ಲ. ತನ್ನ ಸಹೋದ್ಯೋಗಿಯ ಸಂಪಾದನೆಯ ಬಗ್ಗೆಯೂ ಯೋಚಿಸುವುದಿಲ್ಲ. ತಾನೇಕೆ ಕಷ್ಟಪಡಬೇಕು ಎಂಬ ಪ್ರಶ್ನೆಯನ್ನು ಅದು ಕೇಳುವುದಿಲ್ಲ, ಯಾರನ್ನೂ ದೂರುವುದೂ ಇಲ್ಲ. ಇರುವೆಗಳೂ ಒಗ್ಗಟ್ಟಾಗಿ ದುಡಿಯುತ್ತವೆ. ಎಲ್ಲಾ ಶ್ರಮವನ್ನೂ ಧಾರೆಯೆರೆಯುತ್ತವೆ. ಬದುಕಲ್ಲಿ ಯಶಸ್ಸು ಕಂಡ ಮನುಷ್ಯರನ್ನೊಮ್ಮೆ ನೋಡಿ. ಅವರ ಧೋರಣೆಯೂ ಇದೇ ಥರ ಇರುತ್ತದೆ. ಸದಾ ಮುಂದೆ ನೋಡುತ್ತಿರು, ಯಾವತ್ತೂ ಜೀವನ್ಮುಖಿಯಾಗಿರು ಮತ್ತು ಎಷ್ಟು ಸಾಧ್ಯವೋ ಅಷ್ಟನ್ನು ಮಾಡು. ಗ್ರಾಮ ಪಂಚಾಯತಿ ಕಚೇರಿಯಲ್ಲಿ ಕೆಲಸ ಮಾಡುವ ಎಲ್ಲರೂ ಸಮಾನ ಶ್ರದ್ದೆಯಿಂದ ಕೆಲಸ ಮಾಡಬೇಕು. ಜನಹಿತವೇ ಗುರಿಯಾಗಬೇಕು.

**ಮೊದಲ ಪಾಠ :** ಒಂದು ಇರುವೆ ತನ್ನ ದೇಹದ ಭಾರಕ್ಕಿಂತ ಇಪ್ಪತ್ತು ಪಟ್ಟು ಭಾರವಿರುವ ವಸ್ತುವನ್ನೂ ಹೊತ್ತೊಯ್ಯುತ್ತದೆ.

**ಎರಡನೆಯ ಪಾಠ:** ನೀವು ಯಾವುದೋ ಒತ್ತಡಕ್ಕೆ ಸಿಲುಕಿ ಕುಸಿಯುತ್ತಿದ್ದರೆ ಇರುವೆಯನ್ನು

ನೆನಪಿಸಿಕೊಳ್ಳಿ. ಆಗ ನಿಮಗೆ ಯಾವುದೂ ಭಾರ ಎನಿಸುವುದಿಲ್ಲ. ಕಛೇರಿ ಕೆಲಸವನ್ನು ಶಿಸ್ತಿನಿಂದ ಮಾಡಬೇಕು ಗುಣಮಟ್ಟ ಕಾಯ್ದುಕೊಳ್ಳಬೇಕು. ಎಂದಿಗೂ ಸತ್ಯ ಮತ್ತು ಸ್ಪಷ್ಟತೆಯನ್ನು ಕಳೆದುಕೊಳ್ಳಬಾರದು. ಎಲ್ಲವನ್ನೂ ಸಕಾರಾತ್ಮಕವಾಗಿ ನಿಯಮಗಳ ಅಡಿಯಲ್ಲಿ ಚಿಂತಿಸಬೇಕು. ಕೆಲಸದಲ್ಲಿ ಪರಿಪೂರ್ಣತೆ ಸಾಧಿಸಬೇಕು. ಪರಿಪೂರ್ಣತೆ ಎಂದರೆ ಕೆಲಸದಲ್ಲಿ ಯಾರೂ ತಪ್ಪನ್ನು ಕಂಡು ಹಿಡಿಯುವಂತಿರಬಾರದು. ಬರುವವರು ಅನಕ್ಷರಸ್ಥರೇ ಹೆಚ್ಚಾಗಿರುತ್ತಾರೆ. ಆದರೆ ತಿಳಿವಕೆಯುಳ್ಳವರಾಗಿರುತ್ತಾರೆ ಎಂಬುದನ್ನು ಮರೆಯಬಾರದು. ಫಲಾನುಭವಿಗಳಲ್ಲಿ ಪಕ್ಷಪಾತ ಮಾಡಬಾರದು. ಇಲ್ಲಿ ಪಾರದರ್ಶಕತೆ ನಿಮ್ಮನ್ನು ಕಾಯುತ್ತದೆ. ಯೋಜನೆ ಲಾಭ ಪಡೆಯಲು ಇರುವ ನಿಯಮಗಳನ್ನು ಸ್ಪಷ್ಟವಾಗಿ ಅವರುಗಳಿಗೆ ಮನವರಿಕೆ ಮಾಡಿ, ಸರ್ಕಾರಕ್ಕೆ ನಿಷ್ಠೆ ತೋರಿಸಬೇಕು. ಬದ್ಧತೆಯ ನಡೆವಳಿಕೆ ಹೊಂದಿರಬೇಕು. ವಿಧೇಯತೆ ಇರಬೇಕು ಆದರೆ ಸ್ವಾಭಿಮಾನ ಬಿಟ್ಟುಕೊಡಬಾರದು.

ಗ್ರಾಮ ಪಂಚಾಯತಿ ಕಚೇರಿಯಲ್ಲಿ ನಕಾರಾತ್ಮಕ ಅನುಭವಗಳು ಮರುಕಳಿಸದಂತೆ ಕೆಲಸ ಮಾಡಬೇಕು. ಗ್ರಾಮೀಣರ ಏಳಿಗೆಗಾಗಿ ದುಡಿಯುವ ಗ್ರಾಮಪಂಚಾಯತಿಯಲ್ಲಿ ಆಡಳಿತದ ಸೂತ್ರ ಹಿಡಿದು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು. ಎಲ್ಲರಿಗೂ ಸರ್ಕಾರದ ಕೆಲಸ ಸಿಗುವುದಿಲ್ಲ. ಅರ್ಹತೆ ಇರುವವರಿಗೆ ಮಾತ್ರವೇ ಸಿಗುತ್ತದೆ. ನಾವು ಹುಟ್ಟಿನಿಂದ ಯಾರೂ ಅದಕ್ಕಾಗಿ ಹಂಬಲಿಸದಿದ್ದರೂ ಜೀವನ ಕ್ರಮದಲ್ಲಿ ಬೆಳೆದ ವಾತಾವರಣ ಮತ್ತು ಅನುಭವಗಳೂ ಕೆಲವರನ್ನು ಸಮಾಜ ಸೇವಾ ಮನೋಭಾವನೆಗೆ ಪ್ರೇರೇಪಿಸುತ್ತದೆ. ಗ್ರಾಮ ಪಂಚಾಯತಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವವರು ಸದಾ ಸಮಾಜಸೇವಾ ಕಾರ್ಯದಲ್ಲಿ ನಿರತರಾಗಿರುವರು, ಸಮಾಜದಲ್ಲಿ ಇನ್ನು ಕೆಲವರು ಸಮಾಜ ಸೇವರಕರೆಂದು ಹೇಳಿಕೊಂಡು ಹೊಟ್ಟೆ ಹೊರೆಯುವುದನ್ನು ಸಾರ್ವಜನಿಕ ರಂಗದಲ್ಲಿ ಕಂಡಿದ್ದೇವೆ.

ಗ್ರಾಮ ಪಂಚಾಯಿತಿಗಳು ಸಮರ್ಥವಾಗಿ ಕೆಲಸ ಮಾಡಿದರೆ ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳ್ಳುತ್ತದೆ. ಗ್ರಾಮೀಣ ಜನರ ಬಾಳಲ್ಲಿ ನೆಮ್ಮದಿ ಮೂಡಿಸಬೇಕೆಂದು ಒಳ್ಳೆಯ ಕೆಲಸ ಮಾಡಬೇಕೆಂದು ಪಣ–ಹಟತೊಟ್ಟು, ಪಿ.ಡಿ.ಒ.ಗಳಾಗಿ ಕೆಲಸಕ್ಕೆ ಸೇರಿರುವುದನ್ನು ಮರೆಯಬೇಡಿ.

ನಿಮ್ಮ ನಂತರವೂ ನಿಮ್ಮ ವೃತ್ತಿಬದುಕು ಮಾತನಾಡುತ್ತದೆ, ನೆನಪಿರಲಿ, ಈ ಸಮಾಜ ಕೇವಲ ಮಹಾತ್ಮರನ್ನು ನೆನಪಿಟ್ಟುಕೊಳ್ಳುವುದಿಲ್ಲ, ಆದರೆ ನೀವು ಮಾಡಿದ ನೆರವನ್ನು ಸದಾ ಸ್ಮರಿಸಿಕೊಳ್ಳುತ್ತದೆ. ಮಾಡುವ ದಿನನಿತ್ಯದ ಕೆಲಸವನ್ನೆ ಹೆಚ್ಚಿನ ಶ್ರದ್ಧೆಯಿಂದ ಮಾಡಬೇಕು. ಇಲಾಖೆಯ ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ಜನರಿಗೆ ಅದರಲ್ಲಿಯೂ ತಳಸ್ತರದಲ್ಲಿರುವವರಿಗೆ ತಲುಪಿಸಿದಲ್ಲಿ ಅದು ಅವರ ಜೀವನವನ್ನೇ ಬದಲಿಸುತ್ತದೆ.

ಸಾಧನೆ ಎಂಬುದು ನಾವು ಮಾಡುವ ಕೆಲಸದ ಮೇಲೆ ಅವಲಂಬಿಸಿರುತ್ತದೆ, ಸಾಧನೆ ಮಾಡುವವರು ಸಹನೆ ಮತ್ತು ತಾಳ್ಮೆಗಳನ್ನು ಅಳವಡಿಸಿ ಕೊಂಡಿರಬೇಕು. ನಿರ್ದಿಷ್ಟವಾದ ಗುರಿಯನ್ನು ಇಟ್ಟುಕೊಂಡು ಪ್ರಯತ್ನಪಟ್ಟರೆ ಯಶಸ್ಸು ಸಾಧ್ಯ. ವೃತ್ತಿಜೀವನದಲ್ಲಿ ಎದುರಾಗುವ ಅನುಭವಗಳಿಂದ ಪಾಠ ಕಲಿತು ಭವಿಷ್ಯದ ದಾರಿಗೆ ರಚನಾತ್ಮಕ ತಿರುವನ್ನು ಪಡೆದುಕೊಳ್ಳೂವುದರಲ್ಲಿಯೇ ಜೀವನದ ಗುಟ್ಟು ಅಡಗಿದೆ.

ಮನಸ್ಸನ್ನು ಸದಾ ಸಕಾರಾತ್ಮಕ ಆಲೋಚನೆಗಳಿಂದ ತುಂಬಿಸಿಕೊಳ್ಳಿ, ಇದು ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಮನೋಬಲವನ್ನು ಒದಗಿಸುತ್ತದೆ. ಭವಿಷ್ಯದ ವೃತ್ತಿ ಜೀವನ ನಿರಾತಂಕವಾಗಿ ಸಾಗಿಸುತ್ತದೆ.

❄

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ



ಹೆಚ್ ಆರ್ ರಾಜೇಶ್

ಗ್ರಾಮ ಪಂಚಾಯತಿಯ ಆಯವ್ಯಯ ತಯಾರಿಸಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರಗಳು ಇಲ್ಲಿವೆ:

# ಗ್ರಾಮ ಪಂಚಾಯತಿ ಆಯವ್ಯಯ 2016-17

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರಲ್ಲಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಗಳು ಆಯವ್ಯಯ ಸಿದ್ದಪಡಿಸಿ ಮಂಡಿಸುವಂತೆ ಸ್ಥಳೀಯ ಸರ್ಕಾರವಾದ ಗ್ರಾಮ ಪಂಚಾಯತಿಗೂ ಆಯವ್ಯಯ ಸಿದ್ದಪಡಿಸಿ ಮಂಡಿಸುವ ಅವಕಾಶ ಕಲ್ಪಿಸಲಾಗಿದೆ. ಆಯವ್ಯಯ ಪದವೇ ವಿವರಿಸುವಂತೆ ಗ್ರಾಮ ಪಂಚಾಯತಿಯೂ ತನ್ನ ಪರಿಧಿಯ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿದೆ. ವಾರ್ಷಿಕವಾಗಿ ಸಂಪನ್ಮೂಲ ಕ್ರೋಢೀಕರಿಸುವುದು ಮತ್ತು ಕ್ರೋಢೀಕರಿಸಿದ ಸಂಪನ್ಮೂಲವನ್ನು ವಾರ್ಷಿಕವಾಗಿ ಆಧ್ಯತಾವಲಯಗಳಿಗೆ ವ್ಯಯ ಮಾಡುವುದೇ ಆಗಿದೆ. ಸಂಪನ್ಮೂಲ ಸಂಗ್ರಹ ಮತ್ತು ಅದೇ ರೀತಿ ಹಂಚಿಕೆಗೆ ಸಂಬಂದಿಸಿದಂತೆ ವಾಸ್ತವಕ್ಕೆ ಸರಿ ಹೊಂದುವಂತೆ ಆಯವ್ಯಯ ಸಿದ್ದಪಡಿಸದೆ ಇದ್ದರೆ ಕ್ರಿಯಾಯೋಜನೆಯನ್ನು ಸಮರ್ಪಕವಾಗಿ ಮಾಡಲಾಗದೆ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತವಾಗುತ್ತವೆ.



ರಾಜ್ಯ ವಿಧಾನ ಸಭೆಯಲ್ಲಿ ಇತ್ತೀಚೆಗೆ ಅನುಮೋದನೆಗೊಂಡ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) 2015 ಕಾಯ್ದೆಯಂತೆ ದಿನಾಂಕ : 25/02/2016 ರಿಂದ ಜಾರಿಗೆ ಬಂದಿದ್ದು, ಪ್ರಕರಣ 199ಎ ಮತ್ತು ಷೆಡ್ಯೂಲ್ 4 ರಂತೆ 2016-17 ನೇ ಸಾಲಿನ ಮಾಹೆಯಿಂದ ಪ್ರತಿ ಸ್ವತ್ತಿನ ತೆರಿಗೆಯನ್ನು ಕ್ಯಾಪಿಟಲ್ ವ್ಯಾಲ್ಯೂ ಆಧಾರದ ಮೇಲೆ ಪರಿಷ್ಕರಿಸುವುದರಿಂದ ಪ್ರತಿ ಆಸ್ತಿಯ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಕಟ್ಟಡ/ನಿವೇಶನದ ತೆರಿಗೆಯನ್ನು ನಿರ್ಧರಿಸಬೇಕಾಗಿರುವುದರಿಂದ ಆಯಾ ಗ್ರಾಮ ಪಂಚಾಯತಿಗಳ ಒಟ್ಟು ಆಸ್ತಿ ಮತ್ತು ಮೌಲ್ಯಗಳನ್ನು ನಿಗದಿಪಡಿಸಿಕೊಂಡು ಆಯವ್ಯಯ ಸಿದ್ದಪಡಿಸತಕ್ಕದ್ದು.

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ, ರಾಜಾನುಕುಂಟೆ ಗ್ರಾಮ ಪಂಚಾಯತಿ
ಬೆಂಗಳೂರು ಉತ್ತರ ತಾಲ್ಲೂಕು.

## ಆಯವ್ಯಯದಲ್ಲಿನ ವಿಧಗಳು

1. **ಸಮತೋಲನ ಆಯವ್ಯಯ** : ಗ್ರಾಮ ಪಂಚಾಯತಿಯ ನಿರೀಕ್ಷಿತ ಆದಾಯ ನಿರೀಕ್ಷಿತ ವೆಚ್ಚಕ್ಕೆ ಸಮನಾಗಿದ್ದರೆ ಅದನ್ನು ಸಮತೋಲನಾ ಆಯವ್ಯಯ ಎನ್ನುತ್ತಾರೆ.
2. **ಮಿಗತೆ ಆಯವ್ಯಯ** : ಗ್ರಾಮ ಪಂಚಾಯತಿಯ ಆದಾಯವು ಅದರ ನಿರೀಕ್ಷಿತ ವೆಚ್ಚಕ್ಕಿಂತಲೂ ಅಧಿಕವಾಗಿರುವುದನ್ನು ಮಿಗತೆ ಆಯವ್ಯಯ ಎನ್ನವರು.
3. **ಕೊರತೆ ಆಯವ್ಯಯ** : ಗ್ರಾಮ ಪಂಚಾಯತಿಯ ನಿರೀಕ್ಷಿತ ಆದಾಯಕ್ಕಿಂತ ಖರ್ಚು ಅಧಿಕವಾಗಿದ್ದರೆ ಅದನ್ನು ಕೊರತೆ ಆಯವ್ಯಯ ಎನ್ನುತ್ತಾರೆ

## ಆಯವ್ಯಯದ ಮಹತ್ವ

ಆಯವ್ಯಯವು ಗ್ರಾಮ ಪಂಚಾಯತಿಯ ಒಂದು ಮಹತ್ವದ ವಿಷಯವಾಗಿದೆ. ಆಯವ್ಯಯವು ಗ್ರಾಮ ಪಂಚಾಯತಿಯು ಸಂಗ್ರಹಿಸುವ, ಒರತಕ್ಕೆ ಆದಾಯ ಮತ್ತು ವಿವಿಧ ಬಾಬ್ತುಗಳಿಗೆ ವೆಚ್ಚ ಮಾಡುವ ಸಮಗ್ರ ಅಂಕಿ ಸಂಖ್ಯೆಗಳನ್ನೊಳಗೊಂಡಿದೆ. ಗ್ರಾಮ ಪಂಚಾಯತಿಯೂ ಒಂದು ಕುಟುಂಬದಂತೆ ಸುಮಾರು 5 ಸಾವಿರದಿಂದ 30 ಸಾವಿರ ಜನಸಂಖ್ಯೆಗಳ ನ್ನೊಳಗೊಂಡ ಹಳ್ಳಿಗಳ ಮೂಲಭೂತ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಪ್ರಗತಿಯೆಡೆಗೆ ಸಾಗಿಸಲು ಒಂದು ಉತ್ತಮ ಆಯವ್ಯಯವು ಅವಶ್ಯಕವಾಗಿರುತ್ತದೆ.

ಗ್ರಾಮ ಪಂಚಾಯತಿಯೂ ಮುಂದಿನ ವರ್ಷದಲ್ಲಿ ಯಾವ ಯಾವ ಮೂಲದಿಂದ ಆದಾಯವನ್ನು ಸಂಗ್ರಹಿಸಬಹುದು, ಹೆಚ್ಚಿಸಬಹುದು, ವಂತಿಕೆ, ಕೊಡುಗೆಗಳ ಮುಲಕ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿಕೊಂಡು ಅವರ ಮೂಲಕ ಅವಶ್ಯಕತೆ ಇರುವ ಮೂಲಗಳಿಗೆ ಆದ್ಯತೆಗನುಗುಣವಾಗಿ ಹಂಚಿಕೆ ಮಾಡಿಕೊಂಡು ಆಡಳಿತ ನಡೆಸಲು ಅನುಕೂಲ ವಾಗುತ್ತದೆ.

## ಗ್ರಾಮ ಪಂಚಾಯತಿಯ ಆಯವ್ಯಯ ಮಂಡನೆ (ಪ್ರಕರಣ 241)

ಪಂಚಾಯತಿ ಅಭಿವೃದ್ಧಿ ಅಧಿಕಾರಿಯೂ ಆರ್ಥಿಕ ವರ್ಷ ಕೊನೆಗೊಳ್ಳುವ (ಮಾರ್ಚ್ ಅಂತ್ಯಕ್ಕೆ) ಆಯವ್ಯಯವನ್ನು ಹಿಂದಿನ ವರ್ಷದ ವಾಸ್ತವಿಕ, ಪ್ರಸ್ತುತ ವರ್ಷದ 8 ತಿಂಗಳ ವಾಸ್ತವಿಕ 4 ತಿಂಗಳ ಅಂದಾಜು ಮತ್ತು ಮುಂದಿನ ವರ್ಷದ ಅಂದಾಜು ನಿರೀಕ್ಷೆ, ವೆಚ್ಚದ ಪೂರ್ಣ ಲೆಕ್ಕವನ್ನು ಸಿದ್ಧಪಡಿಸತಕ್ಕದ್ದು.

ಏಪ್ರಿಲ್‌ನಲ್ಲಿ ಪ್ರಾರಂಭವಾಗುವ ಆರ್ಥಿಕ ವರ್ಷಕ್ಕೆ ತಯಾರಿಸುವ ಆಯವ್ಯಯವನ್ನು ಫೆಬ್ರವರಿ ಮೊದಲ ದಿನದಿಂದ ಮಾರ್ಚ್ 10ನೇ ದಿನದ ನಡುವೆ ನಡೆಯುವ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಮಂಡಿಸತಕ್ಕದ್ದು. ಹೀಗೆ ಮಂಡಿಸಿದ ನಂತರ ಮಾರ್ಚ್ 15 ರೊಳಗೆ ತಾಲ್ಲೂಕು ಪಂಚಾಯತಿಯ ಅನುಮೋದನೆಯನ್ನು ಪಡೆಯಬೇಕು.

ಫೆಬ್ರವರಿ ಮೊದಲನೆ ದಿನ ಮತ್ತು ಮಾರ್ಚ್ ಹತ್ತನೆ ದಿನ ನಡೆಯುವ ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿ ಆಯವ್ಯಯ ಅಂಗೀಕರಿಸಬೇಕು. ಗ್ರಾಮ ಪಂಚಾಯತಿಯು ತಪ್ಪಿದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಸಿದ್ದಪಡಿಸಿ ತಾಲ್ಲೂಕು ಪಂಚಾಯತಿಗೆ ಕಳುಹಿಸಲು ಅವಕಾಶ ಕಲ್ಪಿಸಿದ್ದು, ಏಕೈಕ ಅವಕಾಶ ಇದಾಗಿದೆ. ಅದನ್ನು ಮಾರ್ಪಡಿಸಿ ಅಥವಾ ಯಥಾವತ್ತಾಗಿ ಅನುಮೋದಿಸಬೇಕು. ತಾಲ್ಲೂಕು ಪಂಚಾಯತಿಯು ಅನುಮೋದಿಸಿದ ಆಯವ್ಯಯ ವನ್ನು ಕಾರ್ಯನಿರ್ವಾಹಕ ಅಧಿಕಾರಿಯವರು ಅಗತ್ಯ ಕ್ರಮಕ್ಕಾಗಿ ಗ್ರಾಮ ಪಂಚಾಯತಿಗೆ ಕಳುಹಿಸ ಬೇಕಾಗುತ್ತದೆ.

## ಆಯವ್ಯಯ ಸಿದ್ದಪಡಿಸುವಾಗ ಗಮನಹರಿಸಬೇಕಾದ ಅಂಶಗಳು

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 243 ನೇ ಪ್ರಕರಣದ ಮೇರೆಗೆ ಮತ್ತು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆಗಳ ಅಧಿನಿಯಮ 2003 ರ ಮೇರೆಗೆ

ಗ್ರಾಮ ಪಂಚಾಯತಿ ಲೆಕ್ಕ ಪತ್ರಗಳನ್ನು ಜಾರಿಗೊಳಿಸಲಾಗಿದೆ. ಜೋಡಿ ಲೆಕ್ಕ ಪತ್ರಗಳ ನಿರ್ವಹಣೆ ಮತ್ತು ಪಂಚತಂತ್ರದ ಮೂಲಕ ಲೆಕ್ಕ ಪತ್ರ ನಿರ್ವಹಣೆ ಮಾಡಲಾಗುತ್ತದೆ.

**ದಿನವಹಿ ಪುಸ್ತಕ** : ಗ್ರಾಮ ಪಂಚಾಯತಿಯ ದಿನ ನಿತ್ಯದ ತೆರಿಗೆ, ಶಿಲ್ಕುಗಳು ಇತ್ಯಾದಿ ರಸೀದಿಗಳ ಮೂಲಕ ಸಂಗ್ರಹಿಸುವ ಆದಾಯ ಲೆಕ್ಕವನ್ನು ನಿರ್ವಹಿಸಬೇಕಾಗುತ್ತದೆ.

**ನಗದು ಪುಸ್ತಕ** : ಗ್ರಾಮ ಪಂಚಾಯತಿಯ ಆಯವ್ಯಯ ಮತ್ತು ಲೆಕ್ಕಪತ್ರಗಳ ನಿಯಮ 2006 ರ ನಮೂನೆ 49 ನಿಯಮ 104 ಗ್ರಾಮ ಪಂಚಾಯತಿ ನಗದು ಪುಸ್ತಕವನ್ನು ನಿರ್ವಹಿಸುವುದರ ಬಗ್ಗೆ ತಿಳಿಸುತ್ತದೆ. ಈ ನಮೂನೆಯಲ್ಲಿ ಗ್ರಾಮ ಪಂಚಾಯತಿಯ ಸ್ವೀಕೃತಿ ಮತ್ತು ಪಾವತಿ ವಿವರವನ್ನು ಸಂಬಂಧಪಟ್ಟ ಕಾಲಂಗಳಲ್ಲಿ ಅನುಕ್ರಮವಾಗಿ ನಮೂದಿಸಬೇಕು. ಬ್ಯಾಂಕ್ ಖಾತೆಗಳಿಗೆ ಜಮೆ ಮತ್ತು ಆದಾಯಗಳನ್ನು ನಗದು ಪುಸ್ತಕದ ಎಡಭಾಗದಲ್ಲಿ ನಮೂದಿಸಬೇಕು. ನಗದು ಪುಸ್ತಕದ ಬಲಭಾಗದಲ್ಲಿ ಪಾವತಿಗಳಿಗೆ ಸಂಬಂಧಿಸಿದ ಆರ್ಥಿಕ ವ್ಯವಹಾರವನ್ನು ನಮೂದಿಸ ಬೇಕು.

**ಜನರಲ್ ಪುಸ್ತಕ** : ನಮೂನೆ 50 ರಲ್ಲಿ ಜನರಲ್ ಪುಸ್ತಕವನ್ನು ನಿರ್ವಹಿಸಬೇಕು. ಜನರಲ್ ಪುಸ್ತಕವನ್ನು ಮರುಹೊಂದಣಿಕೆ ಹಾಗೂ ತಪ್ಪಾದ ನಮೂದನ್ನು ಸರಿಪಡಿಸಲು ಬಳಸಬೇಕು

**ಲೆಡ್ಜರ್ ಪುಸ್ತಕ** : ನಮೂನೆ 52 ರಲ್ಲಿ ಸಾಮಾನ್ಯ ಲೆಡ್ಜರನ್ನು ನಿರ್ವಹಿಸಬೇಕು ಅದರಲ್ಲಿ ಪ್ರತಿಯೊಂದು ಬಗೆಯ ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳನ್ನು ಒಳಗೊಂಡ ಪ್ರತ್ಯೇಕ ಲೆಡ್ಜರ್ ಪುಟ ಇರಬೇಕು ಪ್ರತಿ ತಿಂಗಳ ಆರ್ಥಿಕ ಸ್ಥಿತಿ ಪಟ್ಟಿಯನ್ನು ಮತ್ತು ವಾರ್ಷಿಕ ಆದಾಯದ ಮತ್ತು ವೆಚ್ಚದ ವಿವರಣಾ ಪತ್ರಗಳನ್ನು ಮತ್ತು ಇನ್ನಿತರ ವಿವರಣಾ ಪ್ರತಗಳನ್ನು ಸಾಮಾನ್ಯ ಲೆಡ್ಜರಿನ ಆಧಾರದ ಮೇಲೆ ಸಿದ್ದಪಡಿಸಬೇಕು ಆದುದರಿಂದ ಆಯವ್ಯಯ ಪತ್ರವನ್ನು ಮಾಡುವಾಗ ಪ್ರಸ್ತುತ 8 ತಿಂಗಳ ಜಮಾ ಮತ್ತು ಖರ್ಚಿನ ನಿಖರವಾದ ಮಾಹಿತಿ ಲೆಡ್ಜರ್ ಪುಸ್ತಕದಲ್ಲಿ ದೊರೆಯುತ್ತದೆ.

ಈ ಮೇಲಿನ ಅಂಶಗಳೆಲ್ಲ ಗ್ರಾಮ ಪಂಚಾಯತಿಯಲ್ಲಿ ನಿರ್ವಹಣೆ ಮಾಡುವಾಗ ಆರ್ಥಿಕ ತಃಖ್ತೆಗಳಿರುತ್ತವೆ ಇವುಗಳ ಸರಿಯಾದ ನಿರ್ವಹಣೆಯಿಂದ ಹಿಂದಿನ ವರ್ಷದ ನಿಖರವಾದ ಜಮೆ ಮತ್ತು ಪಾವತಿಯ ಲೆಕ್ಕಗಳು ನಮಗೆ ಸಿಗುತ್ತವೆ. ಅವುಗಳು ಯಾವುವೆಂದರೆ

- ನಮೂನೆ 53 ರ ನಿಯಮ 108 ರ ಸ್ವೀಕೃತಿ ಮತ್ತು ಪಾವತಿ ಲೆಕ್ಕ
- ನಮೂನೆ 54 ರ ನಿಯಮ 108 ರ ಆರ್ಥಿಕ ಸ್ಥಿತಿ ಪಟ್ಟಿ (Tril Balance)
- ನಮೂನೆ 55 ರ ನಿಯಮ 109 ರ ಆದಾಯ ಮತ್ತು ಖರ್ಚಿನ ಲೆಕ್ಕ ( Income & Expenditure)
- ನಮೂನೆ 56 ರ ನಿಯಮ 110 ರ ಸಮತೋಲನಾ ಪಟ್ಟಿ (Balance Sheet)
- ನಮೂನೆ 57 ರ ನಿಯಮ 110 ರ ಆಸ್ತಿ ಮತ್ತು ಹೊಣೆಗಾರಿಕೆಗಳ (Assets & Liabilities)

ಮೇಲಿನ ಲೆಕ್ಕ ಪತ್ರಗಳ ಸರಿಯಾದ ನಿರ್ವಹಣೆಯಿಂದ ಮಾತ್ರ ಒಂದು ಗ್ರಾಮ ಪಂಚಾಯತಿಯು ನಿಖರವಾದ ಆಯವ್ಯಯವನ್ನು ಸಿದ್ದಪಡಿಸಲು ಸಾಧ್ಯ.

## II. ಆಯವ್ಯಯ ತಯಾರಿಸುವ ಸಂದರ್ಭದ ಪೂರ್ವದಲ್ಲಿ ಅನುಸರಿಸಬೇಕಾದ ಅಂಶಗಳು

1. ಒಟ್ಟು ಆದಾಯದ ಶೇ 40 ರಷ್ಟನ್ನು ಆಡಳಿತ ವೆಚ್ಚಕ್ಕಾಗಿ ನಿಗದಿಪಡಿಸುವುದು.

3. ಶೇ 40 ಆದಾಯ ತೆಗೆದ ನಂತರ ಶೇ 60 ರಲ್ಲಿ 25% ರಷ್ಟು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ

ಕಲ್ಯಾಣ ನಿಧಿ, ಅಂಗವಿಕಲರ ಕಲ್ಯಾಣ ನಿಧಿ ಶೇ 3% ರಷ್ಟನ್ನು ಕಡ್ಡಾಯವಾಗಿ ನಿಗದಿಪಡಿಸತಕ್ಕದ್ದು.

4. ಸರ್ಕಾರದ ಆದೇಶಗಳಿಗೆ, ನೌಕರರ ವೇತನಕ್ಕೆ, ವಿದ್ಯುತ್ ಬಿಲ್ಲು ನೀಡಲು, ಉಪಕರ ಪಾವತಿಸಲು, ಕುಡಿಯುವ ನೀರಿನ ವ್ಯವಸ್ಥೆ ಮಾಡಲು, ತ್ಯಾಜ್ಯ ವಿಲೇವಾರಿ ಮಾಡಲು, ಅಗತ್ಯ ಕಾರ್ಯಕ್ರಮಗಳಿಗೆ ಅವಶ್ಯಕತೆಗನುಗುಣವಾಗಿ ಹಣಕಾಸಿನ ಲಭ್ಯತೆಯನ್ನು ನಿಗದಿಪಡಿಸತಕ್ಕದ್ದು.

5. ಗ್ರಾಮ ಪಂಚಾಯತಿಯು ತನ್ನ ಕರ್ತವ್ಯಗಳನ್ನು ಅಚ್ಚುಕಟ್ಟಾಗಿ ನಡೆಸಲು, ಸೇವೆಗಳನ್ನು ನೀಡಲು, ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಅಗತ್ಯ ಅನುದಾನ ಮೀಸಲಿಡತಕ್ಕದ್ದು.

6. ಸರ್ಕಾರಗಳು ಇತ್ತೀಚೆಗೆ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸುತ್ತಿರುವುದರಿಂದ ಮುಂದಾಲೋಚನೆ ವಹಿಸಿ ಆಯವ್ಯಯ ಸಿದ್ದಪಡಿಸುವುದು.

7. ಗ್ರಾಮ ಪಂಚಾಯತಿಯ ವಾಸ್ತವ ನಿರೀಕ್ಷೆಗೆ ತಕ್ಕಂತೆ ಆಯವ್ಯಯ ತಯಾರಿಸತಕ್ಕದ್ದು ಇಲ್ಲವಾದಲ್ಲಿ ಆಡಳಿತ ಯಂತ್ರ ಕುಸಿಯುತ್ತದೆ.

8. ಸಾಲಪಡೆಯುವುದಕ್ಕೂ, ಸಾಲ ಮರುಪಾವತಿ ಮಾಡುವುದಕ್ಕೂ ಅವಕಾಶ ಕಲ್ಪಿಸುವುದು.

9. ಗ್ರಾಮ ಸಭೆ ಹಳ್ಳಿಯ ವಿಧಾನ ಸಭೆ, ಗ್ರಾಮ ಸಭೆ, ವಾರ್ಡ್ ಸಭೆ, ವಿಷೇಶ ಗ್ರಾಮ ಸಭೆ ಇನ್ನಿತರ ಕಾರ್ಯಕ್ರಮಗಳಲ್ಲಿ ಬರುವ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಳ್ಳುವುದು.

10. ಹೆಚ್ಚಿನ ಗ್ರಾಮ ಪಂಚಾಯತಿಗಳು ಸೌಕರ್ಯ ವಲಯಕ್ಕೆ ಶೇ 90 ಭಾಗ ಆಯವ್ಯಯದಲ್ಲಿ ಹಣಕಾಸು ನಿಗದಿಪಡಿಸುತ್ತಿದ್ದು ಉತ್ಪಾದನ ವಲಯ, ಸಾಮಾಜಿಕ ವಲಯಕ್ಕೂ ಅನುದಾನ ಮೀಸಲಿಡುವುದು.

11. ಬೇರೆ ಇಲಾಖೆಗಳಿಂದ, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ನಿಂದ ನಿರ್ವಹಿಸುವ ಕಾಮಗಾರಿಗಳ ಬಗ್ಗೆ ಗಮನವಿಟ್ಟುಕೊಳ್ಳಬಹುದು.

12. ಸರ್ಕಾರ ನೀಡುವ ಅನುದಾನವನ್ನು ಯಾವ ವಿಭಾಗಕ್ಕೆ ವ್ಯಯಿಸಬೇಕು ಎಂಬ ಮಾಹಿತಿ ಇಟ್ಟುಕೊಳ್ಳುವುದು.


13. ಸರ್ಕಾರದ ಜಾರಿಯಲ್ಲಿರುವ ಯೋಜನೆಗಳನ್ನು ಬಳಸಿಕೊಂಡು ಆದಾಯದ ಮೂಲವನ್ನು ಯಾವ ವಿಭಾಗಕ್ಕೆ ವ್ಯಯ ಮಾಡುವ ಬಗ್ಗೆ ಚಿಂತನೆ ಇರಲಿ.

ಗ್ರಾಮ ಪಂಚಾಯತಿ ಆಯವ್ಯಯ ಮತ್ತು ಲೆಕ್ಕಪತ್ರಗಳು ನಿಯಮಗಳು 2006ರಲ್ಲಿ ನಯಮ 11 ಮತ್ತು 12ರಲ್ಲಿ ಬಜೆಟ್‌ನ್ನು ತಯಾರಿಸುವ ವಿಧಾನವನ್ನು ತಿಳಿಸಿದ್ದು, ಅದರಂತೆ ನಮೂನೆ 1 ಮತ್ತು ಕೆಳಕಂಡ ತಃಖ್ತೆಗಳಲ್ಲಿ ಆಯವ್ಯಯವನ್ನು ತಯಾರಿಸಬೇಕು.

ನಮೂನೆ 1 ರಲ್ಲಿ ಸಾಮಾನ್ಯ ಘೋಷ್ವಾರೆಯನ್ನು ತಿಳಿಸಿದ್ದು ಇದರಲ್ಲಿ ಗ್ರಾಮ ಪಂಚಾಯತಿಯ ಒಟ್ಟು ಸ್ವೀಕೃತಿ ಮತ್ತು ವೆಚ್ಚಗಳ ಸಂಚಿತ ಘೋಷ್ವಾರೆ ಇರುತ್ತದೆ.

**ತಃಖ್ತೆ ಸಂಖ್ಯೆ–1 :** ಸ್ವೀಕೃತಿ ಮತ್ತು ವೆಚ್ಚಗಳ ಘೋಷ್ವಾರೆ ತಃಖ್ತೆ ಸಂಖ್ಯೆ 1ರಲ್ಲಿ ಗ್ರಾಮ ಪಂಚಾಯತಿಯ ಸ್ವೀಕೃತಿ ವೆಚ್ಚಗಳ ಘೋಷ್ವಾರೆಯಿದ್ದು ತಃಖ್ತೆ 11 ಮತ್ತು 111 ರಲ್ಲಿರುವ ಸ್ವೀಕೃತಿ ಮತ್ತು ವೆಚ್ಚಗಳ ವಿವರಗಳ ಆಧಾರದ ಮೇಲೆ ತಃಖ್ತೆ ಸಂ 1ನ್ನು ತಯಾರಿಸಬೇಕು

**ತಃಖ್ತೆ ಸಂ–11 :** ಒಂದು ಗ್ರಾಮ ಪಂಚಾಯತಿಯ 2016–17ನೇ ಸಾಲಿನ ಆಯವ್ಯಯವನ್ನು ಮಾಡುವ ಸಂದರ್ಭದಲ್ಲಿ ಹೊಂದಿನ ವರ್ಷದ ವಾಸ್ತವಿಕ ಲೆಕ್ಕದ ಶೀರ್ಷಿಕೆಯಲ್ಲಿ 2014–15, 2015–16 ನೇ ಸಾಲಿನ ಸ್ವೀಕೃತಿಯನ್ನು ನಮೂದಿಸಬೇಕು ಪ್ರಸ್ತುತ ವರ್ಷದ ಮೂಲ ಅಂದಾಜು ಶೀರ್ಷಿಕೆಯಲ್ಲಿ 2011–12ರಲ್ಲಿ ಗ್ರಾಮ ಪಂಚಾಯತಿ ಊಹಿಸಿದ ಆದಾಯದ ಸ್ವೀಕೃತಿ ಮೊತ್ತವನ್ನು ಗಮನದಲ್ಲಿರಿಸಬೇಕು. 8 ತಿಂಗಳ ವಾಸ್ತವಿಕ ಮೊತ್ತದಲ್ಲಿ 2011–12ನೇ ಸಾಲಿನಲ್ಲಿ ನವೆಂಬರ್ ತಿಂಗಳವರೆಗಿನ ವಾಸ್ತವಿಕ ಮೊತ್ತವನ್ನು ನಮೂದಿಸಬೇಕು. ಮುಂದಿನ 4 ತಿಂಗಳಿಗೆ ಬೇಕಾದ ನಿರೀಕ್ಷಿತ ಮೊತ್ತವನ್ನು ಪಂಚಾಯತಿ ನಿರ್ಧರಿಸಿ ನಮೂದಿಸಬೇಕು. ಒಟ್ಟು ಕಾಲಂನಲ್ಲಿ 8 ಮತ್ತು 4




ತಿಂಗಳ ಒಟ್ಟು ಸ್ವೀಕೃತಿಯನ್ನು ನಮೂದಿಸಬೇಕು.

ಮುಂದಿನ ವರ್ಷದ ಅಂದಾಜು ಆದಾಯ ಎಂದರೆ 2012–13ನೇ ಸಾಲಿನಲ್ಲಿ ಪಂಚಾಯತಿಗೆ ವಿವಿಧ ಬಾಬ್ತುಗಳಿಂದ ಬರುವಂತಹ ಆದಾಯ. ಈ ಅಂಶವನ್ನು ಹಿಂದಿನ ಸಾಲಿನಲ್ಲಿ ಪಂಚಾಯತಿಗೆ ಬರುವಂತಹ ಸ್ವೀಕೃತಿಯ ಆಧಾರದ ಮೇಲೆ ಮತ್ತು ಮುಂದೆ ಪಂಚಾಯತಿಯ ನಿರೀಕ್ಷಿತ ಆದಾಯವನ್ನು ಗಮನದಲ್ಲಿಟ್ಟು ತಯಾರಿಸಬೇಕು.

ಮೇಲಿನ ಕೋಷ್ಠಕದಲ್ಲಿ ಆಯವ್ಯಯ ಪತ್ರಿಕೆಯನ್ನು ಮಾಡುವಾಗ ಗ್ರಾಮ ಪಂಚಾಯತಿ ಪ್ರಸಕ್ತ ವರ್ಷದ 8 ತಿಂಗಳ ವಾಸ್ತವಿಕ ಸ್ವೀಕೃತಿಯನ್ನು ಪಟ್ಟಿ ಮಾಡಿಕೊಳ್ಳಬೇಕು.

**ತಃಖ್ತೆಸಂಖ್ಯೆ–111 :** ಒಂದು ಗ್ರಾಮ ಪಂಚಾಯತಿಯು 2012–13ನೇ ಸಾಲಿನ ಆಯವ್ಯಯವನ್ನು ಮಾಡುವ ಸಂದರ್ಭದಲ್ಲಿ ಹಿಂದಿನ ವರ್ಷದ ವಾಸ್ತವಿಕ ಲೆಕ್ಕಶೀರ್ಷಿಕೆಯಲ್ಲಿ 2010–11ನೇ ಸಾಲಿನ ವೆಚ್ಚವನ್ನು ನಮೂದಿಸಬೇಕು. ಪ್ರಸ್ತುತ ವರ್ಷದ ಮೂಲ ಅಂದಾಜು ಶೀರ್ಷಿಕೆಯಲ್ಲಿ 2011–12ರಲ್ಲಿ ಗ್ರಾಮ ಪಂಚಾಯತಿ ಊಹಿಸಿದ ವ್ಯಯದ ಪಾವತಿ ಮೊತ್ತವನ್ನು ನಮೂದಿಸಬೇಕು. 8 ತಿಂಗಳ ವಾಸ್ತವಿಕ ಮೊತ್ತದಲ್ಲಿ 2011–12ನೇ ಸಾಲಿನಲ್ಲಿ ನವಂಬರ್ ತಿಂಗಳವರೆಗಿನ ವಾಸ್ತವಿಕ ವೆಚದ್ಚ ಮೊತ್ತವನ್ನು ನಮೂದಿಸಬೇಕು. ಮುಂದಿನ 4 ತಿಂಗಳಿಗೆ ಬೇಕಾದ ನಿರೀಕ್ಷಿತ ವೆಚ್ಚದ ಮೊತ್ತವನ್ನು ಪಂಚಾಯತಿ ನಿರ್ಧರಿಸಿ ನಮೂದಿಸಬೇಕು. ಒಟ್ಟು ಕಾಲಂನಲ್ಲಿ 8 ಮತ್ತು 4 ತಿಂಗಳ ಒಟ್ಟು ವೆಚ್ಚವನ್ನು ನಮೂದಿಸಬೇಕು. ಮುಂದಿನ ವರ್ಷದ ಅಂದಾಜು ವ್ಯಯ ಅಂದರೆ 2012–13ನೇ ಸಾಲಿನಲ್ಲಿ ಪಂಚಾಯತಿ ವಿವಿಧ ಬಾಬ್ತುಗಳಿಗೆ ಖರ್ಚು ಮಾಡುವಂತಹ ಅಂಶವನ್ನು ಹಿಂದಿನ ಸಾಲಿನಲ್ಲಿ ಪಂಚಾಯಿತಿಗೆ ಬರುವಂತಹ ವೆಚ್ಚದ ಆಧಾರದ ಮೇಲೆ ತಯಾರಿಸುತ್ತಾರಲ್ಲದೆ ಮುಂದೆ ಪಂಚಾಯತಿಯ ನಿರೀಕ್ಷಿತ ವೆಚ್ಚವನ್ನು ಗಮನದಲ್ಲಿಟ್ಟು ತಯರಿಸಬೇಕು.

**ನಮೂನೆ 1 ಎ:** ದರ ಮತ್ತು ತೆರಿಗೆಗಳಿಂದ ಸ್ವೀಕೃತಿ ಡಿ.ಸಿ.ಬಿ. ಬಾಬ್ತುವಾರು ವಿವರ (ತಃಖ್ತೆ IIರ ಭಾಗ ಎಗೆ ವಿವರಗಳು)

**ನಮೂನೆ ಬಿ:** ಗ್ರಾಮ ಪಂಚಾಯತಿ ಆಸ್ತಿಯಿಂದ ನಿರೀಕ್ಷಿಸಿದ ಸ್ವೀಕೃತಿಗಳ ಡಿ.ಸಿ.ಬಿ. ಬಾಬ್ತುವಾರು ವಿವರಗಳು (ತಃಖ್ತೆ IIರ ಭಾಗ ಬಿ1ಕ್ಕೆ ವಿವರಗಳು)

**ನಮೂನೆ 1ಸಿ:** ಗ್ರಾಮ ಪಂಚಾಯತಿ ಅಧಿಕಾರದಿಂದ ನಿರೀಕ್ಷಿಸಿದ ಸ್ವೀಕೃತಿಗಳ ಡಿ.ಸಿ.ಬಿ. ಬಾಬ್ತುವಾರು ವಿವರಗಳು (ತಃಖ್ತೆ IIರ ಭಾಗ ಬಿ2ಕ್ಕೆ ವಿವರಗಳು)

**ನಮೂನೆ 1ಡಿ:** ಗ್ರಾಮ ಪಂಚಾಯತಿ ಕಛೇರಿ ಸಿಬ್ಬಂದಿ ವೇತನ ವಿವರಗಳು

**ನಮೂನೆ 1ಇ:** ಅಭಿವೃದ್ಧಿ ಕಾಮಗಾರಗಿಳು (ತಃಖ್ತೆ IIIರ ಭಾಗಬಿಗೆ ವಿವರಗಳು)

**ನಮೂನೆ 1 ಎಫ್:** ಸಾಲ ಮತ್ತು ಮರು ಪಾವತಿ ವಿವರಗಳು (ತಃಖ್ತೆ IIIರ ಭಾಗ ಡಿಗೆ ವಿವರಗಳು)

**ನಮೂನೆ 1ಜಿ:** ಸಾಮಾನ್ಯ ರಾಜಸ್ವದಿಂದ ಸಾಲ ತೀರುವಳಿ ನಿಧಿಗೆ ವರ್ಗಾವಣೆ.

### ಗ್ರಾಮ ಪಂಚಾಯಿತಿ ಆಯವ್ಯಯವನ್ನು ತಯಾರಿಸಿದ ನಂತರ ಗಮನಿಸಬೇಕಾದ ಅಂಶಗಳು

ಯಾವುದೇ ಮೂಲಭೂತ ಸೌಕರ್ಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ

ಕಾರ್ಯಕ್ರಮಗಳನ್ನು ರೂಪಿಸುವಾಗ ಆಯವ್ಯಯದಲ್ಲಿ ಅವಕಾಶ ಮಾಡಲಾಗಿದೆಯೇ ಎಂಬುದನ್ನು ಗಮನಿಸಬೇಕು.

ಗ್ರಾಮ ಪಂಚಾಯತಿ ಆಯವ್ಯಯ ಮತ್ತು ಲೆಕ್ಕಪತ್ರ ನಿಯಮಗಳು 2006ರಲ್ಲಿನ ನಮೂನೆ2 (ನಿಯಮ 15) ಆಯವ್ಯಯ ನಿಯಂತ್ರಣ ರಿಜಿಸ್ಟರ್‌ನ್ನು ಇಟ್ಟು ನಿರ್ವಹಿಸಬೇಕು. ಹೀಗೆ ಪ್ರತಿಯೊಂದು ಲೆಕ್ಕಶೀರ್ಷಿಕೆಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕೋಷ್ಟಕವನ್ನು ನಿರ್ವಹಿಸಿ ಆಯವ್ಯಯದಲ್ಲಿ ತೆಗೆದಿರಿಸಿದ ಖರ್ಚನ್ನು ನಿಯಂತ್ರಿಸಬಹುದಾಗಿದೆ.

**ಬಜೆಟ್‌ನಲ್ಲಿ ಅವಕಾಶ ಮಾಡದಿದ್ದರೂ ಸಂದಾಯ ಮಾಡಬಹುದಾದ ಬಾಬ್ತುಗಳು**

- ನಿಯಮ 14ರಅನ್ವಯ ಆಯವ್ಯಯ ಹಂಚಿಕೆ ಇಲ್ಲದೆ ಕೆಲವೊಂದು ಸಂದಾಯಗಳನ್ನು ಮಾಡಬಹುದಾಗಿದೆ. ಅವುಗಳೆಂದರೆ:

ನಿಯಮಾನುಸಾರ ಹಿಂದಿರುಗಿಸಬೇಕಾದ ಪಂಚಾಯತಿ ತೆರಿಗೆ ಮತ್ತು ಇತರೆ ಹಣದ ಮರುಪಾವತಿ

- ಗುತ್ತಿಗೆದಾರರಿಗೆ ಸೇರಿದ ಠೇವಣಿಯ ಮರುಪಾವತಿ
- ಗ್ರಾಮ ಪಂಚಾಯತಿ ಪರಿಹಾರ ರೂಪವಾಗಿ ನೀಡಬೇಕಾದ ಹಣ
- ಸರ್ಕಾರದ, ಜಿಲ್ಲಾ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ಆದೇಶದ ಪ್ರಕಾರ
- ಸಿವಿಲ್ ನ್ಯಾಯಾಲಯದಡಿಕ್ರಿಇಲ್ಲವೇ ಆದೇಶದ ಪ್ರಕಾರ
- ನೀರು ಸರಬರಾಜು ನಿರ್ವಹಣೆಗಾಗಿ ಸರ್ಕಾರ ಅಥವಾ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ನಿರ್ವಹಿಸುವ ಆಸ್ಪತ್ರೆಗಳು ಹಾಗೂ ಇತರೆ ಸಂಸ್ಥೆಗಳು ಅಥವಾ ಸೇವೆಗಳಿಗೆ ಕೊಡಬೇಕಾದ ವಂತಿಗೆಗಳು.

ನಿಯಮ 15ರಂತೆ ಈ ಮೇಲಿನ ವೆಚ್ಚವನ್ನು ಮಾಡಿದ ನಂತರ ಪರಿಷ್ಕೃತ ಬಜೆಟ್‌ನಲ್ಲಿ ಸೇರಿಸಬೇಕು. ಪರಿಷ್ಕೃತ ಆಯವ್ಯಯವನ್ನು ತಯಾರಿಸುವಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮತಿ ಇಲ್ಲದೆ ನಿಗದಿಪಡಿಸಿದ ಅನುದಾನದ ಶೇ 10ಕ್ಕಿಂತ ಕಡಿಮೆ ಮಾಡುವಂತಿಲ್ಲ.

ಗ್ರಾಮ ಪಂಚಾಯತಿಗಳು ಆಯವ್ಯಯದಲ್ಲಿ ನಿಗದಿಪಡಿಸುವ ಬಾಬ್ತಿನ ಹೊರತಾಗಿ ಹಣವಿಲ್ಲದೆ ಮಾಡಬಹುದಾದ ಕೆಲಸಗಳನ್ನು ಸಾರ್ವಜನಿಕ ಸಹಭಾಗಿತ್ವ, ವಂತಿಕೆ ಸಂಗ್ರಹಣೆ, ಕೊಡುಗೆಗಳನ್ನು ಪಡೆದು ಗ್ರಾಮದ ಅಭಿವೃದ್ದಿಯಲ್ಲಿ ಪಾಲ್ಗೊಳ್ಳುವುದು. ತೆರಿಗೆ ಸಂಗ್ರಹಣೆ ಸವಾಲಾಗಿರುವ ಇಂತಹ ಸಂದರ್ಭದಲ್ಲಿ ಹಳೆ ಪದ್ಧತಿಯಾದ ಮನೆ ಮನೆಗೆ ತೆರಳಿ ವಸೂಲು ಮಾಡುವ ಬದಲು ಕಡ್ಡಾಯ ತೆರಿಗೆ ಪಾವತಿಗೆ ಕ್ರಮಕೈಗೊಳ್ಳಲು ಅಥವಾ ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ಪಾವತಿಸಲು ಕ್ರಮಗಳನ್ನು ಗ್ರಾಮ ಪಂಚಾಯತಿಗಳು ಸರ್ಕಾರಗಳು ಕ್ರಮಕೈಗೊಂಡರೆ ಮಾತ್ರ ಗ್ರಾಮ ಪಂಚಾಯತಿಗಳು ಅಭಿವೃದ್ದಿಯತ್ತ ಮುಖ ಮಾಡಲು ಸಾಧ್ಯವಾಗುತ್ತದೆ.

ಗ್ರಾಮ ಪಂಚಾಯತಿಗಳು ಸೌಕರ್ಯ ವಲಯಕ್ಕೆ ಒತ್ತುಕೊಡದೆ ಸಾಮೂಹಿಕ ವಲಯವಾದ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಮತ್ತು ಇತರ ವರ್ಗಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಇತರ ಹಿತ ದೃಷ್ಟಿಯಿಂದ ಉತ್ತೇಜನ ನೀಡುವುದು. ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸುವುದು.

ಹಾಗೆಯೇ ಉತ್ಪಾದನಾ ವಲಯವಾದ ಕೃಷಿ ಉತ್ಪಾದನೆ, ಪಶು ಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ನಿವಾರಣಾ ಕಾರ್ಯಕ್ರಮಗಳಿಗೆ ಸಂಬಂದಿಸಿದ ಕಾರ್ಯಕ್ರಮಗಳನ್ನು ನೆರವೇರಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ❄

ಯಶೋಗಾಥೆ

# ಬದುಕು ಬೆಳಕಾಗಿಸಿದ ರಾಜೀವ್ ಗಾಂಧಿ ಚೈತನ್ಯ ಯೋಜನೆ



ಮಲ್ಲಿಕಾರ್ಜುನ ಪಿ. ಎಸ್.

ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಲಾಭ ಪಡೆದು ಶ್ರೀ ಶರಣನವರು ಹೈನುಗಾರಿಕೆ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

ಸಂಜೀವಿನಿ – ಎನ್.ಆರ್.ಎಲ್.ಎಂ. ಯೋಜನೆಯಡಿ ಬರುವ ರಾಜೀವ್ ಗಾಂಧಿ ಚೈತನ್ಯ ಯೋಜನೆಯಲ್ಲಿ ಕೊಪ್ಪಳ ತಾಲ್ಲೂಕಿನಲ್ಲಿ ಸುಮಾರು ಜನ ನಿರುದ್ಯೋಗಿ ಯುವಕರು/ಯುವತಿಯರು ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಪಡೆದುಕೊಂಡಿರುತ್ತಾರೆ. ಅಲ್ಲದೇ ಸ್ವಯಂ ಉದ್ಯೋಗಗಳನ್ನು ಕೈಗೊಂಡು ಸ್ವಾವಲಂಬಿಗಳಾಗಿ ಜೀವನ ಸಾಗಿಸುತ್ತಿದ್ದಾರೆ.



ನಮ್ಮ ಹಲಗೇರಿ ಶರಣಪ್ಪ ಎಸ್‌ಎಸ್‌ಎಲ್‌ಸಿ ಓದಿ, ಸಾಮಾನ್ಯವಾಗಿ ಹೊಲದ ಕೆಲಸ ಮಾಡೋಕೆ ಹೆಚ್ಚಿನ ಆಸಕ್ತಿ ತೋರಲಿಲ್ಲ. ಬೆಂಗಳೂರು–ಮಂಗಳೂರು ಹೋಗಿ ಯಾವ್ದನ್ನ ಪ್ಯಾಕ್ಟ್ರೀಲಿ ಮೈನೋವಿಲ್ದೇರೊ ಕೆಲ್ಸ ಸಿಗಬೇಕು ಒಳ್ಳೇ ಸಂಬಳ ಸಿಗಲಿ ಅಂತಾ ಕನ್ಸು ಕಾಣ್ತಾಯಿರ್ತಾನೆ, ಕಡೆಗೆ ಅಂಗಂದ್‌ಕೊಂಡಂಗೆ ಒಂದಷ್ಟು ಕಂಪನಿಗಳಲ್ಲಿ ತನ್ನ ಬೆವರು ಸುರಿಸ್ತಾನೆ ಆದ್ರೆ ಸಂಬಳ ಊಟ, ಬಟ್ಟೆ ರೂಮಿಗೆ ಸಾಲ್ತಾಯಿತ್ತು. ಕಡೆಗೆ ಬೇಸತ್ತು ಹಳ್ಳಿಲಿ ಜಗಲಿಮೇಲೆ ಸುಮ್ಮನೇ ಚೌಕಾಬಾರ ಆಡ್ತಾ ಕಾಲ ಕಳೀತಿರ್ತಾನೆ. ಇಂತಹ

| ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಫಲಾನುಭವಿಯ ಹೆಸರು | ಹೈನುಗಾರಿಕೆ ಚಟುವಟಿಕೆಗೆ ಸ್ವ–ಉದ್ಯೋಗದಡಿ ಸಾಲದ ಮೊತ್ತ (ರೂ.ಗಳಲ್ಲಿ) | ಇತರೆ ಉಳಿತಾಯ (ರೂಗಳಲ್ಲಿ) | ಕೈಗೊಂಡ ಚಟುವಟಿಕೆಗಳು | ಹೈನುಗಾರಿಕೆ ಚಟುವಟಿಕೆಯ ನಿವ್ವಳ ಆದಾಯ ವಾರ್ಷಿಕ (ರೂಗಳಲ್ಲಿ) | ಕುಟುಂಬಗಳ ಇಂದಿನ ಆದಾಯ (ರೂಗಳಲ್ಲಿ) |
|---|---|---|---|---|---|
| ಶರಣಪ್ಪ | 50,000 | 1,55,000 | ಹಸು ಸಾಕಾಣಿಕೆ | 2,16,000 | 2,16,000 |

ಜಿಲ್ಲಾ ವ್ಯವಸ್ಥಾಪಕರು (ಎಸ್.ಡಿ & ಕಾಂ), ಸಂಜೀವಿನಿ, ಜಿಲ್ಲಾ ಪಂಚಾಯತ್, ಕೊಪ್ಪಳ




ಸಂಧರ್ಭದಲ್ಲಿ ತನ್ನ ಗೆಳೆಯ ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಕುರಿತು ತಿಳಿಸಿದ ನಂತರ ಅದ್ರಲ್ಲಿ ಅರ್ಜಿ ಹಾಕಿ ಸೌಲಭ್ಯ ಪಡೆದು ಇಂದು ಹೈನುಗಾರಿಕೆ ಚಟುವಟಿಕೆಯಲ್ಲಿ ಲಕ್ಷ ಲಕ್ಷ ಕಾಸು ನೋಡೋದಲ್ಲದೆ ತನ್ನ ಜೀವನ ರೂಪಿಸಿಕೊಂಡು ಇತರರಿಗೂ ಮಾದರಿಯಾಗಿದ್ದಾನೆ.

ಅದರಲ್ಲಿ ಕೊಪ್ಪಳ ತಾಲ್ಲೂಕಿನ ಹಲಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಹಲಗೇರಿ ಗ್ರಾಮದ ಶ್ರೀ ಶರಣಪ್ಪ ಉತ್ತಂಗಿಯವರು ಸದರಿ ಯೋಜನೆಯಡಿ ಸ್ವಯಂ ಉದ್ಯೋಗದ ತರಬೇತಿ ಪಡೆದು, ಬ್ಯಾಂಕ್‌ವತಿಯಿಂದ ಸಾಲ ಪಡೆದು, ಯೋಜನೆಯ ಸಹಾಯಧನವನ್ನು ಪಡೆದುಕೊಂಡು ಉತ್ತಮವಾದ ರೀತಿಯಲ್ಲಿ ಹೈನುಗಾರಿಕೆ ಚಟುವಟಿಕೆಯನ್ನು ಅನುಷ್ಠಾನ ಮಾಡಿರುತ್ತಾರೆ.

ಕೊಪ್ಪಳ ತಾಲ್ಲೂಕಿನ ಹಲಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಹಲಗೇರಿ ಗ್ರಾಮದ ಶ್ರೀ ಶರಣಪ್ಪ ಉತ್ತಂಗಿಯವರು ಮೂಲತ: ಕೃಷಿ ಕುಟುಂಬದವರು. ಇವರು 10 ನೇ ತರಗತಿ ವ್ಯಾಸಾಂಗ ಮುಗಿಸಿದ ನಂತರ ಪೆಟ್ರೋಲ್ ಬಂಕ್, ಕಿರ್ಲೋಸ್ಕರ್ ಕಂಪನಿಯಂತಹ ಬೇರೆ ಬೇರೆ ಖಾಸಗಿ ಕಂಪನಿಗಳಲ್ಲಿ ಅಲ್ಲಿನ ಕಡಿಮೆ ವೇತನ, ಕೆಲಸದ ಒತ್ತಡದೊಂದಿಗೆ ಕೆಲಸ ನಿರ್ವಹಿಸಿಕೊಂಡು ಹೋಗುತ್ತಿದ್ದರು. ಅದೆಲ್ಲವನ್ನು ಸಹಿಸಲಾಗದೇ ಕೊನೆಗೆ ಸ್ವಯಂ ಉದ್ಯೋಗವನ್ನು ಕೈಗೊಳ್ಳುವ ಕನಸಿನೊಂದಿಗೆ ಆ ದಿಶೆಯಲ್ಲಿ ಸಾಕಷ್ಟು ಪ್ರಯತ್ನವನ್ನು ಮಾಡಿ, ಕೊನೆಗೆ ರಾಜೀವ ಗಾಂಧಿ ಚೈತನ್ಯ ಯೋಜನೆ ಮತ್ತು ಗ್ರಾಮಶಕ್ತಿ ಯೋಜನೆಗಳಿಂದ ಇವರ ಸ್ವಯಂ ಉದ್ಯೋಗದ ಕನಸು ನನಸಾಗಿದೆ.

ಶ್ರೀ ಶರಣಪ್ಪನವರು ತಮಗಿರುವ 1/2 ಎಕರೆ ಜಮೀನಿನಲ್ಲಿ ಹುಲ್ಲನ್ನು ಬೆಳೆಸಿ, ರಾಜೀವ ಗಾಂಧಿ ಚೈತನ್ಯ ಯೋಜನೆಯಡಿ ನೀಡಿದ 50,000/- ರೂ.ಗಳಲ್ಲಿ ಒಂದು ಎಚ್.ಎಫ್. ತಳಿ ಹಸುವನ್ನು ಖರೀದಿಸಿದ್ದಾರೆ. ಅಲ್ಲದೇ ಗ್ರಾಮಶಕ್ತಿ ಯೋಜನೆಯಿಂದ ನೀಡಿದ 75,000/- ಗಳಿಂದ ಮತ್ತೊಂದು ಎಚ್.ಎಫ್. ತಳಿ ಹಸುವನ್ನು ಖರೀದಿಸಿ, ಹಸು ಸಾಕಾಣಿಕೆಗೆ ಬೇಕಾದ ಶೆಡ್ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಹಾಗೆಯೇ ತಮ್ಮ ಜಮೀನಿನ ಮೇಲೆ ಬ್ಯಾಂಕ್ ನಿಂದ 80,000/- ರೂ.



ಸಾಲ ತೆಗೆದುಕೊಂಡು, ಅದರಿಂದ ಮತ್ತೆರಡು ಎಚ್.ಎಫ್. ತಳಿ ಹಸುಗಳನ್ನು ಖರೀದಿಸಿದ್ದಾರೆ. ಈಗ ಇವರ ಹತ್ತಿರ ಒಟ್ಟು 4 ಹಸುಗಳಿದ್ದು, ಪ್ರತಿ ಹಸುವಿನಿಂದ ಒಂದು ದಿನಕ್ಕೆ 12 ಲೀಟರ್ ನಂತೆ ಒಟ್ಟು ನಾಲ್ಕು ಹಸುಗಳಿಂದ 48 ಲೀಟರ್ ಹಾಲನ್ನು ಪಡೆದು, ಅದನ್ನು ಅದೇ ಗ್ರಾಮದಲ್ಲಿರುವ ಹಾಲು ಉತ್ಪಾದಕರ ಸಂಘಕ್ಕೆ ಹಾಕುತ್ತಾರೆ. ಇದರಿಂದ ಅವರಿಗೆ 48*26=1248 ರೂ. ಬರುತ್ತದೆ. ಅದರಲ್ಲಿ ಇಲ್ಲಾ ಖರ್ಚುಗಳನ್ನು ತೆಗೆದು 500 ರಿಂದ 600 ರೂ. ವರೆಗೆ ಲಾಭ ಪಡೆಯುತ್ತಾರೆ. ಅಂದರೆ ಒಂದು ತಿಂಗಳಿಗೆ 600*30=18000/- ಗಳ ನಿವ್ವಳ ಲಾಭವನ್ನು ಪಡೆಯುವುದರೊಂದಿಗೆ ಸ್ವಾವಲಂಬಿಯಾಗಿ ನೆಮ್ಮದಿಯ ಜೀವನ ಸಾಗಿಸುತ್ತಿದ್ದಾರೆ.

# ಹಸಿರು ಹಬ್ಬಕ್ಕೆ ಚಾಲನೆ ನೀಡಿದ ಗ್ರಾಮ ಪಂಚಾಯತಿ

ಯಶೋಗಾಥೆ

– ಪ್ರಶಾಂತ್. ಎನ್

ಗೊರ್ತಪಲ್ಲಿ ಗ್ರಾಮ ಪಂಚಾಯತಿಯು ಬಾಗೇಪಲ್ಲಿ ತಾಲ್ಲೂಕಿನ ಕೊನೆಯ ಗ್ರಾಮ ಪಂಚಾಯತಿಯಾಗಿರುತ್ತದೆ. ಇದು ನೆರೆಯ ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿದ್ದು ಜನರು ಶೇಂಗಾ, ರಾಗಿ, ಜೋಳ ಮುಂತಾದ ಬೆಳೆಗಳನ್ನು ಬೆಳೆಯುತ್ತಿರುತ್ತಾರೆ. ಈ ಗ್ರಾಮ ಪಂಚಾಯತಿಯಲ್ಲಿ ಜನರು ಹಿಂದೆ ವಲಸೆ ಹೋಗುವುದು ಸಾಮಾನ್ಯವಾಗಿತ್ತು. ಇಲ್ಲಿನ ಜಲ ಮತ್ತು ಸಾಮೂಹಿಕ ಭೂಮಿಗಳು ಬರಡಾಗಿದ್ದು ಜನರು ವಲಸೆ ಹೋಗಿ ಜೀವನವನ್ನು ನಡೆಸುತ್ತಿದ್ದರು. ಆ ಸಮಯದಲ್ಲಿ ಜಿಲ್ಲಾ ಪಂಚಾಯತಿ ಚಿಕ್ಕಬಳ್ಳಾಪುರ ಮತ್ತು ಚಿಂತಾಮಣಿಯ ಫೌಂಡೇಶನ್ ಫಾರ್ ಇಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆ ಈ ಗ್ರಾಮ ಪಂಚಾಯತಿಗೆ



ಭೇಟಿ ನೀಡಿ, ಹಳ್ಳಿಗಳಲ್ಲಿ ಸಭೆಗಳನ್ನು ಏರ್ಪಡಿಸಿ, ಸಾಮೂಹಿಕ ಭೂಮಿಗಳು ಮತ್ತು ಜಲಮೂಲಗಳ ಕುರಿತು ಗ್ರಾಮಸ್ಥರಿಗೆ ತಿಳುವಳಿಕೆ ನೀಡಿತು. ಈ ರೀತಿ ಸಜ್ಜುಪಲ್ಲಿ, ಗೊರ್ತಪಲ್ಲಿ, ದೊನಕೊಂಡಾ, ಶ್ರೀರಾಮಪುರ ಮತ್ತು ಚೆಲೂರ್ಪಲ್ಲಿ ಗ್ರಾಮಗಳಲ್ಲಿ ಸಭೆ, ತರಬೇತಿ ಮತ್ತು ಅಧ್ಯಯನ ಪ್ರವಾಸಗಳನ್ನು ಏರ್ಪಡಿಸಿ ಜನರಲ್ಲಿ ಸಾಮೂಹಿಕ ಭೂಮಿಗಳ ಕುರಿತು ತಿಳುವಳಿಕೆ ನೀಡಿತು. ಈ ನಿಟ್ಟಿನಲ್ಲಿ ಗ್ರಾಮಸ್ಥರು ಗ್ರಾಮ ಮಟ್ಟದಲ್ಲಿ ಗ್ರಾಮಾಭಿವೃದ್ಧಿ ಸಮಿತಿಗಳನ್ನು ರಚಿಸಿ ತಮ್ಮ ತಮ್ಮ ಸಾಮೂಹಿಕ ಭೂಮಿಗಳನ್ನು ಸಂರಕ್ಷಿಸಿಕೊಳ್ಳುವಲ್ಲಿ ಅಡಿಯಿಟ್ಟರು. ಹೀಗೆ ಪ್ರಾರಂಭವಾದ ಈ ಪ್ರಕ್ರಿಯೆ ಇಂದು ಸುಮಾರು 500 ಎಕರೆ ಗೋಮಾಳವನ್ನು ಸಂರಕ್ಷಿಸಿ ಅದನ್ನು ಹಸಿರಾಗಿಸಿ ಪರಿವರ್ತಿಸಿದೆ.

ಈ ರೀತಿ ಪ್ರಾರಂಭವಾದ ಪ್ರಕ್ರಿಯೆಗೆ 2005 ರಲ್ಲಿ ಆರಂಭವಾದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಗ್ರಾಮಸ್ಥರಿಗೆ ವರದಾನವಾಯಿತು. 2008–09 ರಿಂದ ಗೋಕುಂಟೆ, ಚೆಕ್ ಡ್ಯಾಮ್, ಸಸಿನಾಟಿ, ನಾಲಾಬದು ಮುಂತಾದ ಕಾಮಗಾರಿಗಳನ್ನು ಸಾಮೂಹಿಕ ಮತ್ತು ಸ್ವಂತ ಜಮೀನುಗಳಲ್ಲಿ ಜನರು ಕೈಗೊಂಡರು.

ಸಾಮೂಹಿಕ ಭೂಮಿಗಳು ಮತ್ತು ಜಲಮೂಲಗಳ ಕುರಿತು ಗ್ರಾಮಸ್ಥರಿಗೆ ತಿಳುವಳಿಕೆ ನೀಡಿ ಸುಮಾರು 500 ಎಕರೆ ಗೋಮಾಳವನ್ನು ಸಂರಕ್ಷಿಸಿ ಅದನ್ನು ಹಸಿರಾಗಿಸಿ ಪರಿವರ್ತಿಸಲಾಗಿದೆ.

ಜಿಲ್ಲಾ ಐ.ಇ.ಸಿ. ಸಂಯೋಜಕರು, ಜಿಲ್ಲಾ ಪಂಚಾಯತಿ ಚಿಕ್ಕಬಳ್ಳಾಪುರ



ಈ ವರ್ಷ ಅಂದರೆ 2015–16 ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ ಹಸೀರಿಕರಣ ಕಾರ್ಯಕ್ರಮಕ್ಕೆ ಒತ್ತು ನೀಡಿ ಎಲ್ಲ ತಾಲ್ಲೂಕು ಪಂಚಾಯತಿಗಳಿಗೆ ನರೇಗಾ ಅಡಿಯಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ತೆಗೆದುಕೊಳ್ಳಲು ತಿಳಿಸಿತು. ಅದೇ ಪ್ರಕಾರ ತಾಲ್ಲೂಕು ಪಂಚಾಯತಿ ಬಾಗೇಪಲ್ಲಿ ಎಲ್ಲ ಗ್ರಾಮ ಪಂಚಾಯತಿಗಳಿಗೆ ಅರಣ್ಯೀಕರಣ ಕಾಮಗಾರಿಗಳನ್ನು ಮುಖ್ಯವಾಗಿ ಗೋಮಾಳ ಮತ್ತು ಕೆರೆಯಂಗಳದಲ್ಲಿ ಗಿಡ ನಾಟಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿತು. ಇದಕ್ಕೆ ಪೂರಕವೆಂಬಂತೆ ಸಾಮಾಜಿಕ ಅರಣ್ಯ ಇಲಾಖೆಯ ಅಧಿಕಾರಿಗಳು ಗ್ರಾಮ ಪಂಚಾಯತಿಗಳಿಗೆ ಪೂರ್ಣ ಸಹಕಾರ ನೀಡಿದರು.

ಅಂದಾಜು ಪಟ್ಟಿ ತಯಾರಿಕೆ, ಸ್ಥಳ ಪರಿಶೀಲನೆ, ಎನ್ ಎಮ್ ಆರ್ ನೀಡಿಕೆ ಮುಂತಾದ ಚಟುವಟಿಕೆಗಳನ್ನು ತ್ವರಿತವಾಗಿ ಕೈಗೊಳ್ಳಲು ಅರಣ್ಯ ಇಲಾಖೆ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು ಪಣ ತೊಟ್ಟು ಕಾಮಗಾರಿಗಳನ್ನು ಸುಲಭವಾಗಿ ನಡೆಸಲು ಸಹಕಾರ ನೀಡಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಜನರಿಗೆ ಫಾರ್ಮ್ 6 ನೀಡಿ ಕಾಮಗಾರಿ ಪ್ರಾಂಭಿಸಲು ಜನರನ್ನು ಉತ್ತೇಜಿಸಿದರು. ಈ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ನೆಲ ಜಲ ಸಂರಕ್ಷಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಚಿಂತಾಮಣಿಯ ಫೌಂಡೇಶನ್ ಫಾರ್ ಇಕಲಾಜಿಕಲ್ ಸೆಕ್ಯೂರಿಟಿ ಸಂಸ್ಥೆ ಕೂಡ ಸಹಕಾರ ನೀಡಿತು. ಜನರಿಗೆ ಅಗತ್ಯ ಮಾಹಿತಿ ನೀಡಿ ಅವರಿಂದ ಈ ಕಾಮಗಾರಿಗಳನ್ನು ಕೈಗೊಳ್ಳಲು ಉತ್ತೇಜಿಸಿತು. ಕಾಮಗಾರಿಗಳ ಗುಣಮಟ್ಟ ಕಾಪಾಡಲು ಜನರಿಗೆ ಮಾಹಿತಿ ನೀಡಿ ಅವುಗಳಿಂದಾಗುವ ಪ್ರಯೋಜನಗಳ ಬಗ್ಗೆ ಕೂಡ ಮಾಹಿತಿ ನೀಡಿತು.





ಇದರ ಫಲವಾಗಿ ಸಜ್ಜುಪಲ್ಲಿ, ಗೊರ್ತಪಲ್ಲಿ, ಶ್ರೀರಾಮಪುರ, ದೊನಕೊಂಡಾ ಮತ್ತು ಚೆರ್ಲೋಪಲ್ಲಿ ಗ್ರಾಮಸ್ಥರು ಅರಣ್ಯೀಕರಣ ಕಾಮಗಾರಿಗಳನ್ನು ಹೆಚ್ಚಾಗಿ ಕೈಗೊಂಡರು. ಈ ಎಲ್ಲ ಗ್ರಾಮಗಳಲ್ಲಿ ಸುಮಾರು 17,000 ಸಸಿಗಳನ್ನು ಗೋಮಾಳ ಮತ್ತು ಕೆರೆಯಂಗಳದಲ್ಲಿ ನಾಟಿ ಮಾಡಿದರು. ಈ ಕಾಮಗಾರಿಗಳ ಒಟ್ಟು ವೆಚ್ಚ 17 ಲಕ್ಷಗಳಾಗಿದ್ದು ಸುಮಾರು 5000 ಮಾನವ ದಿನಗಳನ್ನು ಸೃಜಿಸಲು ಇದರಿಂದ ಸಾಧ್ಯವಾಯಿತು. ಈ ಎಲ್ಲ ಗ್ರಾಮಗಳಲ್ಲಿ ಕೈಗೊಂಡ ಕಾಮಗಾರಿಗಳಿಂದ ಸುಮಾರು 100 ಎಕರೆ ಪ್ರದೇಶವನ್ನು ಹಸಿರೀಕರಣ ಕೈಗೊಳ್ಳಲು ಸಾಧ್ಯವಾಯಿತು.

ಈ ಬಗ್ಗೆ ಮಾತಾನಾಡುವ ಚೆರ್ಲೋಪಲ್ಲಿಯ ಶ್ರೀಯುತ ನರಸಿಂಹಪ್ಪ ನವರು "ಹಿಂದಿನಿಂದ ನಡೆಸಿಕೊಂಡು ಬಂದ ಗೋಮಾಳ ಸಂರಕ್ಷಣೆ ಕಾರ್ಯಕ್ರಮಕ್ಕೆ ಸಸಿನಾಟಿ ಕಾರ್ಯಕ್ರಮ ಇನ್ನೂ ಹೆಚ್ಚಿನ ಉತ್ತೇಜನವನ್ನು ನೀಡಿದೆ. ಈ ಗಿಡಗಳನ್ನು ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ಇದರಿಂದ ಪ್ರಯೋಜನ ನೀಡುವಲ್ಲಿ ನಾವು ಮುನ್ನಡಿಯಿಟ್ಟಿದ್ದೇವೆ" ಎಂದು ತಿಳಿಸಿದರು.

# ಬದು ಹಾಗೂ ಇಂಗುಗುಂಡಿ ನಿರ್ಮಾಣ – ಯಶಸ್ವಿಯಾದ ಚಳಗೇರಿ

ಯಶೋಗಾಥೆ



ಡಿ. ವಿ. ಅಂದೂರ

ಚಳಗೇರಿ ಗ್ರಾಮ ಪಂಚಾಯತಿಯಲ್ಲಿ ಶ್ರೀ ನಿಂಗಪ್ಪ ಬೋಸ್ಲೆಯವರ ನರೇಗಾ ಯೋಜನೆಯಡಿ ಜಮೀನಿಗೆ ಬದು ಹಾಗೂ ಬತ್ತಿಹೋದ ಕೊಳವೆ ಬಾವಿಗೆ ಇಂಗು ಗುಂಡಿ ನಿರ್ಮಿಸಿಕೊಂಡು ನೆಮ್ಮದಿ ಜೀವನ ಸಾಗಿಸುತ್ತಿದ್ದಾರೆ.

ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಚಳಗೇರಿ ಗ್ರಾಮ ಪಂಚಾಯತಿಯು ತಾಲ್ಲೂಕು ಕೇಂದ್ರದಿಂದ ಸುಮಾರು 12 ಕಿ.ಮೀ ಜಿಲ್ಲಾ ಕೇಂದ್ರದಿಂದ 50 ಕಿ.ಮೀ ದೂರದಲ್ಲಿರುವ ಚಳಗೇರಿ ಗ್ರಾಮವು N.H 4 ರಸ್ತೆಗೆ ಹೊಂದಿಕೊಂಡಿದ್ದು, ಈ ಗ್ರಾಮವು ಶಿಕ್ಷಣ ಸಂಸ್ಥೆಗಳಾದ ಪದವಿ ಪೂರ್ವ ಕಾಲೇಜು, ಐ.ಟಿ.ಐ ಕಾಲೇಜುಗಳನ್ನು ಹೊಂದಿದೆ. ಬ್ಯಾಂಕ್, ಹೆರಿಗೆ ಆಸ್ಪತ್ರೆ, ಅಂಚೆ ಕಛೇರಿ, ರೇಷ್ಮೆ ಕಛೇರಿ, ರೈಲ್ವೆ ನಿಲ್ದಾಣ ಕೂಡಾ



ಹೊಂದಿರುತ್ತದೆ. ಶ್ರೀ ಹೆಚ್. ಡಿ. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಗ್ರಾಮ ವಾಸ್ತವ್ಯ ಮಾಡಿದ ಗ್ರಾಮ ಚಳಗೇರಿ, ಪಿ.ಎಚ್.ಡಿ. ಪದವಿ ಪಡೆದ ಶ್ರೀ ಮಹಾಂತೇಶ್ವರ ಸ್ವಾಮಿಗಳ ಮಠವಿದೆ. ಸುಮಾರು 2300 ಕುಟುಂಬಗಳನ್ನು ಹೊಂದಿದ್ದು ಹಿಂದುಳಿದ ಕೃಷಿ ಕೂಲಿ ಕಾರ್ಮಿಕರು, ಹೆಚ್ಚು ಚಿಕ್ಕ ಹಿಡುವಳಿದಾರರನ್ನು ಒಳಗೊಂಡಿರುವ ಗ್ರಾಮ. ಜನರು ಹೆಚ್ಚಾಗಿ ಕೃಷಿಯನ್ನೇ ಅವಲಂಬಿಸಿದ್ದು ಕೃಷಿ ಕೂಲಿ ಕಾರ್ಮಿಕರು ಹಸು, ಎಮ್ಮೆ, ಎತ್ತು, ಕುರಿ, ಮೇಕೆ, ಕೋಳಿಸಾಕಣೆ ಇಲ್ಲಿನ ಜನರ ಉಪ ಕಸಾಬಗಿದೆ. ರೇಷ್ಮೆ. ಹತ್ತಿ, ಗೋವಿನ ಜೋಳ ಮುಖ್ಯ ಬೆಳೆಗಳಾಗಿದ್ದು, ಮಣ್ಣು ಮತು ನೀರಿನ ಸಂರಕ್ಷಣೆ ಮಾಡುವುದು ಅಗತ್ಯವಾಗಿದೆ, ಈ ಗ್ರಾಮವು ಎತ್ತರ

ಐ.ಇ.ಸಿ ಸಂಯೋಜಕರು, ನರೇಗಾ, ತಾಲ್ಲೂಕು ಪಂಚಾಯತಿ, ರಾಣೇಬೆನ್ನೂರ.




ಪ್ರದೇಶದಲ್ಲಿ ಇರುವುದರಿಂದ ಮಣ್ಣಿನ ತೇವಾಂಶ ಕಡಿಮೆ ಇರುತ್ತದೆ. ಮಳೆ ಪ್ರಮಾಣ ಕಡಿಮೆ ಇರುವುದರಿಂದ ರೈತರು ತಮ್ಮ ಜಮೀನಿಗೆ ಬೀಜ ಹಾಕಿರುವ ಖರ್ಚು ಬಾರದ ಪರಸ್ಥಿತಿಯಲ್ಲಿ ಇದ್ದು, ಬದು ನಿರ್ಮಾಣ ಮಾಡಿಕೊಳ್ಳುವುದು ಅಗತ್ಯವಾಗಿದೆ. ಮಣ್ಣಿನ ತೇವಾಂಶ ಹೆಚ್ಚಾದರೆ ಅಧಿಕ ಇಳುವರಿ ಬರುತ್ತದೆ. ಇಂತಹ ಸಂದರ್ಭದಲ್ಲಿ ಗ್ರಾಮ ಪಂಚಾಯತಿಯ ಜನಪ್ರತಿನಿಧಿಗಳು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಇಂತಹ ಸಂದರ್ಭದಲ್ಲಿ ಸರ್ಕಾರವು ಜಾರಿಗೆ ತಂದಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಣ್ಣ, ಅತೀ ಸಣ್ಣ ರೈತರಿಗೆ ಬದು ನಿರ್ಮಾಣ, ಇಂಗುಗುಂಡಿ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ

## ಯೋಜನೆ ಕುರಿತು ಜನರಲ್ಲಿ ಜಾಗೃತಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನವು ಈ ಗ್ರಾಮಕ್ಕೆ ವರದಾನವಾಗಿದೆ. ಇದರ ಮಹತ್ವವನ್ನು ರೋಜಗಾರ ದಿನಾಚರಣೆಯಲ್ಲಿ ಜನರಿಗೆ ತಿಳಿಸಿಕೊಡುವುದರ ಮೂಲಕ ಹಾಗೂ ಮನೆ ಮನೆ ಭೇಟಿ ಮಾಡಿ ಜನರಿಗೆ ಈ ಯೋಜನೆಯಲ್ಲಿರುವ 21 ವಲಯ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಲಾಯಿತು.

ಜನರಿಗೆ ರೋಜ್‌ಗಾರ್ ದಿನಚಾರಣೆಯ ಮೂಲಕ ವೈಯಕ್ತಿಕ ಕಾಮಾಗಾರಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗಿದೆ. ಬದು ನಿರ್ಮಾಣ ಮಾಡಿಕೊಳ್ಳಲು ಗ್ರಾಮ ಪಂಚಾಯತಿಯವರು ಗ್ರಾಮಸ್ಥರಿಗೆ ಸೂಕ್ತ ಮಾಹಿತಿ ನೀಡಲಾಗಿದೆ.

## ಯೋಜನೆ ಅನುಷ್ಠಾನ

2015–16 ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವೈಯಕ್ತಿಕ ಕಾಮಗಾರಿಯಾದ ಬದು ನಿರ್ಮಾಣ, ಇಂಗುಗುಂಡಿ ನಿರ್ಮಾಣಕ್ಕೆ ಚಳಗೇರಿ ಗ್ರಾಮ ಪಂಚಾಯತಿಯವರು ಆದ್ಯತೆ ನೀಡಿದ್ದು, ಸದರಿ ಗ್ರಾಮದಲ್ಲಿ ಸುಮಾರು 8 ಇಂಗುಗುಂಡಿ ಹಾಗೂ 6 ಜನರು ಬದು ನಿರ್ಮಾಣ ಮಾಡಿಕೊಂಡಿದ್ದು, ಚಳಗೇರಿ ಗ್ರಾಮದ ಫಲಾನುಭವಿಗಳು ತಮ್ಮ ಹೆಸರುಗಳನ್ನು ಗ್ರಾಮ ಸಭೆಗಳ ಮೂಲಕ ಕ್ರಿಯಾ ಯೋಜನೆಯಲ್ಲಿ ಸೇರಿಸಿ 2015–16ನೇ ಸಾಲಿನಲ್ಲಿ ಕಾಮಗಾರಿಯನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಲಾಗಿದೆ.

## ಸಮುದಾಯದ ಅಭಿಪ್ರಾಯ

ಸದರಿ ಯೋಜನೆಯ ಪ್ರಯೋಜನ ಪಡೆದ ಫಲಾನುಭವಿಯಾದ ಶ್ರೀ ನಿಂಗಪ್ಪ ಮಹಾದೇವಪ್ಪ ಬೋಸ್ಲೆ ಇವರು ಅತೀ ಸಣ್ಣ ರೈತರಾಗಿದ್ದು, ಇವರ ತಂದೆ: ಮಾಜಿ ಸೈನಿಕರಾಗಿದ್ದು ಇವರಿಗೆ ಸರ್ಕಾರ 5 ಎಕರೆ ಜಮೀನು ನೀಡಿರುತ್ತದೆ, ಸದರಿ ಜಮೀನಿನನ್ನು 1980ರಲ್ಲಿ ಮಂಜೂರು ಆಗಿದ್ದು, ತಂದೆ ಮಾದೇವಪ್ಪ 1981ರಲ್ಲಿ ಮರಣ ಹೊಂದಿರುತ್ತಾರೆ. ಸದರಿಯವರಿಗೆ 5 ಜನ ಗಂಡು ಮಕ್ಕಳಿದ್ದು, ಸರ್ಕಾರ ಕೊಟ್ಟಂತಹ 5 ಎಕರೆ ಜಮೀನಿನಲ್ಲಿ ಜೀವನ ಸಾಗಿಸುತ್ತಿದ್ದು, ಕೃಷಿಯನ್ನೇ ಅವಲಂಬಿಸಿ ಹಿರಿಯ ಪುತ್ರನಾದ



ನಿಂಗಪ್ಪ ಮಾಹಾದೇವಪ್ಪ ಬೋಸ್ಲೆ 2001 ರಲ್ಲಿ ಸದರಿ ಜಮೀನಿಗೆ ಸಾಲ ಮಾಡಿ ಬೋರವೆಲ್ ಹಾಕಿಸಿಕೊಂಡಿದ್ದು, ಹಾಕಿದ ಬೋರವೆಲ್ 3 ಇಂಚು ನೀರು ಕೊಡುತ್ತಿದ್ದು, ನೀರಿನಲ್ಲಿ ಸುಮಾರು 35 ತೆಂಗಿನ ಗಿಡ, 15 ತೇಗದ ಸಸಿಗಳನ್ನು ನೆಟ್ಟು 2001 ರಲ್ಲಿ ಮಾಜಿ ಸೈನಿಕರ 5 ಜನ ಮಕ್ಕಳು ಬೇರೆ ಬೇರೆಯಾಗಿದ್ದು, ಮನೆಯ ಹಿರಿಯ ಮಗನಾದ ನಿಂಗಪ್ಪನ ಪಾಲಿಗೆ  ಕೇವಲ 2 ಎಕರೆ ಜಮೀನು ಬಂದಿದ್ದು ಸದರಿ ಆಸ್ತಿಯಲ್ಲಿ ರೇಷ್ಮೆ, ಮೆಣಸಿನ ಗಿಡ ಬೆಳೆಗಳನ್ನು ಬೆಳೆಯುತ್ತಿದ್ದು, ಕಾಡು ಪ್ರಾಣಿಗಳಾದ ಮಂಗ , ಕಾಡುಹಂದಿ, ಜಿಂಕೆ ನವಿಲು, ಇವುಗಳ ದಾಳಿಯಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಆಗಿದೆ. ಇದರಿಂದ ಬೇಸತ್ತ ನಿಂಗಪ್ಪ ಮಹಾದೇವಪ್ಪ ಬೋಸ್ಲೆ ಕಂಗಾಲಾಗಿದ್ದು ಕಂಡುಬಂದಿದೆ. 2014 ನೇ ಸಾಲಿನಲ್ಲಿ ಇದ್ದಂತಹ ಬೋರ್‌ವೆಲ್ ಬತ್ತಿ ಹೋಗಿದ್ದರಿಂದ ಕೃಷಿಯನ್ನು ಬಿಟ್ಟು, ಬೇರೆ ಉದ್ಯೋಗ ಹುಡಕಿಕೊಂಡು ವಲಸೆ ಹೋಗುವಂತಹ ಸಮಯದಲ್ಲಿ ಗ್ರಾಮ ಪಂಚಾಯತಿ ಗ್ರಾಮ ಸಭೆಯಲ್ಲಿ ಭಾಗವಹಿಸಿ ರೈತರಿಗೆ ಸದರಿ ಯೋಜನೆಯ ಅನುಕೂಲತೆಗಳನ್ನು ತಿಳಿದುಕೊಂಡು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬದು ನಿರ್ಮಾಣ ಮತ್ತು ಇಂಗುಗುಂಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ್ದರಿಂದ 2015-16 ನೇ ಸಾಲಿನಲ್ಲಿ ನಿಂಗಪ್ಪ ತನ್ನ ಎರಡು ಎಕರೆ ಜಮೀನಿಗೆ ಬದು ನಿರ್ಮಾಣವನ್ನು ನಿರ್ಮಿಸಿಕೊಂಡಿದ್ದಾರೆ. ಇದರಿಂದ ಈಗ ಕಡಿಮೆ ಪ್ರಮಾಣದ ಮಳೆ ಆದರೂ ಬೆಳೆಯನ್ನು ತೆಗೆಯುಬಹುದು ಬತ್ತಿದ ಬೋರವೆಲ್‌ಗೆ ಇಂಗುಗುಂಡಿ ಮಾಡಿಕೊಂಡರೆ ಬತ್ತಿದ ಬೋರವೆಲ್ ಚಾಲನೆಯಾಗಿ ನನ್ನ ಕೃಷಿಯ ಬದುಕನ್ನು ಹಸನುಗೊಳಿಸಿದಂತಾಗುತ್ತದೆ ಎಂದು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಮುಂದಿನ 2016-17 ನೇ ಸಾಲಿನಲ್ಲಿ ಗ್ರಾಮ ಪಂಚಾಯತಿವರು ಇಂಗುಗುಂಡಿ ಮತ್ತು ಬದು ನಿರ್ಮಾಣ ಮಾಡಿಕೊಳ್ಳಲು ಸುಮಾರು 60 ರಿಂದ 70 ರೈತ ಫಲಾನುಭವಿಗಳಿಗೆ  ಅನುಷ್ಠಾನ ಮಾಡಿಕೊಳ್ಳಲು ಗುರಿ ಹಾಕಿಕೊಡಿದ್ದಾರೆ.

ಬದು ನಿರ್ಮಾಣ ಮತ್ತು ಇಂಗುಗುಂಡಿ ಮಾಡಿಕೊಳ್ಳಲು ಜನರ ಬೇಡಿಕೆ ಹೆಚ್ಚಾಗಿದ್ದು ಸದರಿ ಬೇಡಿಕೆಯನ್ನು ಈಡೇರಿಸಲು ಗ್ರಾಮ ಪಂಚಾಯತಿ ಅಧ್ಯಕ್ಷರು/ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಣ ತೊಟ್ಟಿದ್ದಾರೆ.

❄

## ಕಾಮಗಾರಿಯ ವಿವರ

| | |
|---|---|
| ಕಾಮಗಾರಿಯ ಹೆಸರು | : ಚಳಗೇರಿ ಗ್ರಾಮದ ನಿಂಗಪ್ಪ ಮಾದೇವಪ್ಪ ಬೋಸ್ಲೆ ಇವರ ರಿ.ಸ.ನಂ73/2ರಲ್ಲಿ ಬದು ನಿರ್ಮಾಣ |
| ಅಂದಾಜು ಮೊತ್ತ | : 0.35 (ಲಕ್ಷ ರೂ) |
| ಕೋಡ್ ಸಂಖ್ಯೆ | : IF/10280 |
| ತಾಂತ್ರಿಕ ಮಂಜೂರಾತಿ ಸಂಖ್ಯೆ | : 06/2015-2016 |
| ತಾಂತ್ರಿಕ ಮಂಜೂರಾತಿ ದಿನಾಂಕ | : 12 /01/2016 |
| ಕಾಮಗಾರಿಗೆ ಖರ್ಚಾದ ಮೊತ್ತ | : 0.20 (ಲಕ್ಷ ರೂ) |

ಯಶೋಗಾಥೆ

# ರೈತರಿಗೆ ನೆರವಾದ ಒಕ್ಕಣೆ ಕಣ

– ಎನ್. ಉಮಾದೇವಿ

ಕರ್ನಾಟಕ ರಾಜ್ಯದ ಇಪ್ಪತ್ತೆಂಟನೆಯ ಜಿಲ್ಲೆಯಾಗಿ ಅಸ್ಥಿತ್ವಕ್ಕೆ ಬಂದ ರಾಮನಗರ ಪ್ರಾಕೃತಿಕ, ಐತಿಹಾಸಿಕ, ಧಾರ್ಮಿಕ, ಬೌದ್ಧಿಕ, ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆಯ ಜಿಲ್ಲೆ. ರಾಮನಗರವು ರೇಷ್ಮೆ ನಗರವೆಂದು ಖ್ಯಾತಿಗಳಿಸಿದೆ. ಇದು ಪ್ರವಾಸಿಗಳ ಕಣ್ಮನ ಸೆಳೆಯುವ ಅಚ್ಚುಮೆಚ್ಚಿನ ಪ್ರವಾಸಿ ತಾಣವಾಗಿದೆ.



ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯಿತಿಯು ಕೊಳ್ಳಿಗನಹಳ್ಳಿ ಗ್ರಾಮದಲ್ಲಿ ರೈತರ ಅನುಕೂಲಕ್ಕಾಗಿ ನಿರ್ಮಿಸಿದ 'ಒಕ್ಕಣೆ ಕಣ'.

## ಗ್ರಾಮ ಪಂಚಾಯತಿಯ ವಿವರ:

ರಾಮನಗರ ಜಿಲ್ಲೆ ನಾಲ್ಕು ತಾಲ್ಲೂಕುಗಳನ್ನು ಹೊಂದಿದ್ದು, ಇವುಗಳಲ್ಲಿ ಕನಕಪುರ ತಾಲ್ಲೂಕು ಒಂದಾಗಿದೆ. ಈ ತಾಲ್ಲೂಕಿನ 43 ಗ್ರಾಮ ಪಂಚಾಯತಿಗಳಲ್ಲಿ ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯತಿಯು ಒಂದಾಗಿದ್ದು, ತಾಲ್ಲೂಕು ಕೇಂದ್ರದಿಂದ 26 ಕಿ.ಮೀ ದೂರದಲ್ಲಿದ್ದು, ನೈರುತ್ಯ ದಿಕ್ಕಿನಲ್ಲಿದೆ ಮತ್ತು ಜಿಲ್ಲಾ ಕೇಂದ್ರದಿಂದ ಸುಮಾರು 48.ಕಿ.ಮೀ ದೂರದಲ್ಲಿದೆ. ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 17 ಗ್ರಾಮಗಳಿದ್ದು, 5 ಕಂದಾಯ ಗ್ರಾಮಗಳನ್ನು 12 ಮಜರೆ ಗ್ರಾಮಗಳನ್ನು ಹೊಂದಿದೆ. ಸದರಿ ಗ್ರಾಮ ಪಂಚಾಯತಿಯಲ್ಲಿ ಒಟ್ಟು 7 ವಾರ್ಡ್‌ಗಳಿದ್ದು, 19 ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರಿರುತ್ತಾರೆ. ಇಲ್ಲಿ 1551 ಕುಟುಂಬಗಳಿದ್ದು, ಒಟ್ಟು 7393 ಜನಸಂಖ್ಯೆಯನ್ನು ಹೊಂದಿದೆ. ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಪ್ರಸಿದ್ಧವಾದ ಆಂಜನೇಯ ಸ್ವಾಮಿ ದೇವಸ್ಥಾನವು ಪ್ರಸಿದ್ಧಿಯನ್ನು ಹೊಂದಿದೆ.

ಇಂತಹ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಕೊಳ್ಳಿಗನಹಳ್ಳಿ ಗ್ರಾಮವು 1156 ಜನಸಂಖ್ಯೆಯನ್ನು ಹೊಂದಿದ್ದು, ಮೂಲತಃ ಕೃಷಿ ಆಧಾರಿತ

ಜಿಲ್ಲಾ ಐ.ಇ.ಸಿ ಸಂಯೋಜಕರು, ಎಂ.ಜಿ.ಎನ್.ಆರ್.ಇ.ಜಿ.ಎ ವಿಭಾಗ
ಜಿಲ್ಲಾ ಪಂಚಾಯತ್, ರಾಮನಗರ



ಪ್ರದೇಶವಾಗಿ, ಇಲ್ಲಿನ ಜನರು ಹೆಚ್ಚಾಗಿ ಕೃಷಿಯನ್ನು ಅವಲಂಬಿತರಾಗಿರುತ್ತಾರೆ. ಈ ಗ್ರಾಮ ಪಂಚಾಯತಿಯು ವೃಷಾಭವತಿ ಜಲಾಶಯವನ್ನು ಹೊಂದಿದ್ದು, 2 ಸಮುದಾಯ ಭವನ, ಪಶುಸಂಗೋಪನೆ ಆಸ್ಪತ್ರೆ, ಅಂಚೆಕಛೇರಿ, ಕಾವೇರಿ ಕಲ್ಪತರು ಗ್ರಾಮೀಣ ಬ್ಯಾಂಕ್, ವಿ.ಎಸ್.ಎಸ್.ಎನ್ ಸಂಘಗಳನ್ನು ಒಳಗೊಂಡಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸಮುದಾಯ/ವೈಯಕ್ತಿಕ ಕಾಮಗಾರಿಗಳಾದ, ರೈತರ ಒಕ್ಕಣೆ ಕಣ, ನಮ್ಮಹೊಲ ನಮ್ಮದಾರಿ, ನಮ್ಮೂರ ಕೆರೆ, ನಮ್ಮಹಳ್ಳಿ ನಮ್ಮನೀರು, ಬಹುಕಮಾನು ತಡೆಗೋಡೆ, ಆಟದ ಮೈದಾನ, ಸ್ಮಶಾನ ಅಭಿವೃದ್ಧಿ, ದನದ ಕೊಟ್ಟಿಗೆ, ಕುರಿ/ಮೇಕೆ ದೊಡ್ಡಿ ಮತ್ತು ವೈಯಕ್ತಿಕ ಕೋಳಿ ಸಾಕಾಣಿಕೆ ಶೆಡ್ಡು, ರೈತರ ಭೂ ಅಭಿವೃದ್ಧಿ, ಕಾಮಗಾರಿಗಳನ್ನು ನಿಯಮಾನುಸಾರ ಅನುಷ್ಠಾನ ಮಾಡುತ್ತಿದ್ದು, ಅದರಲ್ಲಿ ಕನಕಪುರ ತಾಲ್ಲೂಕಿನ ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ 2014–15ನೇ ಸಾಲಿನಲ್ಲಿ 411 ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಒಟ್ಟು ರೂ. 101.83 ಲಕ್ಷಗಳು ವೆಚ್ಚವಾಗಿದ್ದು, 17843 ಮಾನವ ದಿನಗಳು ಸೃಜನೆಯಾಗಿರುತ್ತದೆ. 2015–16ನೇ ಸಾಲಿನಲ್ಲಿ 703 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದ್ದು ಈ ಪೈಕಿ ಡಿಸೆಂಬರ್ ಅಂತ್ಯದವರೆಗೆ 52 ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ. 16547 ಮಾನವ ದಿನಗಳನ್ನು ಸೃಜನೆ ಮಾಡಲಾಗಿದೆ.

### ಕಾಮಗಾರಿಯ ವಿವರ

ಕಾಮಗಾರಿ ಹೆಸರು : ಸಿದ್ದಪ್ಪಾಜಿ ದೇವಸ್ಥಾನದ ಹತ್ತಿರ ಒಕ್ಕಣೆ ಕಣ ನಿರ್ಮಾಣ

ಕಾಮಗಾರಿ ಸಂಕೇತ ಮತ್ತು ವರ್ಷ : 1529002008/LD/ 9447705761861 (2015-16)

ಅಂದಾಜು ಮೊತ್ತ : 5.00 ಲಕ್ಷ

ಕೂಲಿ ಮೊತ್ತ : 2.37 ಲಕ್ಷ

ಸಾಮಗ್ರಿ ಮೊತ್ತ : 2.08 ಲಕ್ಷ

ಒಟ್ಟು ಮೊತ್ತ : 4.45 ಲಕ್ಷ

ಒಟ್ಟು ಮಾನವ ದಿನಗಳು : 1162

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾನ್ಯ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳಲ್ಲಿ ಒಂದಾದ "ರೈತರ ಒಕ್ಕಣೆ ಕಣ" ಕಾಮಗಾರಿಯನ್ನು ನರೇಗಾ ಯೋಜನೆಯಡಿ ಬರುವ ಗ್ರಾಮ ಪಂಚಾಯತಿಗಳಿಗೆ ಲಭ್ಯವಿರುವ ಸರ್ಕಾರದ ಜಾಗದಲ್ಲಿ ರೈತರಿಗೆ ಅನುಕೂಲವಾಗುವಂತೆ ಹಾಗೂ ಕೃಷಿ ಚಟುವಟಿಕೆಗಳಿಗಾಗಿ ಒಕ್ಕಲು ಕಣವನ್ನು ನಿರ್ಮಿಸಬಹುದು ಎಂಬ ಅಂಶವನ್ನು ಗಣನೆಗೆ ತೆಗೆದುಕೊಂಡು, 2015–16ನೇ ಸಾಲಿನಲ್ಲಿ ಕನಕಪುರ ತಾಲ್ಲೂಕಿನ ಕೊಳ್ಳಿಗನಹಳ್ಳಿ ಗ್ರಾಮ ಪಂಚಾಯತಿಯಲ್ಲಿ 54 x 74 ಅಳತೆಯನ್ನು ಒಳಗೊಂಡಂತೆ ರೈತರ ಒಕ್ಕಣೆ ಕಣ ಕಾಮಗಾರಿಯನ್ನು ಅನುಷ್ಠಾನಗೊಳಿಸಿರುತ್ತಾರೆ.

ಮೊದಲು ರೈತರು'ಕಣ' ಎಂಬ ಸ್ಥಳವು ಬಹಳ ಪವಿತ್ರವಾದ ದೇವರ ಜಾಗವಿದ್ದಂತೆ ಎಂದು ಭಾವಿಸುತ್ತಿದ್ದರು. ಆ ಪವಿತ್ರವಾದ ಜಾಗಕ್ಕೆ ಪಾದರಕ್ಷೆಯನ್ನು ಕೂಡ ಹಾಕಿಕೊಂಡು ಹೋಗುತ್ತಿರಲಿಲ್ಲ. ಮತ್ತು ರುಮಾಲು ಕಟ್ಟುವುದು,



ಪಂಚೆಯನ್ನು ಮೇಲೆ ಕಟ್ಟುವುದು, ಈ ರೀತಿಯ ಕೆಲವೊಂದು ನಿರ್ಬಂಧಗಳನ್ನು ಹಾಕುತ್ತಿದ್ದರು. ಈ ಕಾರಣದಿಂದ ಮತ್ತು ಕಣವನ್ನು ನಿರ್ಮಿಸಿಕೊಳ್ಳಲು ಆರ್ಥಿಕವಾಗಿ ಸಬಲರಲ್ಲದ ಸಣ್ಣ ಪ್ರಮಾಣದ ರೈತರು ತಮ್ಮ ಗ್ರಾಮದ ರಸ್ತೆಗಳಲ್ಲಿ ತಾವು ಬೆಳದ ಬೆಳೆಗಳನ್ನು ರಸ್ತೆಗೆ ಚಲ್ಲಿ ಅದರ ಮೇಲೆ ವಾಹನಗಳು ಓಡಾಡಲು ಬಿಟ್ಟು ತೆನೆಯಿಂದ ಕಾಳುಗಳನ್ನು ಬೇರ್ಪಡಿಸಲು ಕಾಯುತ್ತಿರುತ್ತಾರೆ. ಇದರಿಂದಾಗಿ ಅನೇಕ ದುಷ್ಪರಿಣಾಮ ಗಳು ಉಂಟಾಗುತ್ತಿವೆ. ಈ ರೈತರು ರಸ್ತೆಯಲ್ಲಿ ಹಾಕಿದ ಕಾಳಿನ ಮತ್ತು ಹುಲ್ಲಿನ ಹೊರೆಗಳಿಗೆ ರಕ್ಷಣೆಗಳಿಲ್ಲದೆ ಕಳವುವಾಗುತ್ತಿರುತ್ತವೆ ಮತ್ತು ಕಿಡಿಗೇಡಿಗಳ ಬೆಂಕಿ ಕಿಡಿಗಳಿಗೆ ಆಹುತಿಯಾಗುತ್ತಿರುತ್ತವೆ. ಅಲ್ಲದೆ ರೈತರು ಬೆಳೆದ ದವಸ ಧಾನ್ಯಗಳು ರಸ್ತೆಯ ಬದಿಯ ಮಣ್ಣುಗಳಿಗೆ ಸೇರಿ ಅವುಗಳ ಗುಣಮಟ್ಟ ಕಡಿಮೆಯಾಗುತ್ತಿದೆ.

ರೈತರು ತಾವು ಬೆಳದ ಧಾನ್ಯಗಳನ್ನು ರಾಶಿ ಮಾಡಲು ದೂರದ ಸಹಕಾರಿ ರೈತರ ಉತ್ಪನ್ನ ಮಾರಾಟ ಮಳಿಗೆಗಳಿಗೆ ಸಾಗಿಸಿ ತಮ್ಮ ಬೆಳೆಗಳನ್ನು ಸಿದ್ದ ರೂಪಕ್ಕೆತರಲು ಸರದಿ ಪ್ರಕಾರ ಬೆಳೆ ಸಿದ್ದ ಮಾಡಿಕೊಳ್ಳಲು ಬಹಳ ಅನಾನುಕೂಲವಾಗುತ್ತಿತ್ತು. ಅಕಾಲಿಕ ಮಳೆಯಿಂದ ಧಾನ್ಯವನ್ನು ರಕ್ಷಣೆ ಮಡಲು ಕಷ್ಟವಾಗುತ್ತಿತ್ತು. ಈ ಎಲ್ಲಾ ತೊಂದರೆಗಳನ್ನು ನಿವಾರಿಸಲು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಾನ್ಯ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳಲ್ಲಿ ಒಂದಾದ ಒಕ್ಕಣೆ ಕಣವನ್ನು ಮಾಡಲು ಅವಕಾಶ ಕಲ್ಪಿಸಿತ್ತು. ಇದನ್ನು ತಿಳಿದುಕೊಂಡ ರೈತರು ತಮ್ಮ ಗ್ರಾಮ ಪಂಚಾಯತಿಯಲ್ಲಿ ಅರ್ಜಿಯನ್ನು ನೀಡಿ, ಗ್ರಾಮಕ್ಕೆ ಒಕ್ಕಣೆ ಕಣ ಬೇಕು ಎಂದು ಬೇಡಿಕೆ ಇಟ್ಟರು.

2015–16ನೇ ಸಾಲಿನಲ್ಲಿ ರೈತರ ಹೆಚ್ಚಿನ ಮಟ್ಟದ ಬೇಡಿಕೆಗೆ ಅನುಗುಣವಾಗಿ ಗ್ರಾಮ ಪಂಚಾಯತಿಗೆ ಲಭ್ಯವಿರುವ ಸಾರ್ವಜನಿಕ ಜಾಗವನ್ನು ಬಳಸಿಕೊಂಡು ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗವಂತೆ 54ಮೀx74ಮೀ ಅಳತೆಯ ಒಂದು ಕಣವನ್ನು ನಿರ್ಮಾಣ ಮಾಡಲಾಯಿತು. ಇದರಿಂದಾಗಿ ರೈತರ ಕೃಷಿ ಚಟುವಟಿಕೆಗಳಿಗೆ ಹಂತ ಹಂತವಾಗಿ ಕಟಾವಾದ ಫಸಲುಗಳನ್ನು ರಾಶಿ ಮಾಡಲು ಅನುಕೂಲವಾಗುತ್ತದೆ ಈ ರೀತಿಯ ಕಣ ದಿಂದಾಗಿ ಮಧ್ಯಮ ವರ್ಗದ



ರೈತರಿಗೆ ಬಹಳ ಪ್ರಯೋಜನವಾಯಿತು. ಒಕ್ಕಣೆ ಕಣವನ್ನು ಉಪಯೋಗಿಸುವುದರಿಂದ ಒಂದೇ ಹಂತದಲ್ಲಿ ಧಾನ್ಯ ಮತ್ತು ಮೇವುಗಳ ಬೇರ್ಪಡೆ ಕಾರ್ಯವು ಸುಗಮವಾಗುತ್ತದೆ.

**ಅನುಕೂಲಗಳು/ಪ್ರಯೋಜನಗಳು:**

- ಒಕ್ಕಣೆ ಕಣದಿಂದಾಗಿ ಪರಿಸರದ ಮತ್ತು ಸುತ್ತಮುತ್ತಲ ಜಾಗದ ಸ್ವಚ್ಚತೆಯನ್ನು ಕಾಪಾಡಬಹುದಾಗಿದೆ.
- ಕಣದಲ್ಲಿ ಒಂದೆಡೆ ಸಾಮೂಹಿಕವಾಗಿ ರಾಶಿಯಾಗಿ ಧಾನ್ಯ ಮತ್ತು ಕಾಳುಗಳನ್ನು ಕಲೆಹಾಕುವುದರಿಂದ ಅದರಿಂದ ಬರಬಹುದಾದ ಧೂಳನ್ನು ತಡೆಗಟ್ಟುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಲು ಅನುಕೂಲವಾಗಿದೆ.



- ರೈತರು ತಾವು ಬೆಳೆದ ಬೆಳೆಗಳನ್ನು ಒಂದೆಡೆ ಸೇರ್ಪಡೆ ಮಾಡಿ ಫಸಲಿನಿಂದ ಕಾಳನ್ನು ಸುಲಭವಾಗಿ ಬೇರ್ಪಡಿಸಲು ಅನುಕೂಲ ಕರವಾಗಿದೆ.
- ರೈತರು ಬೆಳೆಗಳನ್ನು ಮಾರುಕಟ್ಟೆಗೆ ಸಾಗಾಣಿಕೆ ಮಾಡಲು ಇದರಿಂದ ಅನುಕೂಲವಾಗಿದೆ.
- ಕಳ್ಳಕಾಕರು, ಮತ್ತು ಕಿಡಿಗೇಡಿಗಳ ಬೆಂಕಿ ಕಿಡಿಗಳಿಗೆ ಆಹುತಿಯಾಗುತ್ತಿದ್ದ ಬೆಳೆಗಳನ್ನು ರಕ್ಷಿಸಿ ದಂತಾಗಿದೆ.
- ರೈತರು ಆರ್ಥಿಕವಾಗಿ ಸಬಲರಾಗುವುದನ್ನು ಇದರಿಂದ ಕಾಣಬಹುದಾಗಿದೆ.
- ಈ ಒಕ್ಕಣೆ ಕಣದಿಂದಾಗಿ ಮಧ್ಯಮ ವರ್ಗದ ರೈತರು ಮತ್ತು ಸಣ್ಣ ರೈತರಿಗೆ ಆಗುತ್ತಿದ್ದ ತೊಂದರೆ ತಪ್ಪಿಸಿ ಅವರು ಇದರ ಪ್ರಯೋಜನವನ್ನು ಪಡೆಯುವಂತಾಗಿದೆ.
- ರೈತರು ತಾವು ಬೆಳೆದ ಬೆಳೆಗಳ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಅನುಕೂಲವಾಗಿದೆ.
- ಗ್ರಾಮದ ಸಾರ್ವಜನಿಕರು ತಾವು ಬೆಳೆದ ಬೆಳೆಗಳನ್ನು ರಸ್ತೆ ಬದಿಯಲ್ಲಿ ಹಾಕಿ, ಸಾರ್ವಜನಿಕರಿಗೆ, ರಸ್ತೆಯಲ್ಲಿ ಒಡಾಡುವ ವಾಹನಗಳಿಗೆ ಹಾಗೂ ಬೆಳೆಗಳಿಗೆ ಆಗುವ ಹಾನಿಯನ್ನು ತಡೆಗಟ್ಟಿದಂತಾಗಿದೆ.
- ಈ ಕಾಮಗಾರಿಯ ಅನುಷ್ಠಾನದಿಂದಾಗಿ ಸುತ್ತಮುತ್ತಲಿನ ರೈತರಿಗೆ ತುಂಬಾ ಸಹಕಾರಿಯಾಗಿದೆ.

**ಫಲಾನುಭವಿಗಳ ಅನಿಸಿಕೆ:**

ಒಕ್ಕಣೆ ಕಣ ನಿರ್ಮಾಣ ಕಾಮಗಾರಿಯಿಂದಾಗಿ ಆ ಭಾಗದ ಗ್ರಾಮಸ್ಥರು ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಕಾಮಗಾರಿಯನ್ನು ಅನುಷ್ಠಾನಗೊಳಿಸಿ ತುಂಬಾ ಒಳ್ಳೆಯ ರೀತಿಯಲ್ಲಿ ಪ್ರಯೋಜನವನ್ನು ಪಡೆದಂತಹ ಕೊಳ್ಳಿಗಾನಹಳ್ಳಿ ಗ್ರಾಮಸ್ಥರಾದ ಶ್ರೀ. ಶಂಕರ್ ರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದೇನೆಂದರೆ ಈ ಕಾಮಗಾರಿಯನ್ನು ಆಧ್ಯತೆ-9ರಲ್ಲಿ ತೆಗೆದುಕೊಂಡು ಅನುಷ್ಠಾನ ಮಾಡಿದ್ದೇನೆ. ನಾವು ಬೆಳೆದ ಬೆಳೆಗಳಿಗೆ ಉತ್ತಮವಾದ ಗುಣಮಟ್ಟವು ದೊರಕಿದೆ ಮತ್ತು ದೂರದ ಎ.ಪಿ.ಎಂ.ಸಿ ಮಾರುಕಟ್ಟೆಗೆ ಹೋಗಿ ರಾಶಿ ಮಾಡುವುದು ತಪ್ಪಿದಂತಾಗಿದೆ ಬೆಳೆಗಳಿಗೆ ಪ್ರಕೃತಿ ವಿಕೋಪದಿಂದಾಗುವ ದುಷ್ಪರಿಣಾಮಗಳನ್ನು ತಪ್ಪಿಸಿದಂತಾಗಿದೆ ಎಂದು ತಿಳಿಸಿದರು.

ಯಶೋಗಾಥೆ

# ಅಂತರ್ಜಲ ಮರುಪೂರಣ ಚಿತ್ರದುರ್ಗ ಜಿಲ್ಲೆಗೆ "ರಾಷ್ಟ್ರ ಪ್ರಶಸ್ತಿ"

**– ನಾಗೇಂದ್ರಕುಮಾರ ಜೆ. ಬಿ.**

ಮಳೆಯ ಅಭಾವದಿಂದ ಸಾಂಪ್ರದಾಯಿಕ ಜಲ ಮೂಲಗಳು ಭತ್ತಿಹೋಗಿ ಪರ್ಯಾಯ ಅಂತರ್ಜಲ ಮೂಲಗಳ ಶೋಧನೆ ಮಾಡುತ್ತಿದ್ದೇವೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿಗಳು ಬತ್ತಿಹೋಗಿ ಕುಡಿಯುವ ನೀರಿನ ಬವಣೆ ಎದುರಾಗುತ್ತಿದೆ.



ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸಚಿವರಾದ ಶ್ರೀ ಎಚ್.ಕೆ.ಪಾಟೀಲರವರು ಗ್ರಾಮಗಳ ಅಭಿವೃದ್ಧಿಗೆ ಹೊಸ ಆಯಾಮ ನೀಡಿ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮದ "ನಮ್ಮ ಹಳ್ಳಿ ನಮ್ಮ ನೀರು" ಕಾರ್ಯಕ್ರಮದಡಿ ಗ್ರಾಮೀಣ ಕುಡಿಯುವ ನೀರಿನ ಅನುಪಯುಕ್ತ ಕೊಳವೆ ಬಾವಿಗಳನ್ನು ಮರುಪೂರಣಗೊಳಿಸುವ ಮೂಲಕ ಕುಡಿಯುವ ನೀರಿನ ಬವಣೆಯನ್ನು ನೀಗಿಸಲು ಸಂಕಲ್ಪತೊಟ್ಟರು. ಇಂದು ನರೇಗಾ ಯೋಜನೆಯಡಿ ರಾಜ್ಯದಾದ್ಯಂತ ಕುಡಿಯುವ ನೀರಿನ ಕೊಳವೆ ಬಾವಿಗಳನ್ನು ಮರುಪೂರಣಗೊಳಿಸುತ್ತಿದ್ದು, ಯಶಸ್ವಿ ಅನುಷ್ಠಾನಕ್ಕೆ ಚಿತ್ರದುರ್ಗ ಜಿಲ್ಲೆ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ.

ಮರುಪೂರಣ ಕಾರ್ಯವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಚಿತ್ರದುರ್ಗ ಜಿಲ್ಲೆಯು 2015-16ನೇ ಸಾಲಿನ ರಾಷ್ಟ್ರಪ್ರಶಸ್ತಿಗೆ ಭಾಜನವಾಗಿದೆ.

## ಹಿನ್ನಲೆ:

ಚಿತ್ರದುರ್ಗ ಜಿಲ್ಲೆ ಬಯಲುಸೀಮೆಯ ನಾಡು ವಾರ್ಷಿಕವಾಗಿ ಅತ್ಯಂತ ಕಡಿಮೆ ಸರಾಸರಿ ಮಳೆ ಬೀಳುತ್ತಿದ್ದು, ನೀರಿಗೆ ಕೊಳವೆ ಬಾವಿಗಳನ್ನೇ ಹೆಚ್ಚು ಜನ ಆಶ್ರಯಿಸಿದ್ದಾರೆ. ಇನ್ನೊಂದೆಡೆ ಸಿಗುವ ಕೊಳವೆ ಬಾವಿ ನೀರು ಲವಣಾಂಶಗಳಿಂದ ಕುಡಿಯಲು ಯೋಗ್ಯವಲ್ಲದ ನೀರಿನ ಸೇವನೆಯಿಂದ ಗ್ರಾಮೀಣ ಪ್ರದೇಶದ ಜನರು ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ.

ರಾಜ್ಯ ಐಇಸಿ ಸಂಯೋಜಕರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಚಿತ್ರದುರ್ಗ ಜಿಲ್ಲೆಯ ಕೊಳವೆ ಬಾವಿಗಳ ಮಾಹಿತಿ

| ಕ್ರಮ ಸಂ | ತಾಲ್ಲೂಕು | ಒಟ್ಟು ಕುಡಿಯುವ ನೀರಿನ ಕೊಳವೆ ಬಾವಿಗಳ ಸಂಖ್ಯೆ | ಚಾಲ್ತಿಯಲ್ಲಿರುವ ಕುಡಿಯುವ ನೀರಿನ ಕೊಳವೆ ಬಾವಿಗಳ ಸಂಖ್ಯೆ | ಕುಡಿಯಲು ಉಪಯುಕ್ತವಲ್ಲದ ಕುಡಿಯುವ ನೀರಿನ ಕೊಳವೆ ಬಾವಿಗಳ ಸಂಖ್ಯೆ | ಬತ್ತಿಹೋಗಿರುವ ಕೊಳವೆ ಬಾವಿಗಳ ಸಂಖ್ಯೆ |
|---|---|---|---|---|---|
| 1 | ಚಳ್ಳಕೆರೆ | 2492 | 1523 | 676 | 293 |
| 2 | ಚಿತ್ರದುರ್ಗ | 1786 | 1212 | 329 | 245 |
| 3 | ಹಿರಿಯೂರು | 1903 | 1228 | 395 | 280 |
| 4 | ಹೊಳಲ್ಕೆರೆ | 2340 | 1660 | 320 | 360 |
| 5 | ಹೊಸದುರ್ಗ | 2375 | 1256 | 639 | 480 |
| 6 | ಮೊಳಕಾಲ್ಮೂರು | 1099 | 401 | 443 | 255 |



### ಜಾಗೃತಿ ಕಾರ್ಯಕ್ರಮ:

ಚಿತ್ರದುರ್ಗ ಜಿಲ್ಲೆಯಲ್ಲಿ ಜಲ ತಜ್ಞರಿಂದ ಜಲಮರುಪೂರಣದ ಕಾಮಗಾರಿಗೆ ಸಲಹೆ ಪಡೆದು, ಆಯ್ದ ಗ್ರಾಮ ಪಂಚಾಯತಿಯಲ್ಲಿ ಪ್ರಾಯೋಗಿಕವಾಗಿ ಕಾರ್ಯರಂಭ ಮಾಡಲಾಯಿತು, ಜಲ ಮರು ಪೂರಣ ಘಟಕದ ಬಗ್ಗೆ ಜಿಲ್ಲೆಯ ಎಲ್ಲಾ ತಾಂತ್ರಿಕ ಸಂಯೋಜಕರು/ಸಹಾಯಕರಿಗೆ ತರಬೇತಿಯನ್ನು ನೀಡಿ, ಗ್ರಾಮ ಮಟ್ಟದಲ್ಲಿ ರೋಜ್‌ಗಾರ್ ದಿವಸ್, ಜಾಗೃತಿ ಮೂಡಿಸುವ ಐಇಸಿ ಚಟುವಟಿಕೆ ವ್ಯಾಪಕವಾಗಿ ಕೈಗೊಂಡು ಜನರನ್ನು ಯೋಜನೆಯಲ್ಲಿ ಭಾಗೀದಾರರನ್ನಾಗಿ ಮಾಡಲಾಯಿತು. ಪ್ರತಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಅನುಪಯುಕ್ತ ಕೊಳವೆ ಬಾವಿಗಳನ್ನು ಗುರ್ತಿಸಿ 2015–16ನೇ ಸಾಲಿನಲ್ಲಿ ಅನುಷ್ಠಾನಿಸಲು ಕ್ರಿಯಾ ಯೋಜನೆ ಸಿದ್ಧ ಪಡಿಸಿ ಅದಕ್ಕೆ ಗ್ರಾಮ ಸಭೆ ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಿಸಲಾಯಿತು.

### ಕಾಮಗಾರಿ ಅನುಷ್ಠಾನ:

ನಿರುಪಯುಕ್ತ ಕೊಳವೆಬಾವಿಗಳನ್ನು ಅಂದಾಜು ವೆಚ್ಚ ರೂ.68,000/– ಗಳಿಗೆ ಮರುಪೂರಣಗೊಳಿಸಲು ಅಂದಾಜು ಪ್ರತಿ ಸಿದ್ಧಪಡಿಸಲಾಯಿತು. ಅದರಂತೆ ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಕ್ರಾಂತಿ ರೂಪದಲ್ಲಿ ಅನುಷ್ಠಾನಿಸಲಾಯಿತು. ವರುಣನ ಕೃಪೆಯಿಂದ ಕೊಳವೆಬಾವಿಗಳಿಗೆ ಮಳೆನೀರು ಪೂರಣಗೊಂಡು ನಿರ್ಜಿವ ಕೊಳವೆ ಬಾವಿಗಳು ಜೀವಂತಗೊಂಡು ಕುಡಿಯುವ ನೀರಿನ ಬವಣೆ ನೀಗಿದ್ದು, ಲವಣಾಂಶ ಮುಕ್ತ ನೀರು ಗ್ರಾಮೀಣ ಜನರು ಕುಡಿಯಲು ಅನುಕೂಲವಾಗಿದೆ.

| ಕ್ರ.ಸಂ | ತಾಲ್ಲೂಕು ಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳು | ಚಾಲ್ತಿಯಲ್ಲಿರುವ ಕಾಮಗಾರಿಗಳು | ಆರ್ಥಿಕ ವೆಚ್ಚ (ಲಕ್ಷಗಳಲ್ಲಿ) |
|---|---|---|---|---|
| 01 | 06 | 1098 | 910 | 739.96 |

### ಕೇಂದ್ರ ಪುರಸ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ :

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರತಿ ವರ್ಷ ಫೆಬ್ರವರಿ 02 ರಂದು ನರೇಗಾ ಮೇಳವನ್ನು ಆಚರಿಸಿ ಯೋಜನೆಯಡಿ ಉತ್ತಮ ಸಾಧನೆ ಮಾಡಿದ ರಾಜ್ಯ, ಜಿಲ್ಲೆ, ಕಾರ್ಮಿಕರು, ಕಾರ್ಮಿಕರ ಬಳಿಗೆ ಆರ್ಥಿಕ ಸೇವೆ ಒದಗಿಸಿದ ಅಂಚೆ, ಬ್ಯಾಂಕ್ ಸಿಬ್ಬಂಧಿಗಳು ಮತ್ತು ಗ್ರಾಮರೋಜ್ಗಾರ್ ಸಹಾಯಕರನ್ನು ಪ್ರೋತ್ಸಾಹಿಸಲು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ನೀಡುತ್ತಿದೆ.



ಅದರಂತೆ 2014–15ನೇ ಸಾಲಿನಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಜಿಲ್ಲೆಗಳಿಂದ ಪ್ರಸ್ತಾವನೆ ಸಲ್ಲಿಸಲು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಆದೇಶದಂತೆ. ಇದಕ್ಕೆ ಜಿಲ್ಲೆಯಿಂದ ಯೋಜನೆಯಡಿ ಅನುಷ್ಠಾನಿಸಲಾಗಿರುವ ಕೊಳವೆ ಬಾವಿಗಳ ಮರುಪೂರಣ ವಿಷಯದ ಮೇಲೆ ನಿಕಟಪೂರ್ವ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾಗಿದ್ದ ಮಂಜುಶ್ರೀ ರವರು ಜಿಲ್ಲೆಯಿಂದ ಪ್ರಸ್ತಾವನೆ ಸಿದ್ಧಪಡಿಸಿ ಆಯಕ್ತರು ಗ್ರಾಮೀಣಾಭಿವೃದ್ಧಿಗೆ ಸಲ್ಲಿಸಿದರು.

ಶ್ರೀ ಮುನಿಷ್ ಮೌದ್ಗಿಲ್, ಆಯುಕ್ತರು ಗ್ರಾಮೀಣಾಭಿವೃದ್ಧಿ ಮತ್ತು ಶ್ರೀ ಪ್ರಭಾಷ್ ಚಂದ್ರ ರೇ, ವಿಶೇಷ ಆಯುಕ್ತರು ಹಾಗೂ ಶ್ರೀ ಚಂದ್ರಶೇಖರ ಎಂ ಮಸಗುಪ್ಪಿ, ಜಂಟಿ ನಿರ್ದೇಶಕರು (ತಾಂತ್ರಿಕ) ರವರೊಡನೆ ಚರ್ಚಿಸಿ ಪ್ರಸ್ತಾವನೆಯನ್ನು ಪುನರ್‌ರಚಿಸಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯಕ್ಕೆ ಅಂತಿಮ ಪ್ರಸ್ತಾವನೆ ಸಲ್ಲಿಸಲಾಯಿತು.

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯಕ್ಕೆ ಸಲ್ಲಿಸಲಾಗಿದ್ದ ಪ್ರಶಸ್ತಿಗಳ ಪ್ರಸ್ತಾವನೆಯಲ್ಲಿ ನಮ್ಮ ರಾಜ್ಯದಿಂದ ಕುಡಿಯುವ ನೀರಿನ ಕೊಳವೆ ಬಾವಿಗಳ ಮರುಪೂರಣ ಘಟಕಗಳನ್ನು ಮಾತ್ರ ಸಲ್ಲಿಸಿದ್ದು, ಇತರೆ ರಾಜ್ಯಗಳನ್ನು ಸದರಿ ಕಾಮಗಾರಿಯನ್ನು ಯೋಜನೆಯಿಂದ ಅನುಷ್ಠಾನಿಸದಿರುವುದು ಹಾಗೂ ಪ್ರಸ್ತಾವನೆ ಸಲ್ಲಿಸದೆ ಇದುದರಿಂದ ಅಂತಿಮವಾಗಿ ರಾಜ್ಯದ ಕುಡಿಯುವ ನೀರಿನ ಕೊಳವೆ ಬಾವಿಗಳ ಮರುಪೂರಣ ಘಟಕವನ್ನು ರಾಷ್ಟ್ರಪ್ರಶಸ್ತಿಗೆ ಆಯ್ಕೆ ಮಾಡಲು ನವದೆಹಲಿಯಲ್ಲಿ ಕಾರ್ಯಗಾರವನ್ನು ಏರ್ಪಡಿಸಲಾಯಿತು.

ಸದರಿ ಕಾರ್ಯಾಗಾರಕ್ಕೆ ರಾಜ್ಯದಿಂದ ಶ್ರೀ ಪ್ರಭಾಷ್ ಚಂದ್ರ ರೇ, ವಿಶೇಷ ಆಯುಕ್ತರು, ನಿಕಟಪೂರ್ವ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಮಂಜುಶ್ರೀರವರು ಸದರಿ ಕಾಮಗಾರಿಯ ಪ್ರೆಸೆಂಟೇಷನ್ ಸಿದ್ಧಪಡಿಸಿ ಕಾರ್ಯಾಗಾರದಲ್ಲಿ ಮಂಡಿಸಿದರು. ನಂತರ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಕಾಮಗಾರಿಗಳ ಭೌತಿಕ ಹಾಗೂ ಫಲಶೃತಿ ಪರಿಶೀಲನೆಗೆ ತಂಡವೊಂದನ್ನು ಜಿಲ್ಲೆಗೆ ಕಳುಹಿಸಿತು. ಸದರಿ ತಂಡವು ಕಾಮಗಾರಿಗಳ ಭೌತಿಕವಾಗಿ ಅನುಷ್ಠಾನಿಸಿರುವುದು ಹಾಗೂ ಗ್ರಾಮಸ್ಥರಿಂದ ಸಕಾರಾತ್ಮಕ ಅಭಿಪ್ರಾಯ ವ್ಯಕ್ತವಾಗಿರುವುದನ್ನು ತಂಡ ವರದಿ ಸಲ್ಲಿಸಿದ ಹಿನ್ನಲೆಯಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಅಂತಿಮವಾಗಿ ಚಿತ್ರದುರ್ಗ ಜಿಲ್ಲೆಯನ್ನು ರಾಷ್ಟ್ರ ಪ್ರಶಸ್ತಿಗೆ ಆಯ್ಕೆಮಾಡಿತು.

### ಪ್ರಶಸ್ತಿ ಪ್ರದಾನ:

2ನೇ ಫೆಬ್ರವರಿ 2016 ರಂದು ನವದೆಹಲಿಯ ವಿಜ್ಞಾನಭವನದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್, ಕುಡಿಯುವ ನೀರು ಮತ್ತು ಶೌಚಾಲಯ ಸಚಿವರಾದ ಶ್ರೀ ಬಿರೇಂದ್ರ ಸಿಂಗ್ ರವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಶಸ್ತಿ ಪಧಾನ ಸಮಾರಂಭದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿ ಮರುಪೂರಣ ಘಟಕಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಚಿತ್ರದುರ್ಗ ಜಿಲ್ಲೆಯ ನಿಕಟಪೂರ್ವ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ಮಂಜುಶ್ರೀ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ನಿತೇಶ್ ಪಟೇಲ್ ರವರಿಗೆ ಸಚಿವರು ಪ್ರಶಸ್ತಿ ಪ್ರದಾನ ಮಾಡಿದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯದಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಸುಭಾಷ್ ಚಂದ್ರ, ಗ್ರಾಮೀಣಾಭಿವೃದ್ಧಿ ಆಯುಕ್ತರಾದ ಶ್ರೀ ಮುನಿಷ್ ಮೌದ್ಗಿಲ್, ವಿಶೇಷ ಆಯುಕ್ತರಾದ ಶ್ರೀ ಪ್ರಭಾಷ್ ಚಂದ್ರ ರೇ, ಜಂಟಿ ನಿರ್ದೇಶಕರು (ತಾಂತ್ರಿಕ) ಶ್ರೀ ಚಂದ್ರಶೇಖರ ಎಂ ಮಸಗುಪ್ಪಿ, ಸಹಾಯಕ ನಿರ್ದೇಶಕರು (ಆಡಳಿತ) ಶ್ರೀ ಕೃಷ್ಣೇಗೌಡ ತಾಯಣ್ಣನವರ್, ಶ್ರೀಮತಿ ಅನುಸೂಯಮ್ಮ, ಶ್ರೀ ಜಗನ್ನಾಥ್, ಶ್ರೀ ನಾಗೇಂದ್ರಕುಮಾರ, ರವೀಂದ್ರನಾಥ್, ಮಧುಸೂದನ್, ಗ್ರಾಮಪಂಚಾಯಿತಿ ಅಧ್ಯಕ್ಷರು, ನರೇಗಾ ಯೋಜನೆಯಡಿಯ 100 ದಿನ ಉದ್ಯೋಗ ಪಡೆದಿರುವ ಕೂಲಿಕಾರ್ಮಿಕರು ಭಾಗವಹಿಸಿದ್ದರು.

ಕವಿಯ(ಕ್ಷ)? ಪ್ರಶ್ನೆ?

# ಮನುಷ್ಯ ಸಾಯುವುದರ ಮೊದಲು ಮನುಷ್ಯತ್ವ ಸಾಯದಿರಲಿ . . .

ಹೌದು! ಮನುಷ್ಯ ಸಾಯುವುದರ ಮೊದಲು ಮನುಷ್ಯತ್ವ ಸಾಯದಿರಲಿ ಎಂಬ ಶೀರ್ಷಿಕೆಯಡಿ ಖಾಸಗಿ ಚಾನಲ್‌ವೊಂದು ಅದ್ಭುತ ಸಂದೇಶವನ್ನು ಸಾರುತ್ತದೆ. ಇತ್ತೀಚೆಗೆ ರಸ್ತೆ ಅಪಘಾತವೊಂದರಲ್ಲಿ ಯುವಕನೊಬ್ಬ ರಸ್ತೆಯಲ್ಲಿ ಎರಡು ಭಾಗವಾಗಿ ಬಿದ್ದು ಸಹಾಯಕ್ಕಾಗಿ ಹೊರಳಾಡುತ್ತಿದ್ದರೂ, ದಾರಿಹೋಕರು ಸಹಾಯ ಮಾಡಲು ಹೆದರುವಂತಹ ಭೀಕರ ಸನ್ನಿವೇಶವಾಗಿತ್ತು. ಅಲ್ಲದೇ ಸಹಾಯ ಮಾಡಲು ಹೊರಟರೆ ಮುಂದೆ ಪೋಲೀಸರ ಬಳಿ ಸಾಕ್ಷಿ, ಕೋರ್ಟು ಅಲೆದಾಟ ಮುಂತಾದ ಪರದಾಟಗಳ ಬಗ್ಗೆ ಜನ ಸಾಮಾನ್ಯರಲ್ಲಿ ಬಲವಾಗಿ ಬೇರೂರಿದೆ. ಆದರೆ ಸುಪ್ರೀಂ ಕೋರ್ಟು ಇತ್ತೀಚೆಗೆ ಈ ಬಗ್ಗೆ ಒಂದು ಮಹತ್ವವಾದ ತೀರ್ಪನ್ನು ನೀಡಿದೆ. ಯವುದೇ ವ್ಯಕ್ತಿ ಅಪಘಾತ ಸನ್ನಿವೇಶಗಳಲ್ಲಿ ಸಹಾಯ ಮಾಡಿದಲ್ಲಿ ಆತನನ್ನು ಯವುದೇ ಕಾರಣಕ್ಕೂ ಸಾಕ್ಷಿ ಮಾಡುವಂತಿಲ್ಲ ಎಂಬುದೇ ತಾತ್ಪರ್ಯ. ರಾಜ್ಯ ಸರ್ಕಾರ ಮೃತ ವ್ಯಕ್ತಿಯ ಹೆಸರಿನಲ್ಲಿ ಅಪಘಾತಕ್ಕೆ ಒಳಗಾದವರ ಸಂಕಷ್ಟಕ್ಕೆ ನೆರವು ನೀಡುವ ಸಲುವಾಗಿ "ಹರೀಶ್" ಯೋಜನೆಯನ್ನು ಜಾರಿಗೆ ತಂದಿದೆ.ಈ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸುವ ಕೆಲಸ ನಮ್ಮೆಲ್ಲರಿಂದ ಆಗಬೇಕಿದೆ.

ನಿಜ! ಮನುಷ್ಯ ಸಾಯುವುದರ ಮೊದಲು ಮನುಷ್ಯತ್ವ ಸಾಯದಿರಲಿ . . . ಎಂದೆಂದಿಗೂ ಇದಕ್ಕಾಗಿ ನಮ್ಮ ನಿಮ್ಮೆಲ್ಲರ ಸಹಕಾರವಿರಲಿ.



## ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ರಸ್ತೆ ಅಥವಾ ಇನ್ನಿತರ ಯಾವುದೇ ಅಪಘಾತ/ ಅವಘಡಗಳಲ್ಲಿ ತೊಂದರೆಗೊಳಪಟ್ಟವರನ್ನು ಯಾವುದೇ ಅಳುಕಿಲ್ಲದೇ ನಮ್ಮ ಕೈಲಾದಷ್ಟು ನೆರವನ್ನು ನೀಡುವುದು ಮಾನವೀಯತೆಯಲ್ಲವೇ?
2. ಇಂತಹ ಘಟನೆಗಳಿಗೆ ಸುಪ್ರೀಂ ಕೋರ್ಟಿನ ತೀರ್ಪು ನಮಗೆ ಬೆಂಬಲವಾಗಿ ನಿಲ್ಲುವುದು ಎಂದು ನಾವೆಲ್ಲಾ ಮನಗಾಣಬೇಕಲ್ಲವೆ?
3. ಸುಪ್ರೀಂ ಕೋರ್ಟ್‌ನ ಈ ಮಹತ್ವದ ತೀರ್ಪನ್ನು ನಾವು ನೀವೆಲ್ಲರೂ ವ್ಯಾಪಕವಾಗಿ ಪ್ರಚುರಪಡಿಸಬಹುದಲ್ಲವೇ?
4. ಅಪಘಾತ/ ಅವಘಡಗಳಲ್ಲಿ ಸಿಲುಕಿ ನರಳುವವರ ಸಂಕಟವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸುವುದರ ಬದಲು ತಕ್ಷಣವೇ ಸಹಾಯ ಹಸ್ತ ನೀಡಿದಲ್ಲಿ ನೊಂದ ಜೀವಗಳಿಗೆ ಸಾಂತ್ವಾನವಲ್ಲವೇ?
5. ಅಷ್ಟಕ್ಕೂ ನಮ್ಮ ಬಳಿ ಮೊಬೈಲ್ ಇದೆ ಎಂದು ಸಂಕಷ್ಟದಲ್ಲಿರುವವರ ಸ್ಥಿತಿಯನ್ನು ಚಿತ್ರೀಕರಿಸುವುದು ಎಷ್ಟು ಸರಿ?
6. ಒಮ್ಮೆ ಇಂತಹ ಸನ್ನಿವೇಶಗಳನ್ನು ಚಿತ್ರಿಕರಿಸಿದ್ದರೂ ಇದು ನೊಂದವರ ಬಾಳಿಗೆ ಪೂರಕವಾದ ಪ್ರಬಲ ಸಾಕ್ಷಿಯಾಗಿ ಸಹಕರಿಸಿದರೆ ಸಮಂಜಸವಲ್ಲವೇ?

ವಿ. ಶ್ರೀನಿವಾಸ
ನಂ. 6, 13ನೇ ಅಡ್ಡರಸ್ತೆ, ಕೇತಮಾರನಹಳ್ಳಿ,
ರಾಜಾಜಿನಗರ, ಬೆಂಗಳೂರು – 10

ಕಾವ್ಯ ವಿಕಾಸ

# ನಮ್ಮ ನಿಮ್ಮೆಲ್ಲರ ಅಭಿಮಾನದ ಭಾರತ

ಭವ್ಯ ಭಾರತ ದಿವ್ಯ ಭಾರತ
ನಮ್ಮ ನಿಮ್ಮೆಲ್ಲರ ಹೆಮ್ಮೆಯ ಭಾರತ
ಸ್ವಚ್ಛ ಭಾರತ ನಿರ್ಮಲ ಭಾರತ
ವಿಶ್ವಕ್ಕೆಲ್ಲ ಸ್ವಚ್ಛತೆಯ ಪಾಠ ಕಲಿಸಿದ ಭಾರತ
ನಮ್ಮ ನಿಮ್ಮೆಲ್ಲರ ಅಭಿಮಾನದ ಭಾರತ॥

ಬುದ್ಧ ಬಸವ ಹುಟ್ಟಿದ ನಾಡು ಭಾರತ
ವಿಶ್ವಕ್ಕೆಲ್ಲ ಶಾಂತಿ ಪಾಠ ಕಲಿಸಿದ ಭಾರತ
ಸ್ನೇಹಕ್ಕೂ ಸಿದ್ಧವಿರುವ ದಿವ್ಯ ಭಾರತ
ಸಮರವನ್ನು ಮೆಟ್ಟಲು ಬದ್ಧವಿರುವ ಭವ್ಯ ಭಾರತ
ನಮ್ಮ ನಿಮ್ಮೆಲ್ಲರ ಅಭಿಮಾನದ ಭಾರತ॥

ಗಾಂಧೀಜಿ ಕನಸಿನ ಕೂಸು ಭಾರತ
ಅಕುಶಲ ಕಾರ್ಮಿಕರಿಗೆ ಕೂಲಿ ನೀಡುವ ಭಾರತ
ಸ್ವಾವಲಂಬಿ ಬದುಕಿಗೆ ವರದಾನವಾದ ಭಾರತ
ಉದ್ಯೋಗ ಖಾತ್ರಿಯ ಅನುಷ್ಠಾನ ಮಾಡಿದ ಭಾರತ!!
ನಮ್ಮ ನಿಮ್ಮೆಲ್ಲರ ಅಭಿಮಾನದ ಭಾರತ॥



ಗ್ರಾಮಗಳ ಸಬಲೀಕರಣದತ್ತ ಭಾರತ
ಸಾಮಾಜಿಕ ಸಮಾನತೆಯನ್ನು ಉತ್ತೇಜಿಸುವ ಭಾರತ
ಗ್ರಾಮೀಣ ಆಸ್ತಿ ಸೃಜಿಸುವ ಭವ್ಯ ಭಾರತ
ಗ್ರಾಮೀಣರ ಬದುಕಿಗೆ ಭದ್ರತೆ ನೀಡಿದ ದಿವ್ಯ ಭಾರತ
ದಶಮಾನೋತ್ಸವದ ಸಂಭ್ರಮದಲ್ಲಿರುವ
ಉದ್ಯೋಗ ಖಾತ್ರಿಯ ಅನುಷ್ಠಾನ ಮಾಡಿದ ಭಾರತ
ನಮ್ಮ ನಿಮ್ಮೆಲ್ಲರ ಅಭಿಮಾನದ ಭಾರತ॥

**ಕೊದ್ದಡ್ಡಿ ಮಹೇಶ್**
ಎಸ್.ಡಿ.ಎ.ಎ., ನಕ್ಕಲಹಳ್ಳಿ ಗ್ರಾಮ ಪಂಚಾಯತ್
ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 28-03-2016 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2013-14 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2014-15 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2014-15 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಕೋಲಾರ | 156 | 100 | 100 | 0 | 100 | 87 | 96 | 0 | 69 | 1 |
| ಉತ್ತರ ಕನ್ನಡ | 231 | 89 | 89 | 74 | 29 | 82 | 99 | 0 | 66 | 2 |
| ಚಿಕ್ಕಬಳ್ಳಾಪುರ | 157 | 96 | 96 | 3 | 88 | 81 | 96 | 0 | 65 | 3 |
| ರಾಮನಗರ | 127 | 100 | 99 | 0 | 74 | 85 | 100 | 0 | 65 | 4 |
| ಬೆಂಗಳೂರು (ಗ್ರಾ) | 105 | 93 | 93 | 15 | 87 | 69 | 97 | 0 | 64 | 5 |
| ದಾವಣಗೆರೆ | 233 | 97 | 97 | 1 | 51 | 93 | 96 | 0 | 62 | 6 |
| ಶಿವಮೊಗ್ಗ | 271 | 95 | 95 | 21 | 46 | 85 | 98 | 0 | 62 | 7 |
| ಬಾಗಲಕೋಟೆ | 198 | 79 | 79 | 5 | 73 | 94 | 100 | 0 | 61 | 8 |
| ಮಂಡ್ಯ | 234 | 99 | 99 | 1 | 40 | 88 | 100 | 0 | 61 | 9 |
| ಉಡುಪಿ | 158 | 90 | 90 | 54 | 53 | 37 | 99 | 0 | 60 | 10 |
| ಧಾರವಾಡ | 144 | 88 | 88 | 4 | 54 | 93 | 98 | 0 | 60 | 11 |
| ತುಮಕೂರು | 331 | 96 | 96 | 1 | 77 | 63 | 89 | 0 | 60 | 12 |
| ಚಿತ್ರದುರ್ಗ | 189 | 97 | 97 | 0 | 58 | 71 | 98 | 0 | 60 | 13 |
| ದಕ್ಷಿಣ ಕನ್ನಡ | 230 | 87 | 87 | 80 | 12 | 52 | 99 | 0 | 59 | 14 |
| ಗದಗ | 122 | 86 | 86 | 0 | 55 | 81 | 99 | 0 | 58 | 15 |
| ಹಾವೇರಿ | 223 | 92 | 92 | 0 | 50 | 70 | 97 | 0 | 57 | 16 |
| ಬೀದರ್ | 186 | 94 | 94 | 0 | 50 | 67 | 99 | 0 | 57 | 17 |
| ಕೊಡಗು | 104 | 94 | 94 | 48 | 2 | 58 | 100 | 0 | 56 | 18 |
| ಮೈಸೂರು | 266 | 87 | 87 | 0 | 56 | 72 | 96 | 0 | 56 | 19 |
| ಚಿಕ್ಕಮಗಳೂರು | 227 | 99 | 99 | 22 | 19 | 43 | 97 | 0 | 54 | 20 |
| ವಿಜಯಪುರ | 213 | 90 | 90 | 0 | 48 | 49 | 97 | 0 | 53 | 21 |
| ಚಾಮರಾಜನಗರ | 130 | 91 | 90 | 0 | 27 | 67 | 98 | 0 | 53 | 22 |
| ಬೆಂಗಳೂರು (ನ) | 96 | 84 | 84 | 31 | 48 | 13 | 98 | 0 | 51 | 23 |
| ಹಾಸನ | 267 | 96 | 96 | 7 | 24 | 41 | 99 | 0 | 51 | 24 |
| ಬೆಳಗಾವಿ | 502 | 93 | 93 | 0 | 17 | 55 | 86 | 0 | 49 | 25 |
| ಬಳ್ಳಾರಿ | 199 | 91 | 91 | 1 | 7 | 48 | 98 | 0 | 48 | 26 |
| ರಾಯಚೂರು | 180 | 88 | 88 | 1 | 36 | 41 | 80 | 0 | 47 | 27 |
| ಕೊಪ್ಪಳ | 153 | 84 | 84 | 0 | 19 | 44 | 99 | 0 | 47 | 28 |
| ಯಾದಗಿರಿ | 123 | 92 | 92 | 8 | 0 | 29 | 95 | 0 | 45 | 29 |
| ಕಲಬುರಗಿ | 264 | 83 | 81 | 0 | 15 | 42 | 86 | 0 | 43 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಮಾರ್ಚ್ 2016)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ | ಅಂತಿಮವಾಗಿ ಪಡೆದ ಶ್ರೇಣಿ [ (ಅ) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] |
|---|---|---|---|---|---|---|---|
| | A | B | C | D | E | F | G |
| ಕೋಲಾರ | 22565 | 21628 | 0.5 | 3 | 1504 | 1 | 1 |
| ಚಿಕ್ಕಬಳ್ಳಾಪುರ | 13707 | 13843 | 1.2 | 8 | 1142 | 3 | 2 |
| ಬಾಗಲಕೋಟೆ | 7192 | 7251 | 1.1 | 7 | 399 | 4 | 3 |
| ಬೆಂಗಳೂರು (ಗ್ರಾ) | 11280 | 11237 | 3.8 | 17 | 1253 | 2 | 4 |
| ಶಿವಮೊಗ್ಗ | 5782 | 5417 | 1 | 6 | 340 | 7 | 5 |
| ಉಡುಪಿ | 3395 | 3624 | 0.8 | 4 | 308 | 8 | 6 |
| ಚಿಕ್ಕಮಗಳೂರು | 3854 | 3946 | 2.4 | 13 | 350 | 6 | 7 |
| ಉತ್ತರ ಕನ್ನಡ | 2525 | 2796 | 0 | 1 | 180 | 12 | 8 |
| ತುಮಕೂರು | 9751 | 9938 | 4.4 | 20 | 375 | 5 | 9 |
| ಹಾವೇರಿ | 4538 | 4790 | 3.4 | 16 | 302 | 9 | 10 |
| ಚಿತ್ರದುರ್ಗ | 4643 | 4717 | 3.2 | 15 | 290 | 10 | 11 |
| ಮೈಸೂರು | 4791 | 5048 | 2.8 | 14 | 165 | 13 | 12 |
| ದಕ್ಷಿಣ ಕನ್ನಡ | 1867 | 1884 | 0.1 | 2 | 93 | 19 | 13 |
| ಬೀದರ್ | 3618 | 2956 | 6.3 | 22 | 212 | 11 | 14 |
| ಗದಗ | 1198 | 1179 | 1.5 | 11 | 119 | 16 | 15 |
| ರಾಮನಗರ | 1659 | 1590 | 15.3 | 27 | 165 | 13 | 16 |
| ವಿಜಯಪುರ | 2798 | 2942 | 8.2 | 23 | 133 | 15 | 17 |
| ಕೊಪ್ಪಳ | 1249 | 1118 | 4.9 | 21 | 96 | 18 | 18 |
| ಚಾಮರಾಜನಗರ | 911 | 919 | 3.8 | 17 | 91 | 20 | 19 |
| ಹಾಸನ | 1723 | 1678 | 11.1 | 26 | 101 | 17 | 20 |
| ಕೊಡಗು | 291 | 323 | 2.2 | 12 | 58 | 23 | 21 |
| ಬಳ್ಳಾರಿ | 685 | 681 | 1.2 | 8 | 27 | 25 | 22 |
| ಧಾರವಾಡ | 337 | 432 | 0.9 | 5 | 18 | 27 | 23 |
| ಬೆಳಗಾವಿ | 871 | 941 | 1.4 | 10 | 18 | 27 | 24 |
| ಮಂಡ್ಯ | 1171 | 1203 | 10.8 | 25 | 65 | 21 | 25 |
| ದಾವಣಗೆರೆ | 894 | 965 | 4 | 19 | 47 | 24 | 26 |
| ರಾಯಚೂರು | 1200 | 1268 | 9.4 | 24 | 63 | 22 | 27 |
| ಬೆಂಗಳೂರು (ನ) | 2381 | 2375 | 18.4 | 28 | 25 | 26 | 28 |
| ಕಲಬುರಗಿ | 97 | 101 | 40.6 | 30 | 3 | 29 | 29 |
| ಯಾದಗಿರಿ | 18 | 29 | 20.7 | 29 | 1 | 30 | 30 |

ಸುತ್ತೋಲೆ

# ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 25–02–2016

ನಂ.ಗ್ರಾಅಪ/04/ಗ್ರಾಪಂಕಾ/2016

## ಸುತ್ತೋಲೆ

**ವಿಷಯ** : ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ಇ–ಸ್ವತ್ತು ತಂತ್ರಾಂಶದ ಮೂಲಕ ನಮೂನೆ–9, 11ಎ ಮತ್ತು 11ಬಿ ಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯ ಮೂಲಕ ವಿತರಿಸುವ ಬಗ್ಗೆ.

**ಉಲ್ಲೇಖ** :
1) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013, ದಿನಾಂಕ:14–06–2013.
2) ಸರ್ಕಾರದ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013, ದಿನಾಂಕ:15–06–2013.
3) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013,(ಭಾಗ–6) ದಿನಾಂಕ:21–01–2014.
4) ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 83 ಗ್ರಾಪಂಅ 2013,(ಭಾಗ–6) ದಿನಾಂಕ:03–02–2014.

**********

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) (ತಿದ್ದುಪಡಿ) ನಿಯಮಗಳು, 2013 ರಲ್ಲಿ ನಿಯಮ 28 ಮತ್ತು 30 ಕ್ಕೆ ದಿನಾಂಕ:14–06–2013 ಮತ್ತು ದಿನಾಂಕ:15–06–2013 ರಲ್ಲಿ ತಿದ್ದುಪಡಿ ತರಲಾಗಿದ್ದು, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಈ ಕೆಳಕಂಡ ಕ್ರಮಬದ್ಧ ಆಸ್ತಿಗಳಿಗೆ ನಿಗಧಿತ ನಮೂನೆ 9 ಹಾಗೂ 11 ಎ ರಲ್ಲಿ ದಾಖಲಿಸಲು ದಿನಾಂಕ:15–06–2013 ರಿಂದ ರಾಜ್ಯದ ಗ್ರಾಮ ಪಂಚಾಯತಿಗಳು ಇ–ಸ್ವತ್ತು ತಂತ್ರಾಂಶದ ಮೂಲಕ ನಮೂನೆ–9 ಮತ್ತು 11 ಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯ ಮೂಲಕ ವಿತರಿಸುತ್ತಿವೆ. ತದ ನಂತರ ಹೊರಡಿಸಿದ ಸುತ್ತೋಲೆಗಳನ್ನಾಧರಿಸಿ ಈ ಕೆಳಕಂಡ ವರ್ಗದ ಆಸ್ತಿಗಳಿಗೆ ನಮೂನೆ–9 ಮತ್ತು ನಮೂನೆ 11ಎ ನೀಡಲಾಗುತ್ತಿದೆ.

1. ಗ್ರಾಮ ಠಾಣಾ ಒಳಗಡೆ ಇರುವ ಆಸ್ತಿಗಳು – ತಹಶೀಲ್ದಾರರಿಂದ ಗ್ರಾಮ ಠಾಣಾದ ಕಚ್ಚಾ ನಕಾಶೆಯನ್ನು ಒದಗಿಸುವುದು.
2. ಗ್ರಾಮ ಠಾಣಾದ ಹೊರಗಡೆ ಇರುವ ಆಸ್ತಿಗಳು – ಸಕ್ಷಮ ಪ್ರಾಧಿಕಾರದಿಂದ ಕೃಷಿಯೇತರ ಉದ್ದೇಶಕ್ಕಾಗಿ ಹೊರಡಿಸಿರುವ ಆದೇಶದ ಪ್ರತಿ ಹಾಗೂ ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಲೇಔಟ್ ಪ್ಲಾನ್.
3. ಸರ್ಕಾರದ ವಸತಿ ಯೋಜನೆಗಳಾದ ಬಸವ ವಸತಿ, ಗ್ರಾಮೀಣ ಅಂಬೇಡ್ಕರ್ ಹಾಗೂ ಇಂದಿರಾ ಆವಸ್ ಯೋಜನೆಯಡಿ ಸೃಜಿಸಿರುವ ಆಸ್ತಿಗಳು.
4. ಸಿಂಗಲ್ ಸೈಟ್ ಲೇಔಟ್ ಪ್ಲಾನ್ ಅಪ್ರೂವಲ್.
5. ಕೈಗಾರಿಕಾ ಉದ್ದೇಶಕ್ಕೆ ಪರಿವರ್ತಿಸಿದ ಜಮೀನು
6. ಅಪಾರ್ಟ್‌ಮೆಂಟ್ ಯುನಿಟ್ (ಭೂ ಪರಿವರ್ತನೆ ಮತ್ತು ಲೇಔಟ್ ಅನುಮೋದನೆಯಾಗಿರುವುದು.)

7. ದಿನಾಂಕ:16–11–1992 ಪೂರ್ವದಲ್ಲಿ ಪಂಚಾಯತಿಗಳಿಂದ ಬಡಾವಣೆ ಎಂದು ಅನುಮೋದನೆಯಾಗಿರುವ ಆಸ್ತಿಗಳು.

8. ನಗರಾಭಿವೃದ್ಧಿ ಇಲಾಖೆಯ ಸಕ್ಷಮ ಪ್ರಾಧಿಕಾರ / ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅನುಮೋದಿತ ವಾಣಿಜ್ಯ ನಿವೇಶನ

9. ದಿನಾಂಕ:11–11–2014 ರ ನಂತರ ಗ್ರಾಮ ಪಂಚಾಯತಿಗಳಿಂದ / ತಾಲ್ಲೂಕು ಪಂಚಾಯತಿಗಳಿಂದ ಅನುಮೋದನೆಯಾಗಿರುವ ಬಡಾವಣೆ ನಿವೇಶನ.

10. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ BDA, BMRDA, BIAAPA, KHB, KIADB, LDA's & LPA's ಅನುಮೋದಿಸಿದ ಬಡಾವಣೆಗಳಲ್ಲಿ ಬರುವ ಆಸ್ತಿಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು)

(ಎರಡನೇ ತಿದ್ದುಪಡಿ) ನಿಯಮಗಳು, 2013 ರ ನಿಯಮ 30 ಕ್ಕೆ ದಿನಾಂಕ:21–01–2014 ರಂದು ತಿದ್ದುಪಡಿ ತರಲಾಗಿದ್ದು, ಈ ಕೆಳಕಂಡಂತಿದೆ.

"ಸರ್ಕಾರಿ ಜಮೀನಿನಲ್ಲಿ, ಸ್ಥಳೀಯ ಸಂಸ್ಥೆಗಳ ಸ್ವತ್ತಿನಲ್ಲಿ, ಸರ್ಕಾರಿ ಸ್ವಾಮ್ಯದ ಶಾಸನಬದ್ಧ ನಿಕಾಯ ಅಥವಾ ಸಂಸ್ಥೆಗಳ ಸ್ವತ್ತಿನಲ್ಲಿ ಹೊರತುಪಡಿಸಿ, ಇನ್ನುಳಿದ ಖಾಲಿ ಜಮೀನುಗಳು, ಕಟ್ಟಡಗಳು, ಕಟ್ಟಡಗಳ ಮತ್ತು ಸ್ಥಳವನ್ನು ಒಳಗೊಂಡಂತೆ ಕಟ್ಟಡ ನಿಯಮಗಳನ್ನು ಉಲ್ಲಂಘಿಸಿ, ನಿರ್ಮಿತವಾಗಿರುವ ಕಟ್ಟಡಗಳಿಗೆ ಅಥವಾ ಅನಧಿಕೃತ ಬಡಾವಣೆಗಳ ಅಥವಾ ಕಂದಾಯ ಜಮೀನುಗಳ ಅಥವಾ ಕಟ್ಟಡಗಳು ಪೂರ್ಣಗೊಂಡಿರುವ ಬಗ್ಗೆ ದಾಖಲೆಗಳಿಲ್ಲದೆ ಅನುಭವಿಸುತ್ತಿರುವ ಕಟ್ಟಡಗಳು". ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧವಲ್ಲದ ಆಸ್ತಿಗಳಿಗೆ ನಿಗಧಿತ ನಮೂನೆ 11ಬಿ ರಲ್ಲಿ ದಾಖಲಿಸಲು ದಿನಾಂಕ:03–02–2014 ರಿಂದ ರಾಜ್ಯದ ಗ್ರಾಮ ಪಂಚಾಯತಿಗಳು ಇ–ಸ್ವತ್ತು ತಂತ್ರಾಂಶದ ಮೂಲಕ ನಮೂನೆ–11ಬಿ ಯನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಡಿಜಿಟಲ್ ಸಹಿಯ ಮೂಲಕ ವಿತರಿಸುತ್ತಿವೆ.

ನಮೂನೆ 11ಬಿ ಪಡೆಯಲು ಸಾರ್ವಜನಿಕರು 1) ಲಭ್ಯವಿದ್ದರೆ ಪರಿವರ್ತಿತ ಆದೇಶದ ಪ್ರತಿ 2) ಪಹಣಿ ಪತ್ರಿಕೆ, 3) ಫಾರಂ ಬಿಲ್ಡಿಂಗ್‌ಗಳನ್ನು ಗುರುತಿಸಲು ಸಂಬಂಧಿಸಿದ ತಹಶೀಲ್ದಾರ್ / ಕಂದಾಯ ಪರೀವೀಕ್ಷರ ಪ್ರಮಾಣ ಪತ್ರ 4) ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಪ್ರಕರಣ 95(2) ರನ್ವಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ್‌ರವರು ನೀಡಿರುವ ಹಿಂಬರಹದ ಪ್ರತಿಯೊಂದಿಗೆ ಯಾವುದಾದರೂ ಒಂದು ದಾಖಲೆಯನ್ನು ನೀಡಬೇಕಾಗುತ್ತದೆ.

ಸರ್ಕಾರವು ಆಗಿಂದ್ದಾಗೆ ಹೊರಡಿಸುವ ನಿಯಮಗಳು, ಸುತ್ತೋಲೆಗಳು, ಪತ್ರಗಳಲ್ಲಿನ ನಿರ್ದೇಶನಗಳ ಅನುಸಾರ ಗ್ರಾಮ ಪಂಚಾಯತಿಗಳು ಇ–ಸ್ವತ್ತು ತಂತ್ರಾಂಶದ ಮೂಲಕ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ–9, 11ಎ ಮತ್ತು 11ಬಿ ಗಳನ್ನು ವಿತರಿಸಲು ಕ್ರಮ ಕೈಗೊಳ್ಳತಕ್ಕದ್ದು. ಇ–ಸ್ವತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳು, ಸುತ್ತೋಲೆಗಳು ಮತ್ತು ಪತ್ರಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ವೆಬ್‌ಸೈಟ್ ವಿಳಾಸ:ಡಿಜಿಟಿಡಿ.ಇಚಿಡಿ.ಟುಥಿ.ಎಟ ನಲ್ಲಿ ಅಳವಡಿಸಲಾಗುತ್ತಿದೆ.

ಆದ್ದರಿಂದ ಗ್ರಾಮ ಪಂಚಾಯತಿಗಳು ತಪ್ಪದೆ ತೆರಿಗೆ ನಿರ್ಧರಣೆ ಪಟ್ಟಿ ರಿಜಿಸ್ಟರ್ (ನಮೂನೆ–9, 11ಬಿ) ಭೂಮಿ ಮತ್ತು ಕಟ್ಟಡದ ತೆರಿಗೆಗಳ ಬೇಡಿಕೆ ಮತ್ತು ವಸೂಲಿ ರಿಜಿಸ್ಟರ್ (ನಮೂನೆ–11ಎ) ಗಳನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ಸೂಚಿಸಿದೆ. ಸದರಿ ನಮೂನೆಗಳನ್ನು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಡಿಜಿಟಲ್ ಸಹಿಯ ಮೂಲಕ ಮಾತ್ರ ವಿತರಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ಮತ್ತೊಮ್ಮೆ ತಿಳಿಸಿದೆ.

(ಕೆ. ಯಾಲಕ್ಕಿಗೌಡ)
ನಿರ್ದೇಶಕರು(ಪಂ.ರಾಜ್–1) ಹಾಗೂ ಪದನಿಮಿತ್ತ ಸರ್ಕಾರದ
ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಸುತ್ತೋಲೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 03.03.2016

ಸಂಖ್ಯೆ:ಗ್ರಾಅಪ:46:ಗ್ರಾವಿಯೋ:2015

# ಸುತ್ತೋಲೆ

**ವಿಷಯ** : ಗ್ರಾಮ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸಲು ಸ್ಪಷ್ಟೀಕರಣ ಕುರಿತು.

**ಉಲ್ಲೇಖ** :

1. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ : 23 : ಸುಗ್ರಾಯೋ : 2015, ದಿ: 13.01.2016
2. ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ : 23 : ಸುಗ್ರಾಯೋ : 2015, ಬೆಂಗಳೂರು, ದಿನಾಂಕ: 27.02.2016
3. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಜಿಲ್ಲಾ ಪಂಚಾಯತ್, ಬೀದರ್ ಇವರ ಪತ್ರ ಸಂಖ್ಯೆ : ಜಿಪಂಬೀ/ಗ್ರಾಮವಿಕಾಸ/ಸಿಆರ್–17/2014–15, ದಿನಾಂಕ: 12.02.2016
4. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಜಿಲ್ಲಾ ಪಂಚಾಯತ್, ಕೊಪ್ಪಳ ಇವರ ಪತ್ರ ಸಂಖ್ಯೆ : ಜಿಪಂಕೊ / ಆರ್ಥಿಕ / ಬಜೆಟ್ / ಗ್ರಾಮವಿಕಾಸ / 2015–16, ದಿನಾಂಕ: 12.02.2016
5. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಜಿಲ್ಲಾ ಪಂಚಾಯತ್, ಬಳ್ಳಾರಿ ಇವರ ಪತ್ರ ಸಂಖ್ಯೆ : ಜಿಪಂಬ / ಯೋವಿ / 7028 / ಗ್ರಾಮ ವಿಕಾಸ ಯೋಜನೆ / 2015–16, ದಿನಾಂಕ : 28.01.2016
6. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ : ಜಿಪಕ / ಡಿಆರ್‌ಡಿಎ / ಗ್ರಾವಿಯೋ / 2015–16, ದಿನಾಂಕ : 26.02.2016.
7. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು ಜಿಲ್ಲಾ ಪಂಚಾಯತ್, ರಾಯಚೂರು ಇವರು ದೂರವಾಣಿ ಮೂಲಕ ಕೋರಿದ ಸ್ಪಷ್ಟೀಕರಣ.

**********

ಗ್ರಾಮ ವಿಕಾಸ ಯೋಜನೆಯನ್ನು ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಉಲ್ಲೇಖ (1) & (2) ರಂತೆ ಒಟ್ಟು ರೂ. 256.59 ಕೋಟಿಗಳನ್ನು ಬಿಡುಗಡೆ ಮಾಡಿ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಮಾರ್ಗಸೂಚಿಯಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ತಿಳಿಸಲಾಗಿದೆ.

ಯೋಜನೆಯಡಿ ಕ್ರಿಯಾ ಯೋಜನೆಗಳ ಅನುಮೋದನೆ / ಅನುಷ್ಠಾನ / ಅನುದಾನ ಬಿಡುಗಡೆ ಕುರಿತಂತೆ ಕೆಲವು ಜಿಲ್ಲಾ ಪಂಚಾಯತ್‌ಗಳು ಉಲ್ಲೇಖ (3) & (4) ರಂತೆ ಸ್ಪಷ್ಟೀಕರಣ ಕೋರಿರುವುದರಿಂದ ಕೆಳಕಂಡ ಮಾರ್ಗಸೂಚಿಯ ಅಂಶಗಳಂತೆ ಯೋಜನೆಯನ್ನು ಅನುಷ್ಠಾನಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.

## I. ಗ್ರಾಮ ಪಂಚಾಯತಿ :

- **ಕ್ರಿಯಾ ಯೋಜನೆ ತಯಾರಿಕೆ ಹಾಗೂ ಅನುಮೋದನೆ :**

  ಮಾರ್ಗಸೂಚಿಯನ್ನಾಧರಿಸಿ ವಾರ್ಡ್ ಸಭೆ /ಗ್ರಾಮ ಸಭೆಯಲ್ಲಿ ಆಯ್ಕೆಮಾಡಿದ ಕಾಮಗಾರಿಗಳನ್ನು ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಅಳವಡಿಸಿ ತಯಾರಿಸಿದ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿಗಳು ಅನುಮೋದಿಸುವುದು.

- **ಅನುಷ್ಠಾನ :**

  ಗ್ರಾಮ ಪಂಚಾಯತಿಗಳು ಆಯ್ಕೆ ಮಾಡಿದ ಅನುಷ್ಠಾನ ಸಂಸ್ಥೆಯು ಪಾರದರ್ಶಕವಾಗಿ ಗುತ್ತಿಗೆದಾರರನ್ನು ನೇಮಿಸುವುದು ಮತ್ತು ಕಾರ್ಯಕ್ರಮಗಳನ್ನು ಜಾರಿಗೆ ತರುವುದು.

- **ಅನುಷ್ಠಾನ ಸಂಸ್ಥೆಗಳ ಆಯ್ಕೆ :**

  ಗ್ರಾಮ ಪಂಚಾಯಿತಿಯು ಸಿವಿಲ್ ಕಾಮಗಾರಿಗಳನ್ನು ಅನುಷ್ಠಾನಕ್ಕೆ ತರಲು ಈ ಕೆಳಕಂಡ ಸಂಸ್ಥೆಗಳಲ್ಲಿ ಒಂದನ್ನು ಆಯ್ಕೆ ಮಾಡಬಹುದು.

  1. ಸಿವಿಲ್ ಕಾಮಗಾರಿಗಳನ್ನು ಪಂ.ರಾಜ್ ಇಂ. ಇಲಾಖೆ ಮೂಲಕ ಅನುಷ್ಠಾನ ಕೈಗೊಳ್ಳತಕ್ಕದ್ದು.
  2. ಪಾರದರ್ಶಕ ವಿನಾಯಿತಿಯನ್ನು ಪಡೆದ ಕೆಆರ್ಐಡಿಎಲ್ ಸಂಸ್ಥೆಗೂ ವಹಿಸಬಹುದು.
  3. ನಿರ್ಮಿತಿ ಕೇಂದ್ರಗಳಿಗೆ ವಹಿಸಿಕೊಡುವ ಸಂದರ್ಭದಲ್ಲಿ ಆರ್ಥಿಕ ಇಲಾಖೆಯ ಅನುಮತಿ ಇಲ್ಲದೆ ಗ್ರಾಮ ವಿಕಾಸ ಯೋಜನೆಯ ಕಾಮಗಾರಿಗಳನ್ನು ವಹಿಸಿಕೊಡುವಂತಿಲ್ಲ.

- **ಆಡಳಿತಾತ್ಮಕ ಮಂಜೂರಾತಿ :**

  ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು, 2006 ರ ನಿಯಮ 80 ರಲ್ಲಿ ವಿವರಿಸಿರುವಂತೆ ಗ್ರಾಮ ಪಂಚಾಯತಿಗಳು / ಜಿಲ್ಲಾ ಪಂಚಾಯತಿಗಳು ಆಡಳಿತಾತ್ಮಕ ಮಂಜೂರಾತಿಗಳನ್ನು ಕೈಗೊಳ್ಳಬೇಕು.

- **ತಾಂತ್ರಿಕ ಮಂಜೂರಾತಿ :**

  ತಾಂತ್ರಿಕ ಮಂಜೂರಾತಿಗಳನ್ನು ಲೋಕೋಪಯೋಗಿ ಇಲಾಖೆಯ ನೀತಿ ಸಂಹಿತೆಯಂತೆ ಸಕ್ಷಮ ಪ್ರಾಧಿಕಾರಗಳ ಮಂಜೂರಾತಿಯನ್ನು ಪಡೆಯಬೇಕು.

- **ಯೋಜನಾ ಉಸ್ತುವಾರಿ ಸಮಿತಿ :**

  ಶಾಸಕರ ಅಧ್ಯಕ್ಷತೆಯಲ್ಲಿ ರಚನೆಯಾದ ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಮಿತಿ ಸಭೆಯನ್ನು ಕಡ್ಡಾಯವಾಗಿ 2 ತಿಂಗಳಿಗೊಮ್ಮೆ ನಡೆಯುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಇವರು ಕ್ರಮ ಕೈಗೊಳ್ಳವುದು. ಉಸ್ತುವಾರಿ ಸಮಿತಿಯು ಯೋಜನೆಯ ಪ್ರಗತಿಯನ್ನು ಪರಾಮರ್ಶಿಸಿ ಗ್ರಾಮದ ಅಭಿವೃದ್ಧಿಗೆ ಎಲ್ಲಾ ರೀತಿಯ ಸಲಹೆ, ಸೂಚನೆ, ಮಾರ್ಗದರ್ಶನ ಮತ್ತು ವಿವಿಧ ಯೋಜನೆಗಳಲ್ಲಿ ಲಭ್ಯವಾಗುವ ಅನುದಾನವನ್ನು ಒಗ್ಗೂಡಿಸಿ ಆಯ್ಕೆಯಾದ ಗ್ರಾಮವನ್ನು ಸರ್ವತೋಮುಖ ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದು.

## II. ತಾಲ್ಲೂಕು ಪಂಚಾಯತಿ :

- ಮಾರ್ಗಸೂಚಿಯಂತೆ ಗ್ರಾಮಾಭಿವೃದ್ಧಿ ಯೋಜನೆಯನ್ನು ತಯಾರಿಸಲು ಗ್ರಾಮ ಪಂಚಾಯತಿಗಳಿಗೆ ಸಹಕಾರ ನೀಡುವುದು. ಗ್ರಾಮ ಪಂಚಾಯತಿಗಳು ಮಾರ್ಗಸೂಚಿಯಲ್ಲಿ ಸೂಚಿಸಿರುವ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶವಿರುತ್ತದೆ.
- ಮಾರ್ಗಸೂಚಿಯಲ್ಲಿ ಇಲ್ಲದ ಕಾಮಗಾರಿಗಳನ್ನು ಫ್ಲೆಕ್ಸಿ ಫಂಡ್ ಅನುದಾನದಲ್ಲಿ ಗ್ರಾಮದ ಅವಶ್ಯಕತೆಯನ್ನಾಧರಿಸಿ ಗ್ರಾಮ ಸಭೆಗಳು ಸೂಚಿಸುವ ಕಾಮಗಾರಿಗಳನ್ನು ಕ್ರಿಯಾ ಯೋಜನೆಯಲ್ಲಿ ಅಳವಡಿಸಲು ಸೂಚಿಸುವುದು.
- ಕ್ರಿಯಾ ಯೋಜನೆಯಲ್ಲಿ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನಕ್ಕೆ ಸಂಬಂಧಿಸಿದಂತ ಕಾಮಗಾರಿಗಳನ್ನು ಪ್ರತ್ಯೇಕವಾಗಿ ನಮೂದಿಸುವುದು. ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನವನ್ನು ಯಾವುದೇ ಕಾರಣಕ್ಕೂ ಮಾರ್ಗಪಲ್ಲಟವಾಗದಂತೆ ನೋಡಿಕೊಳ್ಳುವುದು.
- ಗ್ರಾಮ ಪಂಚಾಯತಿಯು ಅನುಮೋದಿಸಿದ ಗ್ರಾಮ ವಿಕಾಸ ಯೋಜನೆಯ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ ಜಿಲ್ಲಾ ಪಂಚಾಯತಿಗಳಿಗೆ ಕೂಡಲೇ ಸಲ್ಲಿಸುವುದು.
- ಗ್ರಾಮ ವಿಕಾಸ ಯೋಜನೆಯಡಿ ಅನುಷ್ಠಾನವಾಗುವ ಕಾಮಗಾರಿಗಳನ್ನು ಕಾಲ ಕಾಲಕ್ಕೆ ಪರಿಶೀಲಿಸುವುದು.

- ಸಂಗ್ರಹಣೆಗಳಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕಾಲ ಕಾಲಕ್ಕೆ ಪರಿಶೀಲಿಸಿ ಜಿಲ್ಲಾ ಪಂಚಾಯತಿಗೆ ವರದಿ ನೀಡುವುದು.

## III. ಜಿಲ್ಲಾ ಪಂಚಾಯತಿ :

- ಸರ್ಕಾರವು ಬಿಡುಗಡೆ ಮಾಡಿದ ಹಣವನ್ನು ಜಿಲ್ಲಾ ಪಂಚಾಯತಿಗಳು ಖಜಾನೆಯಿಂದ ಸೆಳೆದು ಸಂಬಂಧಪಟ್ಟ ಗ್ರಾಮ ಪಂಚಾಯತಿಗಳು ಗ್ರಾಮ ವಿಕಾಸ ಯೋಜನೆಗಾಗಿ ತೆರೆಯಲ್ಪಟ್ಟ ಪ್ರತ್ಯೇಕ ಬ್ಯಾಂಕ್ ಖಾತೆಗೆ ವಿಳಂಬಕ್ಕೆ ಅವಕಾಶವಿಲ್ಲದೆ ಕಡ್ಡಾಯವಾಗಿ ಒಂದು ವಾರದೊಳಗಾಗಿ RTGS/EFMS ಮೂಲಕ ಪಂಚಾಯತ್‌ಗೆ ಹೊಂದಾಣಿಕೆ ಮಾಡಲು ಮತ್ತು ಗ್ರಾಮ ಪಂಚಾಯತಿ ಬ್ಯಾಂಕ್ ಅಕೌಂಟ್‌ಗೆ ಹಣ ತಲುಪಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಗ್ರಾಮಾಭಿವೃದ್ಧಿ ಯೋಜನೆಗಳನ್ನು ಸಿದ್ದಪಡಿಸಿ ಅನುಮೋದಿಸುವ ಸಂಪೂರ್ಣ ಜವಾಬ್ದಾರಿ ಗ್ರಾಮ ಪಂಚಾಯತಿಗಳದ್ದಾಗಿರುತ್ತದೆ. ಆದ್ದರಿಂದ ಗ್ರಾಮಾಭಿವೃದ್ಧಿ ಯೋಜನೆಗಳನ್ನು ಅನುಮೋದಿಸದ ಹೊರತು ಸರ್ಕಾರ ಬಿಡುಗಡೆ ಮಾಡಿದ ಹಣವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಬಾರದು ಎಂದು ಜಿಲ್ಲಾ ಪಂಚಾಯತ್‌ಗಳು ಪರಿಭಾವಿಸದೆ ಕೂಡಲೆ ಅನುದಾನವನ್ನು ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಬೇಕು.
- ಗ್ರಾಮ ಪಂಚಾಯತಿಗಳಿಗೆ ಗ್ರಾಮ ವಿಕಾಸ ಯೋಜನೆಯ ಗ್ರಾಮಾಭಿವೃದ್ಧಿ ಯೋಜನೆಯನ್ನು ಗ್ರಾಮ ಸಭೆಯಲ್ಲಿ ತಯಾರಿಸಿ ಗ್ರಾಮ ಪಂಚಾಯತಿಯು ಅನುಮೋದಿಸುವುದಕ್ಕೆ ಸೂಚಿಸುವುದು. ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯತಿಯು ಅನುಮೋದಿಸದಿರುವ ಕಾಮಗಾರಿಗಳನ್ನು ಕೈಗೊಳ್ಳುವಂತಿಲ್ಲ ಮತ್ತು ಅದಕ್ಕೆ ಹಣವನ್ನು ಪಾವತಿಸುವಂತಿಲ್ಲ.
- ಗ್ರಾಮ ಪಂಚಾಯತ್‌ಗಳು ಗ್ರಾಮ ವಿಕಾಸ ಯೋಜನೆಯ ಅನುದಾನವನ್ನು ಮಾರ್ಗಪಲ್ಲಟ ಮಾಡಿಕೊಂಡು ಬೇರೊಂದು ಯೋಜನೆಗೆ ಬಳಸಿಕೊಳ್ಳುವಂತಿಲ್ಲ. ಮಾರ್ಗಪಲ್ಲಟ ಮಾಡಿ ಯೋಜನೆಯ ಅನುಷ್ಠಾನವನ್ನು ಕುಂಠಿತಗೊಳಿಸಿದಕ್ಕಾಗಿ ಮತ್ತು ಯೋಜನೆಯ ಹಣವನ್ನು ದುರುಪಯೋಗಪಡಿಸಿಕೊಂಡ ಸಂದರ್ಭದಲ್ಲಿ ಕೂಡಲೇ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದು.
- ಗ್ರಾಮ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಿದ ಅನುದಾನವನ್ನು ಗ್ರಾಮಾಭಿವೃದ್ಧಿ ಯೋಜನೆಯಂತೆ ಸದ್ಬಳಕೆಯಾಗುತ್ತಿರುವ ಬಗ್ಗೆ ಪರಿಶೀಲಿಸಿ, ಯಾವುದೇ ಕಾರಣಕ್ಕು ಅನುದಾನವು ಗ್ರಾಮ ಪಂಚಾಯತ್‌ಗಳಲ್ಲಿ ವ್ಯಪಗತವಾಗದಂತೆ ಕ್ರಮ ವಹಿಸುವುದು.
- ಸರ್ಕಾರದಿಂದ ಬಿಡುಗಡೆ ಮಾಡುವ ಗ್ರಾಮ ವಿಕಾಸ ಯೋಜನೆಯ ಅನುದಾನವನ್ನು RTGS/EFMS ಮೂಲಕ ಗ್ರಾಮ ಪಂಚಾಯತ್‌ಗಳ ಲೆಕ್ಕಕ್ಕೆ ಹೊಂದಾಣಿಕೆ ಮಾಡುವುದು.
- ಗ್ರಾಮ ಪಂಚಾಯತ್‌ಗಳು ತಯಾರಿಸಿ ಅನುಮೋದಿಸಿದ ಗ್ರಾಮಾಭಿವೃದ್ಧಿ ಯೋಜನೆಯನ್ನು ಸಂಗ್ರಹ ಮಾಡಿ ಸರ್ಕಾರಕ್ಕೆ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು ಗ್ರಾಮ ಪಂಚಾಯತಿಗಳು ಮಾರ್ಗಸೂಚಿಯನ್ನು ಉಲ್ಲಂಘಿಸಿ ಕ್ರಿಯಾ ತಯಾರಿಸಿದ್ದಲ್ಲಿ ಅಂತಹ ಗ್ರಾಮ ಪಂಚಾಯತಿಗಳ ಕ್ರಮ ಕೈಗೊಳ್ಳುವುದು ಮತ್ತು ಮಾರ್ಗಸೂಚಿಯಂತೆ ಕ್ರಿಯಾ ಯೋಜನೆಗಳನ್ನು ತಯಾರಿಸಲು ಸೂಚಿಸುವುದು.
- ಪ್ರಗತಿಯ ವರದಿಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸುವುದು ಮತ್ತು ಕಾಲಕಾಲಕ್ಕೆ ಸರ್ಕಾರಕ್ಕೆ ಸಲ್ಲಿಸುವುದು.
- ಯೋಜನೆಯ ಪ್ರಗತಿಗಾಗಿ ಅನುಷ್ಠಾನ / ಪಂಚಾಯತ್ ಸಂಸ್ಥೆಗಳಿಗೆ ಸೂಕ್ತ ಸಲಹೆ / ನಿರ್ದೇಶನ / ಸಹಕಾರಗಳನ್ನು ನೀಡಿ ಯೋಜನೆಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದು.

**ಗ್ರಾಮ ವಿಕಾಸ ಯೋಜನೆಗೆ ಸಂಬಂಧಿಸಿದಂತೆ ಅನುಷ್ಠಾನದ ಜವಾಬ್ದಾರಿ ಹಾಗೂ ಹೊಣೆಗಾರಿಕೆ ಹೊಂದಿರುವ ವಿವಿಧ ಹಂತದ ಸಂಸ್ಥೆಗಳ ಪದಾಧಿಕಾರಿಗಳು/ ಅಧಿಕಾರಿಗಳು ಹೆಚ್ಚಿನ ವಿವರಗಳನ್ನು ಗ್ರಾಮ ವಿಕಾಸ ಮಾರ್ಗಸೂಚಿ ಪುಸ್ತಕವನ್ನು ಅವಲೋಕಿಸಲು ಸೂಚಿಸಿದೆ.**

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸುತ್ತೋಲೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 09–03–2016

ಸಂ.ಗ್ರಾಅಪ/27/ಗ್ರಾಪಂಸಿ/2015

# ಸುತ್ತೋಲೆ

**ವಿಷಯ** : ರಾಜ್ಯದಲ್ಲಿನ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆ ಪಾವತಿ ಮಾಡುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ.

**ಉಲ್ಲೇಖ** :

1. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 234 ಗ್ರಾಪಂಅ 2007 ದಿನಾಂಕ:27–03–2008.
2. ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ:ಕಾಇ 152 ಎಲ್ ಡಬ್ಲ್ಯುಎ 2008 ದಿನಾಂಕ:21–02–2011.
3. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 20 ಗ್ರಾಪಂಸಿ 2011 ದಿನಾಂಕ: 12–04–2011.
4. ಕಾರ್ಮಿಕ ಆಯುಕ್ತರು ಇವರ ಕಛೇರಿ ಆದೇಶ ಸಂಖ್ಯೆ: ಕವೇಕಾ–2/ಸಿಆರ್–11/2012–13, ದಿನಾಂಕ:16–07–2012.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯತಿ ನೌಕರರ ಬೇಡಿಕೆಗಳ ಬಗ್ಗೆ ದಿನಾಂಕ: 22–02–2016 ರಂದು ನಡೆದ ಸಭೆಯ ನಡವಳಿಗಳು.

**********

ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಶಾಸನಬದ್ಧ ಅನುದಾನದಲ್ಲಿ ಶೇ 40 ರಷ್ಟು ಅನುದಾನವನ್ನು ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ ಬಿಡುಗಡೆ ಮಾಡುವ ಬಗ್ಗೆ ತಿಳಿಸಲಾಗಿದೆ.

ಉಲ್ಲೇಖ (2) ರ ಕಾರ್ಮಿಕ ಇಲಾಖೆಯ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯಾದ್ಯಂತ ಯಾವುದೇ "ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಟ್ಟಣ ಮತ್ತು ಗ್ರಾಮ ಪಂಚಾಯತಿ ಸಂಸ್ಥೆಗಳು" ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಇಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ ಸದರಿ ಅಧಿಸೂಚನೆಯು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ನಿಗದಿಪಡಿಸಿ ಆದೇಶಿಸಿದೆ. ಅದರಂತೆ ವೇತನ ಪಾವತಿಸುವ ಬಗ್ಗೆ ಉಲ್ಲೇಖ (3) ರ ಸರ್ಕಾರದ ಪತ್ರದಲ್ಲಿ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳಿಗೆ ಪರಿಷ್ಕೃತ ವೇತನ ಪಾವತಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಪರಿಷ್ಕೃತ ವೇತನ ಪಾವತಿ ಮಾಡಲು ಬೇಕಾಗುವ ಅನುದಾನವನ್ನು ತೆರಿಗೆಗಳು ಲೈಸೆನ್ಸ್ ಶುಲ್ಕ ಇತ್ಯಾದಿಗಳನ್ನು ಬಾಕಿದಾರರಿಂದ ವಸೂಲಿ ಮಾಡಿ ಪಾವತಿಸಲು ತಿಳಿಸಲಾಗಿದೆ. ಉಲ್ಲೇಖ (4) ರ ಕಾರ್ಮಿಕ ಆಯುಕ್ತರ ಕಛೇರಿ ಆದೇಶದಲ್ಲಿ ನೇಮಕಾತಿ ಅನುಮೋದನೆಗೊಳ್ಳುವುದಕ್ಕೂ ಮತ್ತು ಕನಿಷ್ಠ

ವೇತನ ಪಾವತಿಗೆ ಯಾವುದೇ ಸಂಬಂಧವಿರುವುದಿಲ್ಲ. ಆದ ಕಾರಣ ಜಿಲ್ಲೆಗಳ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಕಾರ್ಯದರ್ಶಿಗಳಿಗೆ ಸೂಕ್ತ ತಿಳುವಳಿಕೆ ನೀಡಲು ಸೂಚಿಸುತ್ತಾ, ಕನಿಷ್ಠ ವೇತನ ಪಾವತಿ ಮಾಡದೆ ಇರುವ ಪ್ರಕರಣಗಳು ಕಂಡು ಬಂದಲ್ಲಿ ಕನಿಷ್ಠ ವೇತನ ಕಾಯ್ದೆ, 1948 ರ ಪರಿಚ್ಛೇದ 20 ರನ್ವಯ ಕ್ರಮ ತೆಗೆದುಕೊಳ್ಳಲು ಆದೇಶಿಸಿರುತ್ತಾರೆ.

ಸರ್ಕಾರವು ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸುವಂತೆ ಆಗಿಂದಾಗ್ಗೆ ನಿರ್ದೇಶನಗಳನ್ನು ನೀಡಿದ್ದರೂ ಕನಿಷ್ಠ ವೇತನವನ್ನು ನಿಗದಿತ ಸಮಯದಲ್ಲಿ ಪಾವತಿಸದಿರುವುದು ಕಂಡು ಬಂದಿರುತ್ತದೆ. ಇದಲ್ಲದೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ಗ್ರಾಮ ಪಂಚಾಯತಿ ನೌಕರರ ಬೇಡಿಕೆಗಳ ಬಗ್ಗೆ ದಿನಾಂಕ:22-02-2016 ರಂದು ನಡೆದ ಸಭೆಯಲ್ಲಿ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿ ನೌಕರರಿಗೆ ಸರ್ಕಾರ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಪಾವತಿಸುತ್ತಿಲ್ಲವೆಂಬುದಾಗಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತಿ ನೌಕರರ ಸಂಘದ ಅಧ್ಯಕ್ಷರು ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

ಮಾನ್ಯ ಸಚಿವರು ಆಯಾ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಆಯಾ ಜಿಲ್ಲೆಯ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ, ಯಾವ ಯಾವ ಗ್ರಾಮ ಪಂಚಾಯಿತಿಗಳಲ್ಲಿ ಕನಿಷ್ಠ ವೇತನ ನೀಡುತ್ತಿಲ್ಲವೆಂಬ ಬಗ್ಗೆ ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸೂಚಿಸಿದ್ದು, ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಪಾವತಿಸುತ್ತಿರುವ ಬಗ್ಗೆ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ರವರು ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡಿ ಕನಿಷ್ಠ ವೇತನ ಪಾವತಿಸದವರ ವಿರುದ್ಧ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಿರುತ್ತಾರೆ.

ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಪಂಚಾಯಿತಿಯ ಆದಾಯದಿಂದ ವೇತನ ನೀಡುತ್ತಿರುವುದಿಲ್ಲ. ಸರ್ಕಾರದ ಅನುದಾನದಲ್ಲಿ ವೇತನ ನೀಡುತ್ತಿರುವುದಾಗಿ ಕಂಡು ಬಂದಿದ್ದು, ಗ್ರಾಮ ಪಂಚಾಯತಿ ವಾರ್ಷಿಕ ಆದಾಯದ ಶೇ 40 ರಷ್ಟು ಅನುದಾನವನ್ನು ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ಉಪಯೋಗಿಸಿಕೊಳ್ಳಲು ಗ್ರಾಮ ಪಂಚಾಯತಿಗಳಿಗೆ ನಿರ್ದೇಶನ ನೀಡಲು ತೀರ್ಮಾನಿಸಲಾಗಿರುತ್ತದೆ.

ಸರ್ಕಾರದಿಂದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಶಾಸನಬದ್ಧ ಅನುದಾನದಲ್ಲಿ ಶೇ 40 ರಷ್ಟು ಅನುದಾನವನ್ನು ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ ಉಪಯೋಗಿಸುವುದರ ಜೊತೆಗೆ ಗ್ರಾಮ ಪಂಚಾಯತಿ ನೌಕರರಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ವೇತನ ಪಾವತಿಸಲು ಕೊರತೆಯಾಗುವ ವೇತನವನ್ನು ಗ್ರಾಮ ಪಂಚಾಯತಿಯ ವಾರ್ಷಿಕ ಆದಾಯದ ಶೇ 40 ರಷ್ಟನ್ನು ಗ್ರಾಮ ಪಂಚಾಯತಿ ಸಿಬ್ಬಂದಿ ವೇತನಕ್ಕಾಗಿ ಉಪಯೋಗಿಸಿಕೊಳ್ಳಲು ಗ್ರಾಮ ಪಂಚಾಯತಿಗಳು ಕ್ರಮ ವಹಿಸುವಂತೆ ತಿಳಿಸಿದೆ. ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಪಾವತಿಸಲು ಕರ್ತವ್ಯಲೋಪವೆಸಗಿರುವ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ವಿರುದ್ಧ ದುರ್ವತನೆ ಎಂದು ಪರಿಗಣಿಸಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರನ್ವಯ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು, 1957 ರನ್ವಯ ಶಿಸ್ತು ಕ್ರಮ ಜರುಗಿಸತಕ್ಕದೆಂದು ತಿಳಿಸಿದೆ.

ಗ್ರಾಮ ಪಂಚಾಯತಿ ನೌಕರರಿಗೆ ಕನಿಷ್ಠ ವೇತನ ಪಾವತಿಸುತ್ತಿರುವ ಬಗ್ಗೆ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ ರವರು ಪ್ರತಿ ತಿಂಗಳು ಪ್ರಗತಿ ಪರಿಶೀಲನೆ ಮಾಡಿ ಕನಿಷ್ಠ ವೇತನ ಪಾವತಿಸದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಹ ತಿಳಿಸಿದೆ. ಈ ವಿಷಯದಲ್ಲಿ ಯಾವುದೇ ಲೋಪ ಕಂಡು ಬಂದ ಪಕ್ಷದಲ್ಲಿ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿ (ಅಭಿವೃದ್ಧಿ) ರವರನ್ನು ವೈಯಕ್ತಿಕ ಜವಾಬ್ದಾರರನ್ನಾಗಿ ಮಾಡಲಾಗುವುದೆಂದೂ ಸಹ ತಿಳಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ

ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಜವಾಬ್ದಾರಿಗಳನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಿದೆ.

ಗ್ರಾಮ ಪಂಚಾಯತಿ ನೌಕರರ ನೇಮಕಾತಿ ಅನುಮೋದನೆಗೊಳ್ಳುವುದಕ್ಕೂ ಮತ್ತು ಕನಿಷ್ಠ ವೇತನ ಪಾವತಿಗೆ ಯಾವುದೇ ಸಂಬಂಧವಿರುವುದಿಲ್ಲವಾದ್ದರಿಂದ ರಾಜ್ಯದ ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ಅಧಿಸೂಚನೆಯಂತೆ ಕನಿಷ್ಠ ವೇತನ ಮತ್ತು ತುಟ್ಟಿಭತ್ಯೆಯನ್ನು ಪ್ರತಿ ತಿಂಗಳ 05ನೇ ತಾರೀಖಿನೊಳಗಾಗಿ ತಪ್ಪದೆ ವೇತನ ಪಾವತಿ ಮಾಡಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದೆ.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪಕಾರ್ಯದರ್ಶಿಗಳು, ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳಿಗೆ ಮತ್ತೊಮ್ಮೆ ತಿಳಿಸಿದೆ.

(ಟಿ.ವಿ. ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 09-03-2016

ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2015

# ತಿದ್ದೋಲೆ

ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿ (ಸ್ಟ್ಯಾಫಿಂಗ್ ಪ್ಯಾಟ್ರನ್) ಹಾಗೂ ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ ಹೊರಡಿಸಲಾದ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಅಪ 67 ಗ್ರಾಪಂಸಿ 2006 ದಿನಾಂಕ:04-01-2008 ರಲ್ಲಿನ ಪ್ರತಿ ಹುದ್ದೆಗೆ ಕನಿಷ್ಠ ವಿದ್ಯಾರ್ಹತೆ ಈ ಕೆಳಕಂಡಂತೆ ಇರುತ್ತದೆ.

| ಹುದ್ದೆ | ಕನಿಷ್ಠ ವಿದ್ಯಾರ್ಹತೆ |
|---|---|
| 1) ಕ್ಲರ್ಕ್ | ಪದವಿಧರರು ಮತ್ತು ಗಣಕಯಂತ್ರ ಪರಿಣಿತಿ ಹೊಂದಿದವರು |
| 2) ಕರವಸೂಲಿಗಾರ | ಪದವಿಧರರು ಮತ್ತು ಗಣಕಯಂತ್ರ ಪರಿಣಿತಿ ಹೊಂದಿದವರು |

ಎಂಬ ಕಾಲಂಗಳ ಬದಲು "ದಿನಾಂಕ: 04-01-2008 ರಿಂದ ದಿನಾಂಕ: 09-09-2014ರವರೆಗೆ ಪೂರ್ವಾನ್ವಯವಾಗಿ ಪ್ರತಿ ಹುದ್ದೆಗೆ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ" ಈ ಕೆಳಕಂಡಂತೆ ಇರುತ್ತದೆ ಎಂದು ಸೇರಿಸಿಕೊಳ್ಳುವುದು.

| ಹುದ್ದೆ | ಕನಿಷ್ಠ ವಿದ್ಯಾರ್ಹತೆ |
|---|---|
| 1) ಕ್ಲರ್ಕ್ | ಪಿಯುಸಿ ಮತ್ತು ಗಣಕಯಂತ್ರ ನಿಗದಿತ ಕೋರ್ಸ್ ಹೊಂದಿದವರು |
| 2) ಕರವಸೂಲಿಗಾರ | ಪಿಯುಸಿ ಮತ್ತು ಗಣಕಯಂತ್ರ ನಿಗದಿತ ಕೋರ್ಸ್ ಹೊಂದಿದವರು |

ಮೇಲ್ಕಂಡ ವಿದ್ಯಾರ್ಹತೆ ಹೊಂದಿರುವ ನೌಕರರುಗಳನ್ನು ಈಗಾಗಲೇ ಗ್ರಾಮ ಪಂಚಾಯತಿಗಳು ನೇಮಕ ಮಾಡಿಕೊಂಡಿದ್ದರೆ ಗ್ರಾಮ ಪಂಚಾಯತಿ ನಿರ್ಣಯ ದಿನಾಂಕದಿಂದ (ಸೇವೆಗೆ ಸೇರಿದ ದಿನಾಂಕ) ಸೇವಾ ಜೇಷ್ಠತೆಗೆ ಮಾತ್ರ ಪರಿಗಣಿಸಲು ಹಾಗೂ ತತ್ಪರಿಣಾಮವಾಗಿ ಸದರಿ ನೌಕರರು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲವೆಂದು ಷರತ್ತಿಗೊಳಪಟ್ಟು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಅನುಮೋದನೆ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2015

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 09–03–2016

## ತಿದ್ದೋಲೆ

ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿ (ಸ್ಟ್ಯಾಫಿಂಗ್ ಪ್ಯಾಟ್ರನ್) ಹಾಗೂ ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 22 ಗ್ರಾಪಂಸಿ 2014 ದಿನಾಂಕ:10–09–2014 ರಲ್ಲಿನ ಕಂಡಿಕೆ 10 ರಲ್ಲಿನ "ಭವಿಷ್ಯವರ್ತಿ ದಿನಾಂಕದಿಂದ (ಅನುಮೋದಿಸುವ ದಿನಾಂಕದಿಂದ) ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆಯನ್ನು ನೀಡತಕ್ಕದ್ದು" ಎಂಬ ಪದಗಳ ನಂತರ "ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ 10 ವರ್ಷಕ್ಕಿಂತ ಸೇವೆ ಸಲ್ಲಿಸಿರುವ ನೌಕರರ ಸೇವೆಯನ್ನು ಈಗಾಗಲೇ ಗ್ರಾಮ ಪಂಚಾಯತಿಯಿಂದ ವೇತನ ಪಡೆದಿರುವುದನ್ನು ಖಚಿತಪಡಿಸಿಕೊಂಡು, ಗ್ರಾಮ ಪಂಚಾಯತಿ ನಿರ್ಣಯ ದಿನಾಂಕದಿಂದ (ಸೇವೆಗೆ ಸೇರಿದ ದಿನಾಂಕ) ಸೇವಾ ಜೇಷ್ಠತೆಗೆ ಮಾತ್ರ ಪರಿಗಣಿಸಲು ಹಾಗೂ ತತ್ಪರಿಣಾಮವಾಗಿ ಸದರಿ ನೌಕರರು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲವೆಂದು ಷರತ್ತಿಗೊಳಪಟ್ಟು ಪರಿಗಣಿಸುವುದು" ಎಂದು ಸೇರಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸುತ್ತೋಲೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:21-03-2016

ಸಂಖ್ಯೆ: ಗ್ರಾಅಪ 63 ಜಿಪಸ 2016

# ಸುತ್ತೋಲೆ

**ವಿಷಯ** : ರಾಷ್ಟ್ರೀಯ ಪಂಚಾಯತ್ ದಿವಸ-ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸುವ ಕುರಿತು.

**ಉಲ್ಲೇಖ** : 1) ಸಮ ಸಂಖ್ಯೆಯ ಸುತ್ತೋಲೆ, ದಿನಾಂಕ: 24-02-2016.
2) ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಪತ್ರ ಸಂಖ್ಯೆ: ಜೆ 11015/57/2016-ಸಿ.ಬಿ, ದಿನಾಂಕ: 03-03-2016.
3) ಭಾರತ ಸರ್ಕಾರದ ಪತ್ರ ಸಂಖ್ಯೆ: ಎಮ್-11015-57-2016-ಸಿ.ಬಿ, ದಿನಾಂಕ:07-03-2016.

**********

ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ದಿನಾಂಕ:24-04-2016ರ ದಿವಸದಂದು "ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ್" ಆಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸುವಂತೆ ಸೂಚಿಸಿ, ಹೊರಡಿಸಲಾದ ಉಲ್ಲೇಖ (1)ರ ಸುತ್ತೋಲೆಯ ಕಡೆ ತಮ್ಮ ಗಮನ ಸೆಳೆಯಲಾಗಿದೆ. ಮುಂದುವರೆದು, ಉಲ್ಲೇಖ (3)ರಲ್ಲಿ ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಆಚರಿಸಲು ಕೇಂದ್ರ ಸರ್ಕಾರವು ಮಾರ್ಗಸೂಚಿಗಳನ್ನು ಹೊರಡಿಸಿದೆ. ಇದರನ್ವಯ ಎಲ್ಲಾ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ವಿಶೇಷವಾದ ವಾರ್ಡ್ ಮತ್ತು ಗ್ರಾಮ ಸಭೆಗಳನ್ನು ಆಯೋಜಿಸುವ ಅವಶ್ಯಕತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಏಪ್ರಿಲ್ ತಿಂಗಳಲ್ಲಿ ವಿಶೇಷ ಗ್ರಾಮ ಸಭೆಗಳನ್ನು ಆಯೋಜಿಸಲು ಈ ಕೆಳಕಂಡ ಸೂಚನೆಗಳನ್ನು ಅನುಸರಿಸುವುದು.

1. ಏಪ್ರಿಲ್ ಮೊದಲ ವಾರದಲ್ಲಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜನವಸತಿ ಸಭೆಗಳನ್ನು ಆಯೋಜಿಸುವುದು.
2. ವಾರ್ಡ್ ಮತ್ತು ಗ್ರಾಮ ಸಭೆಗಳನ್ನು ಈ ಕೆಳಕಂಡ ದಿನಾಂಕಗಳೊಳಗೆ ಕಡ್ಡಾಯವಾಗಿ ಆಯೋಜಿಸತಕ್ಕದ್ದು.

| ಕ್ರ.ಸಂ. | ಸಭೆಗಳು | ನಿಗಧಿಪಡಿಸಿದ ದಿನಾಂಕಗಳು |
|---|---|---|
| 1 | ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ವಾರ್ಡ್ ಸಭೆಗಳು | ಏಪ್ರಿಲ್ 11ರಿಂದ ಏಪ್ರಿಲ್ 16 ರೊಳಗೆ |
| 2 | ಗ್ರಾಮ ಪಂಚಾಯತಿ ಕೇಂದ್ರ ಸ್ಥಾನವನ್ನು ಹೊರತುಪಡಿಸಿ ಎಲ್ಲಾ ಕಂದಾಯ ಗ್ರಾಮಗಳಲ್ಲಿ ಗ್ರಾಮ ಸಭೆಗಳು | ಏಪ್ರಿಲ್ 18 ರಿಂದ ಏಪ್ರಿಲ್ 23ರೊಳಗೆ |
| 3 | ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನದಲ್ಲಿ ಗ್ರಾಮ ಸಭೆ ಆಯೋಜಿಸುವುದು ಮತ್ತು ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಆಚರಿಸುವುದು. | ಏಪ್ರಿಲ್ 24, 2016 |

3. ಪ್ರಸಕ್ತ ವರ್ಷ ಡಾ॥ ಬಿ.ಆರ್. ಅಂಬೇಡ್ಕರ್ ಇವರ 125ನೇ ಜನ್ಮ ವಾರ್ಷಿಕೋತ್ಸವವಾಗಿರುವುದರಿಂದ ಗ್ರಾಮ ಪಂಚಾಯತಿಗಳು ಡಾ॥ ಬಿ.ಆರ್. ಅಂಬೇಡ್ಕರ್‌ರವರ ವಿಚಾರಧಾರೆಗಳನ್ನು ಸ್ಮರಣೆ ಅಥವಾ ಚರ್ಚೆ ಮಾಡುವುದರ ಮೂಲಕ ಸಾಮಾಜಿಕ ಸಾಮರಸ್ಯ ಕಾಪಾಡಲು ಶ್ರಮಿಸುವುದು.

4. ಕ್ಷೇತ್ರ ಇಲಾಖೆಗಳ ತಳಮಟ್ಟದ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಾದ ಎ.ಎನ್.ಎಮ್, ರೋಜ್‌ಗಾರ್ ಸಹಾಯಕ, ಆಶಾ ಕಾರ್ಯಕರ್ತರು, ಅಂಗನವಾಡಿ ಕಾರ್ಯಕರ್ತರನ್ನು ಆಹ್ವಾನಿಸುವುದು.

5. ಸ್ವ-ಸಹಾಯ ಸಂಘಗಳ ಪ್ರತಿನಿಧಿಗಳನ್ನು ಆಹ್ವಾನಿಸುವುದು.

6. ಮಾನ್ಯ ವಿಧಾನ ಸಭೆ, ವಿಧಾನ ಪರಿಷತ್, ರಾಜ್ಯ ಸಭೆ, ಲೋಕ ಸಭಾ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಸದಸ್ಯರುಗಳನ್ನು ಆಹ್ವಾನಿಸುವುದು.

7. ಗ್ರಾಮ ಸಭೆಗಳತ್ತ ಗ್ರಾಮೀಣ ಜನತೆಯನ್ನು ಆಕರ್ಷಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಾಗೂ ಗ್ರಾಮೀಣ ಕ್ರೀಡಾ ಕೂಟಗಳನ್ನು ಆಯೋಜಿಸುವುದು.

8. ಆಯೋಜನೆಗೊಳ್ಳುವ ವಿಶೇಷ ಗ್ರಾಮ ಸಭೆಗಳನ್ನು ಫೋಟೊ ಮತ್ತು ವಿಡಿಯೋ ಚಿತ್ರಿಕರಿಸುವುದು ಹಾಗೂ ಇವುಗಳನ್ನು ಪಂಚತಂತ್ರ ಗಣಕ ಜಾಲದಲ್ಲಿ ತಪ್ಪದೇ ಅಳವಡಿಸುವುದು.

9. ವಿಶೇಷ ಗ್ರಾಮ ಸಭೆ ಅಯೋಜನೆಗಾಗಿ ತಗಲುವ ವೆಚ್ಚಗಳನ್ನು 14ನೇ ಹಣಕಾಸು ಆಯೋಗದ ಅನುದಾನ ಹಾಗೂ ಇತರೆ ಲಭ್ಯ ಸಂಪನ್ಮೂಲಗಳಲ್ಲಿ ಕಾಯ್ದಿರಿಸಿರುವ ಆಡಳಿತಾತ್ಮಕ ವೆಚ್ಚಗಳ ಪೈಕಿ ಭರಿಸಬಹುದು.

10. ಗ್ರಾಮ ಸಭೆ ಆಯೋಜನೆ ಸಂಬಂಧ ಸರ್ಕಾರದಿಂದ ಈ ಹಿಂದೆ ಹೊರಡಿಸಲಾಗಿರುವ ಎಲ್ಲಾ ಮಾರ್ಗಸೂಚಿಗಳ ಅನುಸಾರ ಶಿಷ್ಟಾಚಾರಗಳನ್ನು ಪಾಲಿಸಿ ವಿಶೇಷ ಗ್ರಾಮ ಸಭೆಗಳನ್ನು ಸಹ ಆಯೋಜಿಸುವುದು.

11. ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳನ್ನು ಆಯೋಜಿಸುವುದಕ್ಕೆ ಮುಂಚಿತವಾಗಿ, ಗ್ರಾಮ ಪಂಚಾಯತಿ ಸಭೆಗಳನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಗ್ರಾಮ ಪಂಚಾಯತಿ ಸಭೆಯಲ್ಲಿ-ಗ್ರಾಮ ಸಭಾ ಕಾರ್ಯಸೂಚಿ, ಗ್ರಾಮ ಸಭಾ ನಡೆಸಲು ಕೈಗೊಳ್ಳಬೇಕಾದ ಪ್ರಚಾರ ಕಾರ್ಯದ ಬಗ್ಗೆ ಅದರಲ್ಲೂ ಮನೆ ಮನೆಗೆ ಪ್ರಚಾರ ಮಾಡುವುದು, ಸಂಘಸಂಸ್ಥೆಗಳನ್ನು ಅಹ್ವಾನಿಸುವುದು, ಗ್ರಾಮ ಸಭೆಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸುವುದು, ಗ್ರಾಮ ಸಭೆಯ ನಡವಳಿಗಳನ್ನು ದಾಖಲಿಸುವುದು ಹಾಗೂ ಜಿಲ್ಲಾ, ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸುವುದು-ಈ ವಿಷಯಗಳನ್ನು ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳುವುದು.

12. ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದ್ದು, ಅದರಂತೆ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

13. ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಗ್ರಾಮ ಪಂಚಾಯತಿ ಮತ್ತು ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ತರಬೇತಿಗಳನ್ನು ಆಯೋಜಿಸಿ, ಈ ಎಲ್ಲಾ ಅಂಶಗಳನ್ನು ಚುನಾಯಿತ ಪ್ರತಿನಿಧಿಗಳಿಗೆ ಮತ್ತು ಪಂಚಾಯತಿ ಅಭಿವೃದ್ಧಿ ಆಧಿಕಾರಿಗಳಿಗೆ ತಿಳಿಸುವುದು.

14. ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆಯನ್ನು ಮಾರ್ಪಾಡಿತ ಅವಧಿಯಲ್ಲಿ ಯಾವುದೇ ಕಾರಣಕ್ಕೂ ತಪ್ಪದೇ ತಯಾರಿಸಲು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.

ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ವಿಶೇಷ ಗ್ರಾಮ ಸಭೆ ಮತ್ತು ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನು ಮೇಲೆ ಸೂಚಿಸಿರುವ ಮಾರ್ಗಸೂಚಿಗಳನ್ವಯ ಆಚರಿಸಲು ಸೂಚಿಸಿದೆ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಸಂಬಂಧಪಟ್ಟವರಿಗೆ ಸೂಕ್ತ ಸೂಚನೆಗಳನ್ನು ನೀಡಲು ಸೂಚಿಸಿದೆ.

(ಪಿ.ಶಿವಶಂಕರ್)
ನಿರ್ದೇಶಕರು(ಪಂ.ರಾಜ್-2 ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಅನುಬಂಧ–1

## ರಾಷ್ಟ್ರೀಯ ಪಂಚಾಯತ್ ದಿವಸ

## ಏಪ್ರಿಲ್ 24, 2016

### ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಕಾರ್ಯಸೂಚಿ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳು

1. ವಿಶೇಷ ಗ್ರಾಮ ಸಭೆಗಳಲ್ಲಿ ಭಾರತದ ಸಂವಿಧಾನಕ್ಕೆ ಮಾಡಲಾದ 73ನೇ ತಿದ್ದುಪಡಿಯ ಅನುಸಾರ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದ ಏಪ್ರಿಲ್ 24ನೇ ದಿವಸದ ಮಹತ್ವದ ಬಗ್ಗೆ ಚರ್ಚಿಸುವುದು.
2. ಹಿಂದಿನ ಗ್ರಾಮ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಅನುಪಾಲನಾ ವರದಿಯನ್ನು ಮಂಡಿಸುವುದು.
3. ವಿಶೇಷ ಗ್ರಾಮ ಸಭೆಗಳಲ್ಲಿ ಮುಂದಿನ 5 ವರ್ಷಗಳಲ್ಲಿ ಕೈಗೊಳ್ಳಬಹುದಾದ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಚರ್ಚಿಸುವುದು. ಈ ಸಭೆಗಳಲ್ಲಿ ಮಾನವ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯತಿಯು ಸಾಧಿಸಿರುವ ಪ್ರಗತಿಯ ಬಗ್ಗೆ ವಿಶ್ಲೇಷಣೆ ಮಾಡುವುದು ಮತ್ತು ಮುಂದೆ ಸಾಧಿಸಬೇಕಾದ ಗುರಿಗಳ ಬಗ್ಗೆ ಚರ್ಚಿಸುವುದು.
4. ಸ್ಥಳೀಯ ಆರ್ಥಿಕ ಅಭಿವೃದ್ಧಿಗಾಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಯೋಜನೆ (ನಮ್ಮ ಗ್ರಾಮ ನಮ್ಮ ಯೋಜನೆ) ಮತ್ತು ಗ್ರಾಮಗಳಲ್ಲಿ ಸಾಧಿಸಬೇಕಾಗಿರುವ ಅಭಿವೃದ್ಧಿಯ ಬಗ್ಗೆ ಚಿಂತನೆ ಮಾಡುವುದು.
5. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛತೆ, ತ್ಯಾಜ್ಯ ಮತ್ತು ಕಸ ನಿರ್ವಹಣೆಯ ಬಗ್ಗೆ ಚರ್ಚಿಸುವುದು.
6. ಗ್ರಾಮ ಪಂಚಾಯತಿಗಳಿಗೆ ಬರುವ ಅನುದಾನಗಳ ಸಮರ್ಪಕವಾದ ಬಳಸುವ ಬಗ್ಗೆ ಚರ್ಚಿಸುವುದು.
7. ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳಿಗೆ ಫಲಾನುಭವಿಗಳ ಪಟ್ಟಿಯನ್ನು ಆದ್ಯತೆಯ ಮೇರೆ ಸಿದ್ಧಪಡಿಸುವುದು.
8. ಗ್ರಾಮ ಪಂಚಾಯತಿಯಲ್ಲಿ ಕ್ರಿಯಾ ಯೋಜನೆ ಸಿದ್ಧಪಡಿಸಿದ್ದರೆ ಅದಕ್ಕೆ ಅನುಮೋದನೆ ಪಡೆಯುವುದು.
9. ಎಮ್.ಜಿ.ಎನ್.ಆರ್.ಇ.ಜಿ.ಎ, ಸ್ವಚ್ಛ ಭಾರತ್ ಮಿಷನ್, ಕೃಷಿ ಸಂಬಂಧಿತ ವಿಷಯಗಳನ್ನು ಚರ್ಚಿಸುವುದು.
10. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಎಲ್ಲಾ ಯೋಜನೆಗಳನ್ನು ಚರ್ಚಿಸುವುದು.
11. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅನುಕರಣೀಯ ಸೇವೆಗೈದಿರುವ ವ್ಯಕ್ತಿಗಳನ್ನು ಪುರಸ್ಕರಿಸುವುದು.
12. ವಾರ್ಡ್ ಮತ್ತು ಗ್ರಾಮ ಸಭೆಗಳನ್ನು ಆಯೋಜಿಸುವ ಸಂದರ್ಭದಲ್ಲಿ ಈಗಾಗಲೇ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸುವುದು.
13. ಗ್ರಾಮ ಸಭೆಯಗಳನ್ನು ಆಯೋಜಿಸಲು ಪೂರಕವಾದ ಮಾಹಿತಿಯನ್ನು ಕಲಾ ಜಾಥಾ ಮತ್ತು ಪ್ರಭಾತ್ ಪೇರಿ ಮುಖಾಂತರ ಜನರಿಗೆ ತಿಳಿಸತಕ್ಕದ್ದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿರವರು ಕೃಷಿ ಅಧಿಕಾರಿಗಳೊಂದಿಗೆ ಜಲಾಮೃತ ಯೋಜನೆಯ ರೂಪುರೇಷೆ ಕುರಿತು ಸಭೆ ಮತ್ತು ಪರಿಶೀಲನೆ ಮಾಡುತ್ತಿರುವುದು.





# KARNATAKA VIKAS : APRIL 2016

A Monthly Magazine for Rural Development and Panchayath Raj Department, Government of Karnataka

Regd. KA / BGGPO / 2531 / 2015-17, License to Post "without Prepayment" WPP - 32

RNI No. : 28103 / 1974 Total No. Pages 52, Posted at Bengaluru PSO, Mysore Road, Bengaluru on 9th, 10th, 11th of Every Month






Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Y. Mahankalappa**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : ₹10.00